ಕರ್ನಾಟಕದಲ್ಲೇ ಮೊಟ್ಟಮೊದಲ ಬಾರಿಗೆ UPSC/KAS ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ತಯಾರಿನಡೆಸಲು ರಚಿಸಿರುವಂತಹ ವೆಬ್ ಸೈಟ್

# UPSC/KAS ಪ್ರಚಲಿತ ವಿದ್ಯಮಾನಗಳ ಮಾಸಿಕ ಕೈಪಿಡಿ

## ಫೆಬ್ರುವರಿ -2019

## ಭಾಗ- 2

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

http://www.nammaiasacademy.com

DOWNLOAD OUR ANDROID MOBILE APP

http://www.nammaiasacademy.com/download-app

# POLITY

## 1. ಕುಸುಮ್ ಯೋಜನೆ

### ಪ್ರಮುಖ ಸುದ್ದಿ

- ಸರ್ಕಾರವು ರೈತರು ಸೌರ ಶಕ್ತಿಯನ್ನು ಬಳಸುವುದನ್ನು ಉತ್ತೇಜಿಸುವ ಗುರಿ ಹೊಂದಿದ 'ಕಿಸಾನ್ ಊರ್ಜಾ ಸುರಕ್ಷತಾ ಏವಂ ಉತ್ಥಾನ್ ಮಹಾಭಿಯಾನ್ (ಕುಸುಮ್)' ಯೋಜನೆಯೊಂದನ್ನು ರೂಪಿಸುತ್ತಿದೆ.

### ಮುಖ್ಯ ಅಂಶಗಳು

- ಕಿಸಾನ್ ಊರ್ಜಾ ಸುರಕ್ಷತಾ ಏವಂ ಉತ್ಥಾನ್ ಮಹಾಭಿಯಾನ್ (ಕುಸುಮ್) ಹೆಸರಿನ ಈ ಯೋಜನೆಯ ಅಡಿಯಲ್ಲಿ ರೈತರಿಗೆ ಸೌರ ಪಂಪ್‌ಗಳನ್ನು ಒದಗಿಸಲಾಗುತ್ತದೆ

### ಏನಿದು ಕುಸುಮ್ ಯೋಜನೆ?

- ಗ್ರಾಮೀಣ ಭಾಗಗಳಲ್ಲಿ 2 ಮೆ.ವ್ಯಾ ಸಾಮರ್ಥ್ಯದ ಗ್ರಿಡ್ ಸಂಪರ್ಕಿತ ಸೌರ ವಿದ್ಯುತ್ ಘಟಕಗಳ ಸ್ಥಾಪನೆ
- ವಿದ್ಯುತ್ ಗ್ರಿಡ್‌ಗೆ ಸಂಪರ್ಕವಿಲ್ಲದ ರೈತರ ನೀರಾವರಿ ಅಗತ್ಯವನ್ನು ಪೂರೈಸಲು ಆಫ್-ಗ್ರಿಡ್ ಸೌರ ವಿದ್ಯುತ್ ನೀರೆತ್ತುವ ಪಂಪ್‌ಗಳ ಸ್ಥಾಪನೆ
- ಈಗಾಗಲೇ ಗ್ರಿಡ್‌ಗೆ ಸಂಪರ್ಕಿಸಿದ ಕೃಷಿ ಪಂಪ್‌ಗಳಿಗೆ ಸೌರ ವಿದ್ಯುತ್ ಒದಗಿಸುವುದು ಮತ್ತು ಹೆಚ್ಚುವರಿ ಸೌರ ವಿದ್ಯುತ್ತನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಮಾರಲು ಅವಕಾಶ ಕಲ್ಪಿಸಿ ರೈತರ ಆದಾಯ ಹೆಚ್ಚಿಸುವುದು
- ಕೊಳವೆ ಬಾವಿಗಳ ಪಂಪ್‌ಗಳಿಗೆ ಮತ್ತು ಸರ್ಕಾರದ ಏತ ನೀರಾವರಿ ಯೋಜನೆಗಳಿಗೆ ಸೌರ ವಿದ್ಯುತ್ ಸಂಪರ್ಕ

### ಯೋಜನೆಯ ಗುರಿ:

- ಈ ಯೋಜನೆ ಅಡಿಯಲ್ಲಿ ಸರ್ಕಾರವು 27.5 ಲಕ್ಷ ಸೌರ ನೀರೆತ್ತುವ ಪಂಪ್‌ಗಳನ್ನು ಸ್ಥಾಪಿಸಲು ಯೋಜಿಸಿದೆ. ಈ ಪೈಕಿ 17.50 ಲಕ್ಷ ಸ್ವತಂತ್ರ ಸೌರ ಪಂಪ್ ಗಳು, 10 ಲಕ್ಷ ಗ್ರಿಡ್ ಸಂಪರ್ಕಿತ ಪಂಪ್‌ಗಳನ್ನು ಸ್ಥಾಪಿಸಲಾಗುತ್ತದೆ. 0.5 ರಿಂದ 2 ಮೆ.ವ್ಯಾವರೆಗಿನ ಸಾಮರ್ಥ್ಯದ ಘಟಕ ಗಳನ್ನು ಸ್ಥಾಪಿಸಲು ರೈತರಿಗೆ ನೆರವಾಗುತ್ತದೆ. ಅಲ್ಲದೆ 50 ಸಾವಿರ ಗ್ರಿಡ್ ಸಂಪರ್ಕಿತ ಕೊಳವೆ ಬಾವಿಗಳು ಮತ್ತು ಏತ ನೀರಾವರಿ ಯೋಜನೆಗಳನ್ನು ಅನಾವರ ಣಗೊಳಿಸಲೂ ಅನುವು ಮಾಡುತ್ತದೆ. ಇನ್ನೊಂದೆಡೆ ಜಲ ವಿದ್ಯುತ್ ನೀತಿಯನ್ನು ಜಾರಿಗೊಳಿಸಲೂ ಸರ್ಕಾರ ನಿರ್ಧರಿಸಿದೆ.

## 2.ಅನಿವಾಸಿ ಭಾರತೀಯರ ವಿವಾಹ ನೋಂದಣಿ ವಿಧೇಯಕ 2019 ಸೇರ್ಪಡೆಗೆ ಸಂಪುಟದ ಅನುಮೋದನೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಅವರ ನಡೆದ ಕೇಂದ್ರ ಸಂಪುಟ ಸಭೆಯು ಭಾರತೀಯ ನಾಗರಿಕರು ಅದರಲ್ಲಿಯೂ ಮಹಿಳೆಯರು, ಅವರ ಅನಿವಾಸಿ ಭಾರತೀಯ ಪತಿಯಿಂದಾಗಿ ಶೋಷಣೆಗೆ ಒಳಗಾಗುವುದನ್ನು ತಪ್ಪಿಸಲು ಅವರಿಗೆ ಹೆಚ್ಚಿನ ರಕ್ಷಣೆ ಒದಗಿಸುವ ಮತ್ತು ಉತ್ತರದಾಯಿತ್ವ ರೂಪಿಸುವ ಉದ್ದೇಶದಿಂದ ಅನಿವಾಸಿ ಭಾರತೀಯರ (ಎನ್.ಆರ್.ಐ.) ವಿವಾಹ ನೋಂದಣಿ ವಿಧೇಯಕ 2019 ಸೇರ್ಪಡೆಗೆ ಅನುಮೋದನೆ ನೀಡಿತು.

### ಮುಖ್ಯ ಅಂಶಗಳು

- ಈ ತಿದ್ದುಪಡಿ ವಿಧೇಯಕವು ತಪ್ಪು ಮಾಡುವ ಎನ್.ಆರ್.ಐ. ಪತಿ/ಪತ್ನಿಗೆ ತಡೆ ಹಾಕುವ ಕಾನೂನು ಚೌಕಟ್ಟನ್ನು ಒದಗಿಸುತ್ತದೆ ಮತ್ತು ಎನ್.ಆರ್.ಐ. ಯನ್ನು ಮದುವೆಯಾದ ಭಾರತೀಯ ನಾಗರಿಕರ ಅದರಲ್ಲೂ ಮಹಿಳೆಯರ ಶೋಷಣೆ ವಿರುದ್ಧ ರಕ್ಷಣೆಯನ್ನು ಒದಗಿಸುತ್ತದೆ ಹಾಗು ಉತ್ತರದಾಯಿತ್ವವನ್ನು ರೂಪಿಸುತ್ತದೆ.
- ಈ ವಿಧೇಯಕ ಅಂಗೀಕಾರವಾದಲ್ಲಿ ಎನ್.ಆರ್.ಐ.ಗಳು ಮಾಡಿಕೊಳ್ಳುವ ಮದುವೆಗಳು ಭಾರತದಲ್ಲಿ ಅಥವಾ ವಿದೇಶದಲ್ಲಿರುವ ಭಾರತೀಯ ಸಂಸ್ಥೆಗಳಲ್ಲಿ ನೊಂದಾಯಿಸಲ್ಪಡುತ್ತವೆ, ಹಾಗು ಅವಶ್ಯ ಬದಲಾವಣೆಗಳನ್ನು ಈ ಕೆಳಗಿನ ಅಂಶಗಳಲ್ಲಿ ಮಾಡಿಕೊಳ್ಳಲಾಗುತ್ತದೆ.

  1.ಪಾಸ್ ಪೋರ್ಟ್ ಕಾಯ್ದೆ, 1967; ಮತ್ತು

  2.ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಗೆ ಸೆಕ್ಷನ್ 86 A ಸೇರ್ಪಡೆ.

### ಪ್ರಮುಖ ಪರಿಣಾಮ:

- ಭಾರತದಲ್ಲಿ ನ್ಯಾಯಾಲಯದ ಕಲಾಪಗಳ ನ್ಯಾಯಾಂಗ ಸಮನ್ಸ್ ಗಳನ್ನು ತಲುಪಿಸುವುದು ಪ್ರಮುಖ ಸಮಸ್ಯೆ, ಅದನ್ನು ಈ ವಿಧೇಯಕವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ , 1973 ಕ್ಕೆ ತಿದ್ದುಪಡಿ ತರುವ ಮೂಲಕ ನಿಭಾಯಿಸುತ್ತದೆ.
- ಹೀಗೆ ಈ ವಿಧೇಯಕ ಎನ್.ಆರ್.ಐ. ಗಳನ್ನು ಮದುವೆಯಾದ ಭಾರತೀಯ ನಾಗರಿಕರಿಗೆ ದೊಡ್ಡ ಪ್ರಮಾಣದ ರಕ್ಷಣೆಯನ್ನು ಒದಗಿಸುತ್ತದೆ, ಪತಿ-ಪತ್ನಿ ಕಿರುಕುಳವನ್ನು ತಡೆಗಟ್ಟುತ್ತದೆ. ಈ ವಿಧೇಯಕ ಎನ್.ಆರ್.ಐ. ಯನ್ನು ಮದುವೆಯಾದ ಭಾರತೀಯ ಮಹಿಳೆಗೆ ವಿಶ್ವದಾದ್ಯಂತ ಪ್ರಯೋಜನಕಾರಿಯಾಗಲಿದೆ.

## 3. ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗ

### ಪ್ರಮುಖ ಸುದ್ದಿ

- ಕೇಂದ್ರ ಸಂಪುಟವು ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ (ಎನ್.ಸಿ.ಎಸ್.ಕೆ.) ಅವಧಿಯನ್ನು 31.3.2019 ರಿಂದ ಮತ್ತೆ ಮೂರು ವರ್ಷಗಳ ಅವಧಿಗೆ ವಿಸ್ತರಿಸುವುದಕ್ಕೆ ಅನುಮೋದನೆ ನೀಡಿತು.

### ಮುಖ್ಯ ಅಂಶಗಳು

- ಎನ್.ಸಿ.ಎಸ್.ಕೆ. ಕಾಯ್ದೆ 1993 ರ ಅಡಿಯಲ್ಲಿರುವ ಪ್ರಸ್ತಾವನೆಗಳ ಅನ್ವಯ 1993 ರಲ್ಲಿ ಎನ್.ಸಿ.ಎಸ್.ಕೆ.ಯನ್ನು ಮೊದಲಿಗೆ 31.3.1997 ರವರೆಗಿನ ಮೂರು ವರ್ಷಗಳ ಅವಧಿಗೆ ಸ್ಥಾಪಿಸಲಾಗಿತ್ತು. ಬಳಿಕ ಕಾಯ್ದೆಯ ಮಾನ್ಯತಾ ಅವಧಿಯನ್ನು 31.3.2002 ರವರೆಗೆ ಹಾಗೂ ಆ ಬಳಿಕ 29.2.2004 ರವರೆಗೆ ವಿಸ್ತರಿಸಲಾಯಿತು. ಎನ್.ಸಿ.ಎಸ್.ಕೆ ಕಾಯ್ದೆ 29.2.2004 ರಿಂದ ಅಸ್ತಿತ್ವ ಕಳೆದುಕೊಂಡಿತ್ತು. ಆ ಬಳಿಕ ಎನ್.ಸಿ.ಎಸ್.ಕೆ.ಯ ಅವಧಿಯನ್ನು ಕಾಲ ಕಾಲಕ್ಕೆ ಶಾಸನೇತರ ಮಂಡಳಿಯಾಗಿ ವಿಸ್ತರಿಸಲಾಗಿತ್ತು. ಹಾಲಿ ಆಯೋಗದ ಅವಧಿಯು 31.3.2019 ರವರೆಗಿದೆ.

### ಪ್ರಮುಖ ಪರಿಣಾಮ:

- ಈ ಪ್ರಸ್ತಾವನೆಯ ಪ್ರಮುಖ ಫಲಾನುಭವಿಗಳೆಂದರೆ ಸಫಾಯಿ ಕರ್ಮಚಾರಿಗಳು ಮತ್ತು ದೇಶದಲ್ಲಿ ದೈಹಿಕ ಶ್ರಮದ ಮೂಲಕ ಕೊಳಚೆ ಶುದ್ಧೀಕರಣ , ಶೌಚ ಗುಂಡಿಗಳ ದುರಸ್ತಿ ಕಾರ್ಯದಲ್ಲಿ ತೊಡಗಿರುವವರು. ಎನ್.ಸಿ.ಎಸ್.ಕೆ.ಯು ಅವರ ಕಲ್ಯಾಣ ಮತ್ತು ಅಭಿವೃದ್ಧಿಗೆ ಕೆಲಸ ಮಾಡುತ್ತದೆ.

### ಹಿನ್ನೆಲೆ:

- ಎನ್.ಸಿ.ಎಸ್.ಕೆ. ಯು ಸಫಾಯಿ ಕರ್ಮಚಾರಿಗಳ ನಿರ್ದಿಷ್ಟ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸರಕಾರಕ್ಕೆ ಶಿಫಾರಸುಗಳನ್ನು ಮಾಡುತ್ತದೆ. ಅದು ಸಫಾಯಿ ಕರ್ಮಚಾರಿಗಳಿಗೆ ಈಗ ಇರುವ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವುದಲ್ಲದೆ, ಅವುಗಳ ಅಧ್ಯಯನ ನಡೆಸುತ್ತದೆ. ನಿರ್ದಿಷ್ಟ ಕುಂದುಕೊರತೆ ಇತ್ಯಾದಿಗಳ ತನಿಖೆ ನಡೆಸುತ್ತದೆ.
- ಜಲಗಾರರಾಗಿ/ ತೋಟಿಯಾಗಿ ನೇಮಕ ಮಾಡಿ ತ್ಯಾಜ್ಯ ಚರಂಡಿಗಳನ್ನು ಮಾನವ ಶ್ರಮದ ಮೂಲಕ ನಿರ್ವಹಿಸುವ ಉದ್ಯೋಗದ ಮೇಲೆ ಪ್ರತಿಬಂಧ ಹೇರುವ ಪ್ರಸ್ತಾವನೆಗಳ ಅನ್ವಯ ಮತ್ತು ಅವರ ಪುನರ್ವಸತಿ ಕಾಯ್ದೆ ಅನ್ವಯ ಎನ್.ಸಿ.ಎಸ್.ಕೆ. ಗೆ ಕಾಯ್ದೆಯ ಅನುಷ್ಠಾನದ ಮತ್ತು ನಿಗಾ ವಹಿಸುವ ಹೊಣೆಯನ್ನು ನೀಡಲಾಗಿದೆ ಮತ್ತು ಅದರ ಯಶಸ್ವೀ ಜಾರಿಯ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಸಲಹೆಯನ್ನು ಅದು ನೀಡಬಹುದಾಗಿದೆ.
- ಜೊತೆಗೆ ಕಾಯ್ದೆಯ ಪ್ರಸ್ತಾವನೆಗಳನ್ನು ಜಾರಿಗೊಳಿಸದಿರುವ ಬಗ್ಗೆ ದೂರುಗಳನ್ನು ತನಿಖೆ ಮಾಡಬಹುದಾಗಿದೆ. ಸರಕಾರವು ಸಫಾಯಿ ಕರ್ಮಚಾರಿಗಳ ಅಭಿವೃದ್ಧಿಗಾಗಿ ಅನೇಕ ಕ್ರಮಗಳನ್ನು ಕೈಗೊಂಡಿದೆಯಾದರೂ ಸಾಮಾಜಿಕ –ಆರ್ಥಿಕ ಮತ್ತು ಶಿಕ್ಷಣಕ್ಕೆ ಸಂಬಂಧಿಸಿ ಅವರು ಇನ್ನೂ

ಹಿಂದುಳಿದಿದ್ದು ಅದಿನ್ನೂ ನಿವಾರಣೆಯಾಗಬೇಕಾಗಿದೆ. ಜೊತೆಗೆ ಮಾನವ ಜಾಡಮಾಲಿ/ಜಲಗಾರರ ನೇಮಕ ಮಾಡುವ ಪದ್ಧತಿ ದೇಶದಲ್ಲಿ ಇನ್ನೂ ಚಾಲ್ತಿಯಲ್ಲಿದೆ ಮತ್ತು ಅದರ ಸಂಪೂರ್ಣ ತೊಡೆದು ಹಾಕುವಿಕೆ ಸರಕಾರಕ್ಕೆ ಇನ್ನೂ ಗರಿಷ್ಟ ಆದ್ಯತೆಯ ವಿಷಯವಾಗಿದೆ.

- ಆದುದರಿಂದ , ಸರಕಾರವು ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕಾಗಿ ಸರಕಾರದ ವಿವಿಧ ಉಪಕ್ರಮಗಳು ಮತ್ತು ಮಧ್ಯಪ್ರವೇಶಗಳ ಮೇಲೆ ನಿರಂತರ ಉಸ್ತುವಾರಿ ವಹಿಸುವುದು ಮತ್ತು ದೇಶದಲ್ಲಿ ಮಾನವ ಜಾಡಮಾಲಿಗಳ ಬಳಕೆಯ ಪದ್ಧತಿಯನ್ನು ಸಂಪೂರ್ಣ ತೊಡೆದು ಹಾಕುವ ಗುರಿಯನ್ನು ಸಾಧಿಸಲು ನಿರಂತರ ನಿಗಾ ಆವಶ್ಯಕ ಎಂದು ಸರಕಾರ ಭಾವಿಸಿದೆ. ಆದುದರಿಂದ , ಸಂಪುಟವು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ (ಎನ್.ಸಿ.ಎಸ್.ಕೆ.) ಅವಧಿಯನ್ನು 31.3.2019 ರಿಂದ ಮತ್ತೆ ಮೂರು ವರ್ಷ ವಿಸ್ತರಿಸುವ ಪ್ರಸ್ತುತ ಪ್ರಸ್ತಾವನೆಯನ್ನು ಅಂಗೀಕರಿಸಿತು.

## 4. ಹೆಸರಿನ ಜತೆ ಭಾರತರತ್ನ, ಪದ್ಮ ಪ್ರಶಸ್ತಿ ಬಳಸುವಂತಿಲ್ಲ-ಕೇಂದ್ರ ಸರಕಾರ

### ಪ್ರಮುಖ ಸುದ್ದಿ

- ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳೆನಿಸಿರುವ ಭಾರತ ರತ್ನ ಹಾಗೂ ಪದ್ಮ ಪ್ರಶಸ್ತಿಗಳು ಗೌರವಗಳೇ ಹೊರತು ಬಿರುದುಗಳಲ್ಲ. ಹಾಗಾಗಿ ಹೆಸರಿನ ಜತೆ ಅವುಗಳನ್ನು ಬಳಸುವಂತಿಲ್ಲ ಎಂದು ಕೇಂದ್ರ ಸರಕಾರ ಹೇಳಿದೆ.

### ಮುಖ್ಯ ಅಂಶಗಳು

- ಒಂದು ವೇಳೆ ದುರ್ಬಳಕೆ ಮಾಡಿಕೊಂಡರೆ ಪ್ರಶಸ್ತಿಗಳನ್ನು ಹಿಂಪಡೆಯಲಾಗುವುದು ಎಂದು ಎಚ್ಚರಿಸಿದೆ.
- ಭಾರತ ರತ್ನ, ಪದ್ಮ ವಿಭೂಷಣ, ಪದ್ಮ ಭೂಷಣ ಹಾಗೂ ಪದ್ಮಶ್ರೀ ಪ್ರಶಸ್ತಿಗಳು ಸೇವೆ ಹಾಗೂ ಸಾಧನೆಗೆ ಸಂದ ಗೌರವಗಳು. ಅವು ಬಿರುದುಗಳಲ್ಲ. ಈ ಹಿನ್ನೆಲೆಯಲ್ಲಿ ಅವುಗಳನ್ನು ಪ್ರಶಸ್ತಿ ಪುರಸ್ಕೃತರ ಹೆಸರಿನ ಜತೆ ಸೇರಿಸಿ ಬಳಸುವಂತಿಲ್ಲ. ಸಂವಿಧಾನದ 18(1) ವಿಧಿಯಲ್ಲಿ ಈ ಬಗ್ಗೆ ಸ್ಪಷ್ಟತೆ ಇದೆ.

### ಸಂವಿಧಾನದ ವಿಧಿ 18 ಏನು ಹೇಳುತ್ತದೆ ?

- ವಿಧಿ 18 ಮಿಲಿಟರಿ ಮತ್ತು ಶೈಕ್ಷಣಿಕ ವ್ಯತ್ಯಾಸವನ್ನು ಹೊರತುಪಡಿಸಿ ಯಾವುದೇ ಶೀರ್ಷಿಕೆಯನ್ನು ದೃಢೀಕರಿಸದಂತೆ ರಾಜ್ಯವನ್ನು ತಡೆಯುತ್ತದೆ.
- ವಿಧಿ 18 ಭಾರತೀಯ ನಾಗರಿಕರು ಯಾವುದೇ ವಿದೇಶಿ ರಾಜ್ಯದಿಂದ ಪ್ರಶಸ್ತಿಗಳನ್ನು ಸ್ವೀಕರಿಸದಂತೆ ನಿಷೇಧಿಸುತ್ತದೆ.

- ರಾಜ್ಯದಲ್ಲಿ ಲಾಭದ ಕಚೇರಿಯನ್ನು ಹೊಂದಿರುವ ವಿದೇಶಿ ಪ್ರಜೆಗಳು ಅಧ್ಯಕ್ಷರ ಒಪ್ಪಿಗೆಯೊಂದಿಗೆ ವಿದೇಶಿ ಸರ್ಕಾರದಿಂದ ಪ್ರಶಸ್ತಿಗಳನ್ನು ಸ್ವೀಕರಿಸಬಹುದು.
- ನಿಜವಾದ ಪ್ರಜಾಪ್ರಭುತ್ವದಲ್ಲಿ, ಒಂದೇ ಸಮಾಜದಲ್ಲಿ ಕೃತಕ ಭಿನ್ನತೆಗಳಿಗೆ ಸ್ಥಳಾವಕಾಶವಿಲ್ಲ.
- ರಾಯ್ ಬಹದ್ದೂರ್, ಸವಾಯಿ, ರಾಯ್ ಸಹಬ್, ಜಮೀನ್ದಾರ, ತಾಲುಕ್ದಾರ್ ಮುಂತಾದ ವಿಷಯಗಳು ಮಧ್ಯಕಾಲೀನ ಮತ್ತು ಬ್ರಿಟಿಷ್ ಭಾರತದಲ್ಲಿ ಪ್ರಚಲಿತವಾಗಿದೆ. ಈ ಎಲ್ಲ ಶೀರ್ಷಿಕೆಗಳನ್ನು ಸಂವಿಧಾನದ 18 ನೇ ಲೇಖನದಿಂದ ರದ್ದುಪಡಿಸಲಾಯಿತು.

## 5. ಮಾಧ್ಯಮಗಳಲ್ಲಿ 'ದಲಿತ' ಪದ ಬಳಕೆ ಪ್ರಶ್ನಿಸಿದ ಮನವಿ ಸ್ವೀಕರಿಸಲು ಸುಪ್ರೀಂ ನಿರಾಕರಣೆ

### ಪ್ರಮುಖ ಸುದ್ದಿ

- ಸಾರ್ವಜನಿಕ ಚರ್ಚೆಯ ಸಂದರ್ಭ ಮಾಧ್ಯಮಗಳು 'ದಲಿತ' ಪದ ಬಳಕೆ ನಿಷೇಧಿಸಿ ಮಾಹಿತಿ ಹಾಗೂ ಪ್ರಸಾರ ಸಚಿವಾಲಯ ನೀಡಿದ ಮಾದ್ಯಮ ಸಲಹೆ ಪ್ರಶ್ನಿಸಿ ಗುಂಪೊಂದು ಸಲ್ಲಿಸಿದ ಮನವಿಯನ್ನು ಸ್ವೀಕರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

### ಮುಖ್ಯ ಅಂಶಗಳು

- ಸಾರ್ವಜನಿಕ ಚರ್ಚೆಯಿಂದ 'ದಲಿತ' ಪದವನ್ನು ಸಚಿವಾಲಯ ನಿಷೇಧಿಸುವ ಮೂಲಕ ಈ ಪದ ಅವಮಾನಕರ ಎಂಬ ತಪ್ಪು ಭಾವನೆ ಹುಟ್ಟು ಹಾಕಿದೆ ಎಂದು ಮನವಿದಾರರು ಹೇಳಿದ್ದಾರೆ. ತಮ್ಮ ಅನನ್ಯತೆ ಅಭಿವ್ಯಕ್ತಿಸುವ ಹಾಗೂ ನಿರ್ಧರಿಸುವ ಪರಿಶಿಷ್ಟ ಜಾತಿಯ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ ಎನ್ನುವ ಕಾರಣಕ್ಕೆ ಸಚಿವಾಲಯದ ಆದೇಶವನ್ನು ಆಕ್ಷೇಪಿಸಿ ಕೆಲವು ದಲಿತರು ಮನವಿ ಸಲ್ಲಿಸಿದ್ದರು. ಈ ಕುರಿತು ಮಾಹಿತಿ ಹಾಗೂ ಪ್ರಸಾರ ಸಚಿವಾಲಯವನ್ನು ಸಂಪರ್ಕಿಸಲು ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯಿ ನೇತೃತ್ವದ ಪೀಠ ಅವಕಾಶ ನೀಡಿದೆ.
- ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರನ್ನು ಉಲ್ಲೇಖಿಸುವಾಗ 'ದಲಿತ' ಪದ ಬಳಸಬೇಡಿ ಎಂದು ಕಳೆದ ವರ್ಷ ಆಗಸ್ಟ್ 7ರಂದು ಮಾಹಿತಿ ಹಾಗೂ ಪ್ರಸಾರ ಸಚಿವಾಲಯ ಮಾದ್ಯಮಗಳಿಗೆ ಸಲಹೆ ನೀಡಿತ್ತು. ಈ ವಿಷಯದಲ್ಲಿ ಮಾದ್ಯಮಗಳಿಗೆ ನಿರ್ದೇಶನಗಳನ್ನು ನೀಡಲು ಪರಿಶೀಲನೆ ನಡೆಸಿ ಎಂದು ಸಚಿವಾಲಯಕ್ಕೆ ಬಾಂಬೆ ಹೈಕೋರ್ಟ್ ಸೂಚಿಸಿದ ಬಳಿಕ ಸಚಿವಾಲಯ ಈ ನಿರ್ದೇಶನ ನೀಡಿತ್ತು.

### 'ದಲಿತ' ಪದ ಅಸ್ಮಿತೆಯೋ? ಅವಮಾನವೋ?

- 'ದಲಿತ' ಪದ ಬಳಕೆಗೆ ಸಂಬಂಧಿಸಿ ಪರ-ವಿರೋಧ ಅಭಿಪ್ರಾಯಗಳಿವೆ. ಶತಮಾನಗಳಿಂದಲೂ ಮೇಲ್ವರ್ಗದ ದಬ್ಬಾಳಿಕೆ, ದೌರ್ಜನ್ಯಕ್ಕೆ ತುತ್ತಾಗಿ, ಎಲ್ಲ ಸೌಲಭ್ಯಗಳಿಂದ ವಂಚಿತರಾದವರಿಗೆ ದಲಿತ ಎಂಬ ಪದವೇ ಅಸ್ಮಿತೆಯನ್ನು ತಂದುಕೊಟ್ಟಿದೆ ಎಂಬುದು ಒಂದು ವಾದವಾದರೆ, ದಲಿತ ಪದ ಬಳಕೆಯೇ ಗ್ರಾಮೀಣ ಪ್ರದೇಶಗಳಲ್ಲಿ ನಿತ್ಯ ಹಿಂಸೆಗೆ ಕಾರಣವಾಗುತ್ತಿದೆ. ಅದರ ಬಳಕೆ ನಿಲ್ಲಬೇಕು.

ದಲಿತ ಎಂದರೆ ಅದೇನೂ ಗೌರವ ಸೂಚಕವಲ್ಲ. ಬದಲಿಗೆ ದಬ್ಬಾಳಿಕೆಗೆ ಒಳಗಾದವರು, ಅವಮಾನದ ಸೂಚ್ಯಾರ್ಥವನ್ನು ವಾಚ್ಯವಾಗಿಸುವ ಪದವಾಗಿದೆ ಎಂಬುದು ಮತ್ತೊಂದು ವಾದ.

- ಕೆಲವು ಪದಗಳು ಆಯಾ ಕಾಲಘಟ್ಟದಲ್ಲಿ ಜನಪ್ರಿಯಗೊಂಡು, ಉದ್ದೇಶಿತ ಗುರಿಯನ್ನು ತಲುಪಲು ನೆರವಾಗುತ್ತವೆ. ಆದರೆ, ಅದೇ ಪದವು ಮತ್ತೊಂದು ಕಾಲಘಟ್ಟದಲ್ಲಿ ತನ್ನ ಮೂಲ ಉದ್ದೇಶವನ್ನು ಕಳೆದುಕೊಂಡು ರೂಪಾಂತರಗೊಳ್ಳುತ್ತದೆ ಮತ್ತು ಅದರ ಅರ್ಥ ವಿಸ್ತಾರವು ಮತ್ತೊಂದು ಮಗ್ಗಲಿಗೆ ಹೊರಳುತ್ತದೆ. ಈಗ 'ದಲಿತ' ಎಂಬ ಪದ ಕೂಡ ಅಂಥದ್ದೇ ಸಂದಿಗ್ಧ ಸ್ಥಿತಿಯಲ್ಲಿದೆ.
- ಖಂಡಿತವಾಗಿಯೂ, ಈ ಹಿಂದಿನ ದಿನಗಳಲ್ಲಿ 'ದಲಿತ' ಎಂಬ ಪದ ಶೋಷಿತರು, ಕೆಳವರ್ಗದವರು, ದಮನಿತರು, ಅಲಕ್ಷ್ಯಕ್ಕೊಳಗಾದವರನ್ನು ಪ್ರತಿನಿಧಿಸುವ ಪದವಾಗಿಯೇ ಬಳಕೆಯಾಗಿದೆ; ಇದರಲ್ಲೇನೂ ಅನುಮಾನವಿಲ್ಲ. ಆದರೆ, ಅದೇ ಪದ ಇಂದಿನ ಕಾಲಘಟ್ಟದಲ್ಲಿ ಅದರ ಅರ್ಥ ವಿಸ್ತಾರ ಹಾಗೆಯೇ ಉಳಿದುಕೊಂಡಿದೆಯೇ ಎಂದು ಪ್ರಶ್ನಿಸಿದರೆ ಉತ್ತರ "ಹೌದು" ಎಂದು ಹೇಳುವುದು ತೀರಾ ಕಷ್ಟ. ಯಾಕೆಂದರೆ, ಅದು ಇಂದು ಕೇವಲ ಶೋಷಿತರನ್ನು ಪ್ರತಿನಿಧಿಸುವ ಪದವಾಗಿ ಪ್ರಯೋಗವಾಗುತ್ತಿಲ್ಲ. ಬದಲಿಗೆ ನಿರ್ದಿಷ್ಟ ಜಾತಿ ಸೂಚಕ ಎನ್ನುವಷ್ಟರ ಮಟ್ಟಿಗೆ ಬಳಕೆಯಾಗುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಜಕೀಯವಾಗಿ ಹೆಚ್ಚುಚ್ಚು ಬಳಕೆಯಾಗುತ್ತಿದೆ. ಈ ಕಾಲದ ರಾಜಕಾರಣದಲ್ಲಿ 'ದಲಿತ' ಎಂಬುದು ಹಾಸಹೊಕ್ಕಾಗಿದೆ. ದಲಿತರ ಹೆಸರು ಹೇಳಿಕೊಂಡು ರಾಜಕೀಯ ಲಾಭ ಮಾಡಿಕೊಳ್ಳುವ ಸುಲಭದ ಆಲೋಚನೆ ಎಲ್ಲ ಪಕ್ಷ ಗಳಿಗೂ ಇದೆ. ಈ ಮಾತು ಯಾವುದೇ ಒಂದು ಪಕ್ಷ ಕ್ಕೂ ಸೀಮಿತವಾಗಿಲ್ಲ. ಹೀಗಿರುವಾಗ, ಒಂದು ಕಾಲಘಟ್ಟದಲ್ಲಿ ನಿಜ ಅರ್ಥ, ಪ್ರಾಮಾಣಿಕ ಉದ್ದೇಶದ ಸ್ವರೂಪ ಹೊಂದಿದ್ದ ದಲಿತ ಪದ ಇಂದು ಸಂಕುಚಿತಗೊಂಡು, ಅರ್ಥ ವಿಸ್ತಾರವನ್ನು ಕಳೆದುಕೊಳ್ಳುತ್ತಿರುವಾಗ,ದಯನೀಯ ಸ್ಥಿತಿಯಲ್ಲಿರುವವರು ಎಂಬರ್ಥ ಬರುವ ರೀತಿಯಲ್ಲಿ, ಕನಿಕರದ ದೃಷ್ಟಿಗೆ ಸೀಮಿತವಾಗಿ ಆ ಪದ ಬಳಕೆ ಸರಿಯೇ?ಈ ಬಗ್ಗೆ ವ್ಯಾಪಕ ಚರ್ಚೆ ಅಗತ್ಯ ಮತ್ತು ಅದು ಇಂದಿನ ಅಗತ್ಯವೂ ಹೌದು.
- ನಮಗೆಲ್ಲರಿಗೂ ಸಂವಿಧಾನವೇ ಪವಿತ್ರಗ್ರಂಥ. ಅಂಥ ಸಂವಿಧಾನದಲ್ಲೂ ದಲಿತ ಎಂಬ ಪದ ಬಳಕೆಯಾಗಿಲ್ಲ. ಸಂವಿಧಾನದ ಆರ್ಟಿಕಲ್ 341ರಲ್ಲಿ 'ಪರಿಶಿಷ್ಟ ಜಾತಿ'(ಶೆಡ್ಯೂಲ್ಡ್ ಕಾಸ್ಟ್) ಬಳಸಲಾಗಿದೆಯೇ ಹೊರತು ದಲಿತ ಎಂದಲ್ಲ. ಹಾಗಾಗಿ ಯಾವುದೇ ಕಾನೂನಿನ ಬೆಂಬಲವೂ ಅದಕ್ಕಿಲ್ಲ. ಹೀಗಿದ್ದಾಗ್ಯೂ ನಾವು ದಲಿತ ಎಂಬುದೇ ನಮ್ಮ ಅಸ್ಮಿತೆಯಾಗಿದೆ ಅದನ್ನು ನಾವು ಬಳಸಿಯೇ ಬಳಸುತ್ತೇವೆ ಎಂಬುದರಲ್ಲಿ ಏನಾದರೂ ಅರ್ಥವಿದೆಯೇ ,
- 2008ರಲ್ಲಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ(ನ್ಯಾಷನಲ್ ಕಮಿಷನ್ ಫಾರ್ ಸೆಡ್ಯೂಲ್ಡ್ ಕಾಸ್ಟ್ಸ್)ವು ಕೂಡ ದಲಿತ ಪದ 'ಅಸಂವಿಧಾನಿಕ' ಎಂದು ಹೇಳಿತ್ತು. ಈಗ ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ ಕೂಡ ಅದನ್ನೇ ಹೇಳಿದೆ. ನ್ಯಾಯಾಲಯದ ನಿರ್ದೇಶನವನ್ನು ಇಟ್ಟುಕೊಂಡು ಕೇಂದ್ರ ಸರಕಾರ ದಲಿತ ಪದ ಬಳಸದಂತೆ ಸೂಚಿಸಿರುವುದು ಅದರ ಸಾಂವಿಧಾನಿಕ ಬದ್ಧತೆ. ಇದರಲ್ಲಿ ರಾಜಕಾರಣವನ್ನು ಹುಡುಕುವುದು ತಪ್ಪಾಗುತ್ತದೆ.

- ಎಲ್ಲರನ್ನೂ ಒಳಗೊಳ್ಳದೇ ಸ್ವಾತಂತ್ರ್ಯ ಹೋರಾಟ ಯಶಸ್ವಿಯಾಗಲಾರದು ಎಂಬುದನ್ನು ಮಹಾತ್ಮ ಗಾಂಧಿಜೀ ಕಂಡುಕೊಂಡಿದ್ದರು. ಮುಸ್ಲಿಮರು, ಅಸ್ಪೃಶ್ಯರು, ಮೇಲ್ವರ್ಗದವರು, ಹೆಣ್ಣುಮಕ್ಕಳು... ಹೀಗೆ ಎಲ್ಲ ವರ್ಗದವರನ್ನೂ ಒಂದೇ ವೇದಿಕೆಯಲ್ಲಿ ತರುವ ಪ್ರಾಮಾಣಿಕ ಪ್ರಯತ್ನ ಮಾಡಿದರು ಮತ್ತು ಸಕ್ಸಸ್ಸೂ ಆದರು. ಅದಕ್ಕಾಗಿಯೇ ಅವರು ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದರು. ಆ ಮೂಲಕ ಅವರಿಗೊಂದು 'ಘನತೆ' ತಂದುಕೊಡಲು ಯತ್ನಿಸಿದರು. ಅದು ಆ ಕಾಲದ ಅಗತ್ಯವೂ ಆಗಿತ್ತು. ಆದರೆ, ಮುಂದುವರಿದಂತೆ ಸ್ವತಂತ್ರ ಭಾರತದಲ್ಲಿ ತಳ ಸಮುದಾಯದ ಜನ 'ಹರಿಜನ' ಎಂಬುದು ಅವಮಾನಕಾರಿ ಎಂದು ಭಾವಿಸತೊಡಗಿದರು. ಅಲ್ಲದೇ ಆ ಪದವನ್ನು ನಿಷೇಧಿಸುವಲ್ಲಿ ಯಶಸ್ವಿಯಾದರು.
- ಈಗಲೂ ದಲಿತ ಎಂಬುದು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಸೂಚಿಸುವ ಪದವಾಗಿ ಹೆಚ್ಚು ಬಳಕೆಯಾಗಬೇಕಿತ್ತು. ಆದರೆ, ಆಗುತ್ತಿರುವುದೇನು? ಅದು ಇಡೀ ಸಮಾಜವನ್ನು ಇಬ್ಭಾಗಿಸುತ್ತಿದೆ. ಮೇಲ್ವವರ್ಗದವರು ಮತ್ತು ಕೆಳವವರ್ಗದವರ ಮಧ್ಯೆ 'ದಲಿತ' ಪದ ಒಂದು 'ರೇಖೆ'ಯಾಗಿ ರೂಪುಗೊಂಡಿದೆ. ಈ ರೇಖೆಯನ್ನು ಅಳಿಸಿಹಾಕಿ ಅಂತರವನ್ನು ತಗ್ಗಿಸಬೇಕಾದ ಅಗತ್ಯ ಈ ಕಾಲಘಟ್ಟದ್ದಾಗಿದೆಂಬುದನ್ನು 'ಅಸ್ಮಿತೆ' ಎನ್ನುವವರು ಭಾವಿಸಿಕೊಳ್ಳಬೇಕು. "ದಲಿತ ಎಂದು ಹೇಳಿಕೊಳ್ಳಲು ನಮಗೆ ಅವಮಾನವಾಗುವುದಿಲ್ಲ. ನಿಮಗೇನು ತೊಂದರೆ?" ಎಂದು ಪ್ರಶ್ನಿಸಬಹುದು. ಅದು ನಿಜ. ದಲಿತ ಪದದ ನಿಜ ಉದ್ದೇಶಕ್ಕೇ ಬಳಕೆಯಾಗುತ್ತಿದ್ದರೆ ಅದರಲ್ಲೇನೂ ತಪ್ಪಿಲ್ಲ. ಆದರೆ, ಅದರ ಮೂಲ ಉದ್ದೇಶ ಕಳೆದುಕೊಂಡು ಬಹಳ ದಿನಗಳೇ ಆಗಿವೆ. ಸಮಾಜ ಸುಧಾರಕ ಜ್ಯೋತಿಭಾ ಫುಲೆ, ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ದಲಿತ ಪದವನ್ನು ಅಂದಿನ ಅಗತ್ಯಕ್ಕೆ ಅನುಗುಣವಾಗಿ ಹೊಸೆದರು, ಬಳಸಿದರು; ಅದು ಆಗಿನ ಅಗತ್ಯವಾಗಿತ್ತು. 70ರ ದಶಕದಲ್ಲಿ ಚಳವಳಿಯ ಆತ್ಮ ಎಂಬ ರೀತಿಯಲ್ಲಿ ದಲಿತ ಪದ ಬಳಕೆಯಾಯಿತು. ಇದು ನಿರ್ವಿವಾದ. ಆದರೆ, ಅಂಥ ಸ್ಥಿತಿ ಈಗಲೂ ಇದೆಯಾ? ಈಗ ಪರಿಸ್ಥಿತಿ ಬಹಳಷ್ಟು ಬದಲಾಗಿದೆ. ಇನ್ನೂ ಅಸ್ಪೃಶ್ಯತೆ, ಜಾತೀಯತೆ ಇದ್ದೇ ಇದೆ ಎಂದು ಎಷ್ಟೇ ವಾದಮಾಡಿದರೂ, ಫುಲೆ ಮತ್ತು ಅಂಬೇಡ್ಕರ್ ಕಾಲಘಟ್ಟಕ್ಕೆ ಹೋಲಿಸಿದರೆ ನೂರಾರು ಪಟ್ಟು ಬದಲಾಗಿದೆ. ದಲಿತ ವರ್ಗದಲ್ಲಿರುವ ಅನೇಕರು ಜಾತಿ ಮೀರಿ ಬೆಳೆದಿದ್ದಾರೆ. ಅಂಥ ಪರಿಸ್ಥಿತಿಯನ್ನು ನಮ್ಮ ಸಂವಿಧಾನ ನಮಗೆ ಕಲ್ಪಿಸಿಕೊಟ್ಟಿದೆ. ಹೀಗಿರುವಾಗ ದಲಿತ ಪದದ ಮೇಲೆಕೆ ಅಷ್ಟೊಂದು ಮೋಹ?
- ಮಹಾರಾಷ್ಟ್ರದ ಅಂಬೇಡ್ಕರ್‌ವಾದಿ, ಹಿರಿಯ ಚಿಂತಕ ಮತ್ತು ಕವಿ ಯಶವಂತ್ ಮನೋಹರ ಅವರಂತೂ ದಲಿತ ಪದ ಬಳಕೆಯನ್ನು ಕಟುವಾಗಿ ವಿರೋಧಿಸುತ್ತಾರೆ. ದಲಿತ ಎನ್ನುವುದು ಸಮುದಾಯಕ್ಕೆ ಒಳ್ಳೆಯದನ್ನು ಮಾಡುವುದಕ್ಕಿಂತ ಹೆಚ್ಚಾಗಿ ಕೆಟ್ಟದ್ದನ್ನೇ ಮಾಡಿದೆ ಎನ್ನುತ್ತಾರೆ ಅವರು. "ದಲಿತ ಎಂದರೆ ವೇದಿಕ್ ಪರಿಕಲ್ಪನೆಯ ಜಾತಿ ವ್ಯವಸ್ಥೆಗೆ ಶರಣಾದವನು ಎಂದರ್ಥ. ಅಂದರೆ, ಮನುಸ್ಮೃತಿಯಲ್ಲಿ ಸೂಚಿಸಲಾಗಿರುವ ಜಾತಿಶ್ರೇಣಿಕೃತ ವ್ಯವಸ್ಥೆಯಲ್ಲಿ ಕೆಳ ಜಾತಿಯವ ಅಥವಾ ಅಸ್ಪೃಶ್ಯ. ಅಂಥ ಪದವೊಂದು ಸಮುದಾಯದ ಪ್ರತೀಕವಾಗಲು ಹೇಗೆ ಸಾಧ್ಯ?" ಎಂದು ಪ್ರಶ್ನಿಸುತ್ತಾರೆ. ಅವರ ಈ ಪ್ರಶ್ನೆ ಬಹಳಷ್ಟು ಅರ್ಥಗರ್ಭಿತವಾಗಿದೆ ಎಂದು ಹೇಳಬಹುದು.

- ದಲಿತ ಎಂಬುದು ಅಸ್ಮಿತೆಯಲ್ಲ, ಅದು 'ಸ್ಥಿತಿ ಸೂಚಕ' ದಲಿತ ಪದಕ್ಕೆ ನಾವು ಅಸ್ಮಿತೆ ಎಂಬ ಪೋಷಾಕು ತೊಡಿಸಿ ಸಂಭ್ರಮಿಸುತ್ತಿದ್ದೇವೆ ಅಷ್ಟೆ. ವಿಪರ್ಯಾಸ ಎಂದರೆ, ಪರಿಸ್ಥಿತಿ ಸೂಚಕವು ಈಗ ಅಸ್ಮಿತೆಯಾಗಿ ರೂಪಾಂತರಗೊಂಡು, ಮತ್ತೆ ಜಾತಿ ಸೂಚಕದ ರೀತಿಯಲ್ಲೇ ಬಳಕೆಯಾಗುತ್ತಿರುವುದು ಈ ಕಾಲದ ದುರಂತ ಎಂದು ಹೇಳದೇ ವಿಧಿಯಿಲ್ಲ.

## INTERNATIONAL RELATIONS

### 1. ವೆನೆಜುವೆಲಾ: ತೈಲರಾಶಿಯ ಮೇಲೆ ಸರ್ವಾಧಿಕಾರ

**ಪ್ರಮುಖ ಸುದ್ದಿ**

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ದೊಡ್ಡಣ್ಣ ಅಮೆರಿಕಾದ ಕೋಪ ಎದುರಿಸುತ್ತಿರುವ ವೆನೆಜುವೆಲಾ ದೇಶ ಸಹಾಯಕ್ಕಾಗಿ ಭಾರತದತ್ತ ಕೈಚಾಚಿದೆ. ಆ ಸಹಾಯ ತೈಲಖರೀದಿಯ ರೂಪದಲ್ಲಿರುತ್ತದೆ. ಆದರೆ ವೆನೆಜುವೆಲಾದಿಂದ ತೈಲ ಖರೀದಿ ಮಾಡುವ ದೇಶಗಳು ನಮ್ಮ ಕೋಪಕ್ಕೆ ತುತ್ತಾಗಬೇಕಾದೀತು ಎಂದು ಅಮೆರಿಕ ಎಚ್ಚರಿಕೆ ನೀಡಿದೆ.

**ಮುಖ್ಯಾ ಅಂಶಗಳು**

**ವೆನೆಜುವೆಲಾದಲ್ಲಿ ಏನು ನಡೆಯುತ್ತಿದೆ?**

- ದಕ್ಷಿಣ ಅಮೆರಿಕಾದ ಕಿರೀಟದಂತಿರುವ ವೆನೆಜುವೆಲಾ ದೇಶದ ತೈಲ ಸಚಿವ ಮ್ಯಾನುಯೆಲ್ ಕ್ವೆವೆಡೊ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದರು. ಅವರ ಭೇಟಿಯ ಉದ್ದೇಶ, ಈಗಾಗಲೇ ತಮ್ಮ ದೇಶದಿಂದ ಪೆಟ್ರೋಲಿಯಂ ತೈಲ ಖರೀದಿ ಮಾಡುತ್ತಿರುವ ಭಾರತದ ಖರೀದಿದಾರರನ್ನು ದುಪ್ಪಟ್ಟು ತೈಲ ಖರೀದಿಸುವಂತೆ ಮನವೊಲಿಸುವುದು. ರಿಲಯನ್ಸ್ ಸೇರಿದಂತೆ ಹಲವಾರು ಕಂಪನಿಗಳು ಅಲ್ಲಿಂದ ತೈಲವನ್ನು ಭಾರತಕ್ಕೆ ಆಮದು ಮಾಡಿಕೊಳ್ಳುತ್ತವೆ. ಸುಮಾರು 3.4 ಲಕ್ಷ ಬಿಪಿಡಿ (ದಿನಕ್ಕಿಷ್ಟು

ಬ್ಯಾರಲ್) ತೈಲ ಆಮದಾಗುತ್ತದೆ. ಅದನ್ನು 6 ಲಕ್ಷಕ್ಕೇರಿಸುವುದು ವೆನೆಜುವೆಲಾ ಗುರಿ. ಇದಕ್ಕೆ ಕಾರಣ, ಅಮೆರಿಕಾ ಹಾಗೂ ಯುರೋಪಿನ ದೇಶಗಳು ವೆನೆಜುವೆಲಾದಿಂದ ತೈಲ ಆಮದು ನಿಲ್ಲಿಸಿರುವುದು. ಈಗಿರುವ ಸರ್ವಾಧಿಕಾರಿ ಸ್ವಭಾವದ ಅಧ್ಯಕ್ಷ ನಿಕೊಲಸ್ ಮದುರೊ ಪಟ್ಟದಿಂದ ಇಳಿಯಬೇಕು ಎಂಬುದು ಅಮೆರಿಕದ ಹಠ. ಈ ಹಠಕ್ಕೆ ಮಣಿಯಲಾರೆ ಎಂಬುದು ಮದುರೊನ ಛಲ. ಇದೆಲ್ಲದರ ಹಿನ್ನೆಲೆಯಲ್ಲಿ ವೆನೆಜುವೆಲಾದ ಪ್ರಸ್ತುತ ಆರ್ಥಿಕ ಬಿಕ್ಕಟ್ಟು, ಕುಸಿದ ಜಿಡಿಪಿ, ಊಹಾತೀತ ಮಟ್ಟಕ್ಕೆ ಏರಿದ ಹಣದುಬ್ಬರ, ಈಗಿರುವ ಅಧ್ಯಕ್ಷ ಮದುರೋನ ಸರ್ವಾಧಿಕಾರ, ಮದರೋ ಪರ- ವಿರೋಧ ಅಂತರ್ಯುದ್ಧ- ಇವೆಲ್ಲ ನಡೆಯುತ್ತಿದ್ದು, ದಕ್ಷಿಣ ಅಮೆರಿಕಾದ ಈ ದೇಶ ಇಂದು ಅಕ್ಷರಶಃ ರಣರಂಗವಾಗಿದೆ.

### ಹಿನ್ನೆಲೆ

- 1999ರಲ್ಲಿ ಪಟ್ಟವೇರಿದ ಹ್ಯೂಗೋ ಚಾವೆಜ್, ದೇಶವನ್ನು ಪ್ರಜಾಪ್ರಭುತ್ವದಿಂದ ಸಮಾಜವಾದದತ್ತ ನಡೆಸಿದ. ಈತನ ಕಾಲದಲ್ಲಿ ನಿರುದ್ಯೋಗ ಗಣನೀಯವಾಗಿ ಕುಸಿಯಿತು, ತಲಾದಾಯ ದುಪ್ಪಟ್ಟಾಯಿತು, ದೇಶದ ಶಿಕ್ಷಣ, ಆರೋಗ್ಯ ಎಲ್ಲವೂ ಸುಧಾರಿಸಿದ್ದವು. 2000ದಲ್ಲಿ ದೇಶದಲ್ಲಿ ಕಂಡುಬಂದ ತೈಲ ಮಾರುಕಟ್ಟೆಯ ಬೂಮ್‌ನಿಂದಾಗಿ, ದೇಶಕ್ಕೆ ಹಣದ ಹೊಳೆಯೇ ಹರಿದುಬಂತು. ಲ್ಯಾಟಿನ್ ಅಮೆರಿಕದ ಶ್ರೀಮಂತ ದೇಶವೆನಿಸಿತು. 2013ರಲ್ಲಿ ಚಾವೆಜ್ ಮೃತಪಟ್ಟ. 2014ರಲ್ಲಿ ಇದ್ದಕ್ಕಿದ್ದಂತೆ ತೈಲ ಮಾರುಕಟ್ಟೆ ಕುಸಿಯಿತು. ದೇಶ ತೈಲವನ್ನೇ ಸಂಪೂರ್ಣವಾಗಿ ನಂಬಿತ್ತು. ಬೇರೆ ರೀತಿಯ ಆದಾಯದ ಕಡೆ ಗಮನ ಹರಿಸಿರಲಿಲ್ಲ. ಹೀಗಾಗಿ ಇಡೀ ದೇಶದ ಆರ್ಥಿಕತೆಯೇ ಢಮಾರ್ ಎಂದು ನೆಲಕಚ್ಚಿತು.
- ನಿಕೊಲಸ್ ಮದುರೊ, ಹ್ಯೂಗೋ ಚಾವೆಜ್‌ನ ಉಪಾಧ್ಯಕ್ಷನಾಗಿದ್ದ. ಚಾವೆಜ್‌ನ ಸಾವಿನ ನಂತರ ಈತ ಅಧಿಕಾರ ಕೈಗೆತ್ತಿಕೊಂಡ. ಪ್ರಸ್ತುತ ವೆನೆಜುವೆಲಾದ ಅಧ್ಯಕ್ಷ. ದಿಕ್ಕೆಟ್ಟ ದೇಶದ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಲು ಮದುರೋನಲ್ಲಿ ಯಾವುದೇ ದೂರದರ್ಶಿತ್ವ, ಯೋಜನೆಗಳಿರಲಿಲ್ಲ. ತೈಲಬೆಲೆ ಆಕಾಶದಲ್ಲಿದ್ದಾಗ ಸಾಕಷ್ಟು ವಿದೇಶಿ ವಿನಿಮಯವನ್ನೂ ಈ ದೇಶ ಉಳಿಸಿರಲಿಲ್ಲ. ಮದುರೋನ ನೀತಿಗಳು ದೇಶವನ್ನು ಇನ್ನಷ್ಟು ಕುಸಿತದ ಪಾತಾಳಕ್ಕೆ ತಳ್ಳಿದವು. ಈಗ ತೈಲದ ಬೆಲೆ ಮತ್ತೆ ಏರಿದ್ದರೂ, ಕಳೆದ ಐದು ವರ್ಷಗಳಲ್ಲಿ ದೇಶ ಮಾಡಿದ ಸಾಲವೇ ಸಾಕಷ್ಟಿದೆ. ಹಣದುಬ್ಬರ ಹತ್ತು ಲಕ್ಷ ಶೇಕಡದಷ್ಟಾಗಿದೆ! ಉದ್ಯೋಗಗಳೇ ಇಲ್ಲ. 2015ರಿಂದೀಚೆಗೆ ಸುಮಾರು 30 ಲಕ್ಷ ವೆನೆಜುವೆಲಾ ಪ್ರಜೆಗಳು ಬದುಕಿನ ಅವಕಾಶ ಕಂಡುಕೊಳ್ಳಲು ದೇಶ ಬಿಟ್ಟು ಹೋಗಿದ್ದಾರೆ. 2019ರಲ್ಲಿ ಸುಮಾರು 20 ಲಕ್ಷ ಮಂದಿ ಮತ್ತೆ ನಿರ್ವಸತಿಗರಾಗಿ ಹೊರತೆರಳುವ ಸಾಧ್ಯತೆ ಇದೆ. ಇದೆಲ್ಲದರಿಂದಾಗಿ ಮದುರೋನ ಜನಪ್ರಿಯತೆ ಪಾತಾಳ ತಲುಪಿತು. 2015ರಲ್ಲಿ ನಡೆದ ಚುನಾವಣೆಯಲ್ಲಿ ಮದರೋ ಗೆದ್ದರೂ ಆತನ ವಿರುದ್ಧ ದೊಡ್ಡ ಪ್ರಮಾಣದ ಮತಗಳು ಬಿದ್ದವು. 2016, 17ರಲ್ಲಿ ಸಾಕಷ್ಟು ಕಾನೂನು ತಿದ್ದುಪಡಿಗಳನ್ನು ಮಾಡಿದ ಮದುರೋ, ಸಂಸತ್ತಿನ ಅಧಿಕಾರವನ್ನೆಲ್ಲ ತನಗೇ ವರ್ಗಾಯಿಸಿಕೊಂಡ. 2017ರಲ್ಲಿ

ಚುನಾವಣೆಯನ್ನು ನಡೆಸಿದ ಮದುರೋ, ದೇಶದ ಎಲ್ಲ 545 ಸೀಟುಗಳಲ್ಲೂ ತಾನೇ ಗೆದ್ದು ಬಂದ; ಗೆಲ್ಲಲು ಸಾಧ್ಯವಾಗುವಂತೆ ಸಾಮೂಹಿಕವಾಗಿ ರಿಗ್ಗಿಂಗ್ ಮಾಡಿಸಿಕೊಂಡ.

- ಈ ನಡುವೆ ಅಮೆರಿಕ ಮಧ್ಯಪ್ರವೇಶಿಸಿತು. ಚುನಾವಣೆಯಲ್ಲಿ ಮದುರೋನ ಗೆಲುವು ಅಸಾಂವಿಧಾನಿಕ, ಅನೈತಿಕ, ಅಪ್ರಜಾಸತ್ತಾತ್ಮಕ ಎಂದು ಸಾರಿತು. ಮುಕ್ತ ಹಾಗೂ ಪಾರದರ್ಶಕ ರೀತಿಯಲ್ಲಿ ಮತ್ತೊಮ್ಮೆ ಚುನಾವಣೆ ನಡೆಸಬೇಕು. ಮದುರೋ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಹೇಳಿತು. ಆದರೆ ಮದುರೋ ಅದಕ್ಕೆ ಸೊಪ್ಪು ಹಾಕಲಿಲ್ಲ.

### ಅಮೆರಿಕ್ಕೇಕೆ ಇಷ್ಟು ಹಿತಾಸಕ್ತಿ?

- ಮೊದಲನೆಯದಾಗಿ, ವೆನೆಜುವೆಲಾದಿಂದ ಅಮೆರಿಕಾ ದೊಡ್ಡ ಪ್ರಮಾಣದ ತೈಲ ಆಮದು ಮಾಡಿಕೊಳ್ಳುತ್ತದೆ. ವೆನೆಜುವೆಲಾದ ತೈಲ ಕಂಪನಿ ಸರಕಾರಿ ಸ್ವಾಮ್ಯದ್ದಾಗಿದ್ದು, ಅದರ ಸಂಪತ್ತು ಮದುರೋನಂಥ ಸರ್ವಾಧಿಕಾರಿಗಳಿಗೆ ಹೋಗುವುದು ಅಮೆರಿಕಕ್ಕೆ ಇಷ್ಟವಿಲ್ಲ. ಇಲ್ಲಿ ಪ್ರಜಾಪ್ರಭುತ್ವ ನೆಲೆಸಿದರೆ ಅಮೆರಿಕದ ಕಂಪನಿಗಳಿಗೂ ವೆನೆಜುವೆಲಾದಲ್ಲಿ ನೆಲೆ ಸಿಗಲಿದೆ. ಇನ್ನೊಂದು ಸಮಸ್ಯೆ ಎಂದರೆ, ಬಿಗಡಾಯಿಸುತ್ತಿರುವ ವಲಸಿಗರ ಹರಿವು. ದೊಡ್ಡ ಸಂಖ್ಯೆಯಲ್ಲಿ ವೆನೆಜುವೆಲಾದಿಂದ ಕೊಲಂಬಿಯಾ ಮೂಲಕ ಆಗಮಿಸುತ್ತಿರುವ ವಲಸಿಗರು ಅಮೆರಿಕಕ್ಕೆ ನುಗ್ಗುತ್ತಿದ್ದಾರೆ.
- ಟ್ರಂಪ್ ಆಡಳಿತ ಇದುವರೆಗೆ ಕಟುವಾದ ವಲಸಿಗ ವಿರೋಧಿ ಧೋರಣೆಯನ್ನು ಪ್ರದರ್ಶಿಸುತ್ತಿದೆ. ಈ ದೇಶದ ಪರಿಸ್ಥಿತಿ ಸುಧಾರಿಸಿದರೆ ಅಮೆರಿಕಕ್ಕೆ ವಲಸಿಗರ ತಲೆನೋವು ಇಲ್ಲವಾಗುತ್ತದೆ. ಹೀಗಾಗಿ ಪ್ರತಿಪಕ್ಷ ನಾಯಕನಾದ ಜುವಾನ್ ಗೈಡೋ ಎಂಬಾತ ವೆನೆಜುವೆಲಾದ ಅಧ್ಯಕ್ಷ ಎಂದು ಅಮೆರಿಕ ಘೋಷಿಸಿದೆ; ಆತನ ಜೊತೆಗೆ ವ್ಯವಹಾರ ಮುಂದುವರಿಸುವುದಾಗಿ ಹೇಳಿದೆ. ಮದುರೋ ಇದನ್ನು ಒಪ್ಪಿಕೊಂಡಿಲ್ಲ.

### ತೈಲ ಆಮದಿನ ದಾರಿ

- ವೆನೆಜುವೆಲಾದಿಂದ ತೈಲ ಆಮದು ಮಾಡಿಕೊಳ್ಳುವ ಅಮೆರಿಕ ಹಾಗೂ ಅದರ ಮಿತ್ರರಾದ ಯುರೋಪ್‌ನ ದೇಶಗಳು, ವೆನೆಜುವೆಲಾದ ಮೇಲೆ ನಿರ್ಬಂಧ ವಿಧಿಸಿವೆ. ಒಂದೋ, ಮದುರೋ ಕೆಳಗಿಳಿದು, ಗೈಡೋಗೆ ದಾರಿ ಮಾಡಿಕೊಡಬೇಕು. ಇಲ್ಲವಾದರೆ, ವೆನೆಜುವೆಲಾದಿಂದ ರಫ್ತಾಗುವ ತೈಲದ ದಾರಿಗಳನ್ನೆಲ್ಲ ಬಂದ್ ಮಾಡುವ ಬೆದರಿಕೆ ಹಾಕಿದೆ. ಅಮೆರಿಕ ಇನ್ನೂ ಮುಂದೆ ಹೋಗಿ, ಆ ದೇಶದ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸುವ ಸಾಧ್ಯತೆಯನ್ನೂ ಅವಲೋಕಿಸುವುದಾಗಿ ಹೇಳಿದೆ. ಅಲ್ಲಿಂದ ತೈಲ ಆಮದು ಮಾಡಿಕೊಳ್ಳದಂತೆಯೂ ಇತರ ದೇಶಗಳಿಗೆ ಎಚ್ಚರಿಸಿದೆ. ಆದರೆ, ಭಾರತದ ಮಟ್ಟಿಗೆ ಸ್ವಲ್ಪ ಸಡಿಲಿಕೆ ಮಾಡಿಕೊಂಡಿದೆ.

### ಭಾರತದ ಕತೆಯೇನು?

- ಜಗತ್ತಿನ ಸುಮಾರು ಶೇ.2ರಷ್ಟು ತೈಲ ಸಂಪನ್ಮೂಲ ವೆನೆಜುವೆಲಾದಲ್ಲಿದೆ. ಸೌದಿ ಅರೇಬಿಯಾಕ್ಕಿಂತ ಅಧಿಕ ತೈಲ ಉತ್ಪಾದಿಸಿ, ಮೊದಲ ಸ್ಥಾನವನ್ನು ಸಂಪಾದಿಸಿದೆ. ವೆನೆಜುವೆಲಾದ ಸರಕಾರಿ ಸ್ವಾಮ್ಯದ ಪಿಡಿವಿಎಸ್‌ಎ ತೈಲ ಕಂಪನಿ, ಭಾರತಕ್ಕೆ ದಿನಕ್ಕೆ ಸುಮಾರು 3.4 ಲಕ್ಷ ಬ್ಯಾರಲ್‌ಗಳಷ್ಟು ತೈಲವನ್ನು ರಫ್ತು ಮಾಡುತ್ತದೆ. ಈ ಮೊದಲು ಅಮೆರಿಕಕ್ಕೆ 5 ಲಕ್ಷ ಬಿಪಿಪಿ ರಫ್ತು ಮಾಡುತ್ತಿತ್ತು. ಈಗ ಅಷ್ಟು ತೈಲ ಉಳಿಯುತ್ತಿರುವುದರಿಂದ ಆಗುವ ನಷ್ಟವನ್ನು ಭರಿಸಲು ವೆನೆಜುವೆಲಾ ಗಿರಾಕಿ ಹುಡುಕಾಟದಲ್ಲಿದೆ.
- ಭಾರತಕ್ಕೂ ಕಡಿಮೆ ದರದಲ್ಲಿ ತೈಲ ನೀಡುವ ದೇಶಗಳು ಬೇಕಾಗಿವೆ. ವೆನೆಜುವೆಲಾದ ತೈಲದ ಬೆಲೆ ಕಡಿಮೆ; ಯಾಕೆಂದರೆ ಇಲ್ಲಿನ ತೈಲದಲ್ಲಿ ಗಂಧಕದ ಅಂಶ ಹೆಚ್ಚು. ಗಂಧಕವನ್ನು ಸಂಸ್ಕರಿಸಿ ತೆಗೆದುಹಾಕಲು ಭಾರತವೇನೋ ಸಜ್ಜಾಗಿದೆ. ಆದರೆ ದೂರದ ದಕ್ಷಿಣ ಅಮೆರಿಕದಿಂದ ತರುವ ವೆಚ್ಚ ಹೆಚ್ಚು. ಭಾರತಕ್ಕೆ ತೈಲ ನೀಡುವ ದೇಶಗಳಲ್ಲಿ ವೆನೆಜುವೆಲಾಕ್ಕೆ ಮೂರನೇ ಸ್ಥಾನ. ಭಾರತ ಸ್ವಾವಲಂಬಿಯಾಗವಷ್ಟು ತೈಲಸಂಪತ್ತನ್ನು ಹೊಂದಿಲ್ಲ. ಹಾಗಾಗಿ ಸೌದಿ, ವೆನೆಜುವೆಲಾಗಳನ್ನು ಆಶ್ರಯಿಸುವುದು ಅನಿವಾರ್ಯ. ಆದರೆ ವೆನೆಜುವೆಲಾ, ಇರಾನ್‌ನಂಥ ತೈಲ ಸಂಪದ್ಭರಿತ ರಾಷ್ಟ್ರಗಳನ್ನು ಅಮೆರಿಕಾ ಒಂದಲ್ಲ ಒಂದು ಕಾರಣಕ್ಕೆ ತನ್ನ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಬೆದರಿಸುತ್ತಿದೆ. ಈ ದೇಶಗಳು ಅದಕ್ಕೆ ಸೊಪ್ಪುಹಾಕುತ್ತಿಲ್ಲವಾದರೂ, ಅಂತಾರಾಷ್ಟ್ರೀಯ ಬ್ಯಾಂಕ್‌ಗಳು ಅಮೆರಿಕ ಹೇಳಿದಂತೆ ಕೇಳುತ್ತಿವೆ. ಹೀಗಾಗಿ ತೈಲ ವ್ಯವಹಾರಕ್ಕೆ ಸಂಬಂಧಿಸಿದ ನಗದು ವಹಿವಾಟು ಕೂಡ ಸ್ವಲ್ಪ ತೊಡಕು. ಅಮೆರಿಕವನ್ನು ಎದುರು ಹಾಕಿಕೊಳ್ಳಲು ಭಾರತಕ್ಕೂ ಇಷ್ಟವಿಲ್ಲ. ಆದರೆ ಕಡಿಮೆ ದರದಲ್ಲಿ ದೊಡ್ಡ ಪ್ರಮಾಣದ ತೈಲ ಸಿಗುವುದಾದರೆ ಯಾರಿಗೆ ಬೇಡ? ಹೀಗಾಗಿ ಭಾರತ ಸಂದಿಗ್ಧದಲ್ಲಿದೆ.

## 2. ಪಾಕಿಸ್ತಾನದ 'ಪರಮಾಪ್ತ ರಾಷ್ಟ್ರ' ಮಾನ್ಯತೆ ಕಿತ್ತೆಸೆದ ಭಾರತ

### ಪ್ರಮುಖ ಸುದ್ದಿ

- ಪುಲ್ವಾಮಾದಲ್ಲಿ ದೇಶ ಕಾಯುವ ಯೋಧರ ಮೇಲೆ ಪಾಕ್ ಉಗ್ರರು ದಾಳಿ ಮಾಡಿರುವ ಹಿನ್ನೆಲೆಯಲ್ಲಿ, ಪಾಕಿಸ್ತಾನಕ್ಕೆ 1996ರಲ್ಲಿ ನೀಡಲಾಗಿದ್ದ 'ಪರಮಾಪ್ತ ರಾಷ್ಟ್ರ' ಎಂಬ ಮಾನ್ಯತೆಯನ್ನು ಭಾರತ ತಕ್ಷಣದಿಂದ ಜಾರಿಗೆ ಬರುವಂತೆ ವಾಪಸ್ ಪಡೆದಿದೆ.

### ಮುಖ್ಯ ಅಂಶಗಳು

### ಏನಿದು ಪರಮಾಪ್ತ ರಾಷ್ಟ್ರ?

- 1996ರಲ್ಲಿ ಭಾರತ ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದಕ್ಕೆ ಸಂಬಂಧಿಸಿದಂತೆ ಸುಂಕ ಹಾಗೂ ವ್ಯಾಪಾರದ ಮೇಲಿನ ಸಾಮಾನ್ಯ ಒಪ್ಪಂದ(ಗ್ಯಾಟ್)ಅನ್ವಯ ಪಾಕ್‌ಗೆ ಪರಮಾಪ್ತ ಸ್ಥಾನ ನೀಡಿತ್ತು. ಇದರ ಅನ್ವಯ ಎರಡು ರಾಷ್ಟ್ರಗಳ ಅಭಿವೃದ್ಧಿ ದೃಷ್ಟಿಯಿಂದ ವ್ಯಾಪಾರದಲ್ಲಿ ಸೀಮಾ ಸುಂಕವನ್ನು ಕಡಿಮೆ ಮಾಡಲಾಗಿತ್ತು.

ಪರಮಾಪ್ತ ರಾಷ್ಟ್ರ' ಕಿತ್ತೆಸದರೆ ಪರಿಣಾಮ ಏನು..?

- ಪಾಕಿಸ್ತಾನಕ್ಕೆ 1996ರಲ್ಲಿ ನೀಡಲಾಗಿದ್ದ 'ಪರಮಾಪ್ತ ರಾಷ್ಟ್ರ' ಎಂಬ ಮಾನ್ಯತೆ ನೀಡಿತ್ತು.
- ಪಾಕಿಸ್ತಾನದಿಂದ ಭಾರತಕ್ಕೆ ಬರುವ ಸರಕುಗಳಿಗೆ ಸೀಮಾ ಸುಂಕ ಹೆಚ್ಚಳ ಮಾಡಬಹುದು.
- ಜಾಗತಿಕ ಮಟ್ಟದಲ್ಲೂ ಪಾಕಿಸ್ತಾನಕ್ಕೆ ಛೀಮಾರಿ, ವ್ಯತಿರಿಕ್ತ ಪರಿಣಾಮ ಬೀರಬಹುದು.
- ಭಾರತ ಪಾಕಿಸ್ತಾನದಿಂದ ಹಣ್ಣು, ಸಿಮೆಂಟ್, ಚರ್ಮ, ರಾಸಾಯನಿಕ ಸಂಬಾರು ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಿತ್ತು.
- ಭಾರತ ಈ ನಿರ್ಧಾರ ಪಾಕಿಸ್ತಾನದ ಮೇಲೆ ಅಲ್ಪ ಪ್ರಮಾಣದ ಉಂಟು ಮಾಡಲಿದೆ. ಏಕೆಂದರೆ ಈಗಾಗಲೇ ಪಾಕ್ ಭಾರತದ ಹಲವು ವಸ್ತುಗಳ ಆಮದು ಮಾಡಿಕೊಳ್ಳಲು ನಿಷೇಧವನ್ನು ವಿಧಿಸಿದೆ.
- ವಿಶ್ವಬ್ಯಾಂಕ್ ಮಾಹಿತಿ ಅನ್ವಯ ಭಾರತ ಹಾಗೂ ಪಾಕಿಸ್ತಾನ ನಡುವೆ ಕಡಿಮೆ ಮಟ್ಟದ ವ್ಯಾಪಾರ ನಡೆಯುತ್ತಿದೆ. 2017-18 ರಲ್ಲಿ 2.41 ಶತಕೋಟಿ ಡಾಲರ್ ವ್ಯಾಪಾರ ನಡೆದರೆ, 2016-17 ರಲ್ಲಿ 2.27 ಶತಕೋಟಿ ವ್ಯಾಪಾರ ನಡೆದಿತ್ತು.
- ವಿಶ್ವಮಟ್ಟದಲ್ಲಿ ಪಾಕಿಸ್ತಾನದ ಮೇಲೆ ಒತ್ತಡ ಹೆಚ್ಚಳ ಆಗುವಂತೆ ಮಾಡಿ ಮುಂದಿನ ದಿನಗಳಲ್ಲಿ ಪಾಕಿಸ್ತಾನವನ್ನು ಏಕಾಂಗಿ ಆಗಿಸಲು ಈ ನಿರ್ಧಾರ ಸಹಾಯಕವಾಗಲಿದೆ.

## 3. ಅಂತರರಾಷ್ಟ್ರೀಯ_ನ್ಯಾಯಾಲಯ

ಪ್ರಮುಖ ಸುದ್ದಿ

- ಗೂಢಚರ್ಯೆ ಆರೋಪದ ಮೇಲೆ ಪಾಕಿಸ್ತಾನದಲ್ಲಿ ಮರಣದಂಡನೆಗೆ ಗುರಿಯಾಗಿರುವ ಭಾರತೀಯ ಸೇನಾಧಿಕಾರಿ ಕುಲಭೂಷಣ್ ಜಾಧವ್ ಪ್ರಕರಣ ಕುರಿತು ಅಂತಾರಾಷ್ಟ್ರೀಯ ನ್ಯಾಯಾಲಯದ ವಿಚಾರಣೆ ಹೇಗ್‌ನಲ್ಲಿ ಆರಂಭವಾಗಿದೆ.

ಮುಖ್ಯ ಅಂಶಗಳು

ಏನಿದು ಪ್ರಕರಣ?

- ಭಾರತದ ಪರ ಗೂಢಚರ್ಯೆ ನಡೆಸುತ್ತಿದ್ದ ಆರೋಪದಲ್ಲಿ ಬಂಧನಕ್ಕೊಳಗಾಗಿದ್ದ, ಕುಲಭೂಷಣ್ ಜಾಧವ್ ಅವರಿಗೆ ಪಾಕಿಸ್ತಾನ ಕೋರ್ಟ್ ಮರಣದಂಡನೆ ಶಿಕ್ಷೆ ವಿಧಿಸಿತ್ತು. ಫೀಲ್ಡ್ ಜನರಲ್ ಕೋರ್ಟ್ ಮಾರ್ಷಲ್ ಜಾಧವ್ ಅವರಿಗೆ ಗಲ್ಲು ಶಿಕ್ಷೆ ವಿಧಿಸಿದೆ ಎಂದು ಇಂಟರ್-ಸರ್ವೀಸಸ್ ಪಬ್ಲಿಕ್ ರಿಲೇಷನ್ಸ್ (ಐಎಸ್‌ಪಿಆರ್) ತಿಳಿಸಿತ್ತು.
- ವಿಚಾರಣೆ ವೇಳೆ ರಾ ಪರ ನಾನು ಗೂಢಚರ್ಯೆ ನಡೆಸುತ್ತಿದ್ದ ವಿಚಾರವನ್ನು ಕುಲಭೂಷಣ ಜಾಧವ್ ತಪ್ಪೊಪ್ಪಿಕೊಂಡಿದ್ದರು ಎಂದು ಐಎಸ್‌ಪಿಆರ್ ತನ್ನ ಹೇಳಿಕೆಯಲ್ಲಿ ಉಲ್ಲೇಖಿಸಿತ್ತು. ಕೂಲಭೂಷಣ್ ಯಾದವ್ ನೌಕಾ ಸೇನೆಯ ನಿವೃತ್ತ ಅಧಿಕಾರಿಯಾಗಿದ್ದರು. ಆದರೆ ಅವರು ರಾ ಪರವಾಗಿ ಗೂಢಚರ್ಯೆ ನಡೆಸುತ್ತಿರುವ ಆರೋಪವನ್ನು ಭಾರತ ಸರ್ಕಾರ ನಿರಾಕರಿಸಿತ್ತು. 2016ರ

ಮಾರ್ಚ್ 3ರಂದು ಬಲೂಚಿಸ್ತಾನದ ಮಶ್ಕೇಲ್ ಎಂಬಲ್ಲಿ ಕುಲಭೂಷಣ್ ಜಾಧವ್ ಅವರು ಅರೆಸ್ಟ್ ಆಗಿದ್ದರು.

- ವಿಯೆನ್ನಾ ಒಪ್ಪಂದದ ಪ್ರಕಾರ ಕುಲಭೂಷಣ್‌ಗೆ ಭಾರತ ರಾಜತಾಂತ್ರಿಕ ನೆರವು ನೀಡಲು ಅವಕಾಶ ಮಾಡಿಕೊಡಬೇಕಿತ್ತು. ಈ ಕುರಿತು 16 ಬಾರಿ ಭಾರತದ ಮಾಡಿದ್ದ ಮನವಿಯನ್ನು ಪಾಕಿಸ್ತಾನ ತಿರಸ್ಕರಿಸಿತ್ತು.ಆದರೆ ನಿವೃತ್ತ ನೌಕಾ ಸೇನಾಧಿಕಾರಿ ಕುಲಭೂಷಣ್‌ರನ್ನು ಇರಾನ್‌ನಿಂದ ಪಾಕಿಸ್ತಾನ ಕಿಡ್ನ್ಯಾಪ್ ಮಾಡಿತ್ತು ಎಂಬ ಅಂಶವನ್ನು ಕೋರ್ಟ್‌ನಲ್ಲಿ ಭಾರತ ಮಂಡಿಸಿತ್ತು.
- ಕುಲಭೂಷಣ್ ಗೆ ಗಲ್ಲು ಶಿಕ್ಷೆ ಪ್ರಕಟಗೊಂಡ ನಂತರ, ಭಾರತ ಸರ್ಕಾರವು ಅವರನ್ನು ಬಿಡಿಸಿಕೊಳ್ಳಲು ಸುಮಾರು ಸುಮಾರು 16 ಬಾರಿ ಪ್ರಯತ್ನಿಸಿತ್ತು.

### ಏನಿದು ಅಂತಾರಾಷ್ಟ್ರೀಯ ನ್ಯಾಯಾಲಯ?

- ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳು ಅದರ ಅಡಿಯಲ್ಲಿ ಬರುವ ಈ ಅಂತಾರಾಷ್ಟ್ರೀಯ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ. ಭಾರತ ಕೂಡ 'ಇಂಟರ್‌ನ್ಯಾಷನ್ ಕೋರ್ಟ್ ಆಫ್ ಜಸ್ಟಿಸ್'ನ ಸದಸ್ಯ ರಾಷ್ಟ್ರಗಳಲ್ಲೊಂದು. ಪಾಕಿಸ್ತಾನ ಸೆ. 30, 1960ರಲ್ಲಿ ಇದೇ ನ್ಯಾಯಾಲಯಕ್ಕೆ ಅಂತಾರಾಷ್ಟ್ರೀಯ ವ್ಯಾಜ್ಯಗಳನ್ನು ಬಗೆಹರಿಸಲು ಒಪ್ಪಿಗೆ ಸೂಚಿಸಿದೆ.
- ಒಟ್ಟು 15 ನ್ಯಾಯಧೀಶರನ್ನು ಒಳಗೊಂಡಿರುವ ಈ ನ್ಯಾಯಾಲಯ ಜಾದವ್ ವಿಚಾರದಲ್ಲಿ ಅಧ್ಯಕ್ಷರ ಮೂಲಕ ಮನವಿಯೊಂದನ್ನು ಕಳಿಸಿದೆ. ನ್ಯಾಯಾಲಯದ ಕಾರ್ಯಗಳ ಪ್ರಕಾರ ಪಾಕಿಸ್ತಾನ ತನ್ನ ವಶದಲ್ಲಿದ್ದ ಅಂತಾರಾಷ್ಟ್ರೀಯ ಕೈದಿಯೊಬ್ಬರ ಮೂಲಭೂತ ಹಕ್ಕನ್ನು ತಿರಸ್ಕರಿಸಿದೆ. ವಿಯನ್ನಾ ಶೃಂಗಸಭೆಯ ನಿಯಮಗಳ ಪ್ರಕಾರ ಅಂತಾರಾಷ್ಟ್ರೀಯ ಕೈದಿಗಳಿಗೆ ಅವರ ಮಾತೃ ದೇಶದ ಸಮಾಲೋಚಕರನ್ನು ಭೇಟಿ ಮಾಡಲು ಅವಕಾಶ ನೀಡಬೇಕು ಎಂಬ ನಿಯಮ ಇದೆ. ಇದನ್ನು ಪಾಕಿಸ್ತಾನ ತಿರಸ್ಕರಿಸಿದೆ ಎಂದು ಭಾರತ ತನ್ನ ಪ್ರಾಥಮಿಕ ದೂರಿನಲ್ಲಿ ಮುಂದಿಟ್ಟಿತ್ತು. ಭಾರತದ ಪರವಾಗಿ ಹಿರಿಯ ವಕೀಲ ಹರೀಶ್ ಸಾಲ್ವೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

### ನ್ಯಾಯಾಲಯದ ವ್ಯಾಪ್ತಿ:

- ನೆದರ್‌ಲ್ಯಾಂಡ್‌ನ ಹೇಗ್ ನಲ್ಲಿರುವ ಅಂತಾರಾಷ್ಟ್ರೀಯ ನ್ಯಾಯಾಲಯದ ಕಾನೂನು ವ್ಯಾಪ್ತಿ ಎಲ್ಲಾ ವಿಶ್ವಸಂಸ್ಥೆ ರಾಷ್ಟ್ರಗಳನ್ನೂ ಒಳಗೊಂಡಿರುತ್ತದೆ; ಆದರೆ ಕೆಲವೊಂದು ವಿಚಾರಗಳನ್ನು ಹೊರತುಪಡಿಸಿ ಎಂಬುದು ಗಮನಾರ್ಹ. ಇದನ್ನು ಭಾರತ ಮತ್ತು ಪಾಕಿಸ್ತಾನಗಳೂ ಒಪ್ಪಿಕೊಂಡಿವೆ.
- ಸದ್ಯ ಪಾಕಿಸ್ತಾನ "ತನ್ನ ಸ್ಥಳೀಯ ಕಾನೂನು ವ್ಯಾಪ್ತಿಯಲ್ಲಿರುವ ಕುಲಭೂಷಣ್ ಪ್ರಕರಣದಲ್ಲಿ ಅಂತಾರಾಷ್ಟ್ರೀಯ ನ್ಯಾಯಾಲಯದ ಹಸ್ತಕ್ಷೇಪ ಸಾಧ್ಯವಿಲ್ಲ," ಎಂದು ವಾದಿಸುತ್ತಿದೆ. ಗೂಢಾಚಾರಿಕೆ ಆರೋಪದ ಮೇಲೆ ಜಾದವ್‌ರನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ಭಾರತೀಯ ಸಮಾಲೋಚಕರನ್ನು ಭೇಟಿ ಮಾಡಲು ಅವಕಾಶ ನೀಡಲಿಲ್ಲ ಎಂದು ಪಾಕ್ ಹೇಳುತ್ತಿದೆ. ಆದರೆ ಎರಡೂ ರಾಷ್ಟ್ರಗಳು ಪರಸ್ಪರರ ನಡುವಿನ ವ್ಯಾಜ್ಯಗಳನ್ನು ಬಗೆಹರಿಸಲು ಅಂತಾರಾಷ್ಟ್ರೀಯ

ನ್ಯಾಯಾಲಯಕ್ಕೆ ಅವಕಾಶವನ್ನು ನೀಡಿರುವ ಹಿನ್ನೆಲೆಯಲ್ಲಿ ಜಾದವ್ ವಿಚಾರದಲ್ಲಿ ಭಾರತಕ್ಕೆ ಸೀಮಿತ ಅವಕಾಶ ದೊರೆತಿದೆ.

- ಐಸಿಜೆ ವೆಬ್‌ಸೈಟ್ ನೀಡುವ ಮಾಹಿತಿ ಪ್ರಕಾರ, 'ಅಂತಾರಾಷ್ಟ್ರೀಯ ನ್ಯಾಯಾಲಯ ನೀಡುವ ಆದೇಶಗಳನ್ನು ಸದಸ್ಯ ರಾಷ್ಟ್ರಗಳು ಪಾಲಿಸಬೇಕು ಮತ್ತು ಆದೇಶಗಳ ಅನುಷ್ಠಾನ ಮಾಡದಿರುವ ಸಾಧ್ಯತೆಗಳು ಕಡಿಮೆ. ವ್ಯಾಜ್ಯಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ನ್ಯಾಯಾಲಯ ಎರಡೂ ದೇಶಗಳಿಗೂ ಸಮಾನ ಅವಕಾಶವನ್ನು ನೀಡಲಿದೆ.'
- ಹೀಗಿದ್ದೂ, ಅಂತಾರಾಷ್ಟ್ರೀಯ ನ್ಯಾಯಾಲಯ ತನ್ನ ಆದೇಶವನ್ನು ನೀಡಬಹುದೇ ಹೊರತು ಅದನ್ನು ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆಯನ್ನು ಹೊಂದಿಲ್ಲ ಎಂಬುದನ್ನು ಗಮನಿಸಬೇಕಿದೆ. ಒಂದು ವೇಳೆ, ಯಾವುದೇ ದೇಶ ಅಂತಾರಾಷ್ಟ್ರೀಯ ನ್ಯಾಯಾಲಯ ಆದೇಶವನ್ನು ಪಾಲನೆ ಮಾಡದಿದ್ದರೆ ವಿಶ್ವಸಂಸ್ಥೆಯ ಸುರಕ್ಷಾ ಮಂಡಳಿಯ (ಯುಎನ್ ಸೆಕ್ಯುರಿಟಿ ಕೌನ್ಸಿಲ್) ಮುಂದೆ ದೂರು ಸಲ್ಲಿಸುವ ಅವಕಾಶ ಇದೆ.
- ಕೆಲವೊಂದು ಪ್ರಕರಣಗಳಲ್ಲಿ ಅಂತಾರಾಷ್ಟ್ರೀಯ ನ್ಯಾಯಾಲಯದ ಆದೇಶಗಳು ಪಾಲನೆಯಾದ ನಿದರ್ಶನಗಳೂ ಇವೆ. ನಿಕಾರಗುವಾ ಮತ್ತು ಅಮೆರಿಕಾ ನಡುವಿನ ವ್ಯಾಜ್ಯದಲ್ಲಿ ಅಮೆರಿಕಾ ವಿರುದ್ಧ ಅಂತಾರಾಷ್ಟ್ರೀಯ ನ್ಯಾಯಾಲಯ ಆದೇಶ ನೀಡಿತ್ತು. ಇದನ್ನು ಅಮೆರಿಕಾ ಪಾಲನೆ ಮಾಡದೆ ಇದ್ದಾಗ ವಿಶ್ವಸಂಸ್ಥೆಯ ಸುರಕ್ಷಾ ಮಂಡಳಿ ಮುಂದೆ ದೂರು ಸಲ್ಲಿಕೆಯಾಗಿತ್ತು. ಸುರಕ್ಷಾ ಮಂಡಳಿಯ ಶಾಶ್ವತ ಸದಸ್ಯ ರಾಷ್ಟ್ರವಾಗಿರುವ ಅಮೆರಿಕಾ ತನ್ನ ಬಳಿ ಇರುವ 'ವಿಟೋ' ಅಧಿಕಾರವನ್ನು ಬಳಸಿ ಅಂತಾರಾಷ್ಟ್ರೀಯ ನ್ಯಾಯಾಲಯದ ಆದೇಶವನ್ನು ತಿರಸ್ಕರಿಸಿದ ಉದಾಹರಣೆ ಇದೆ.

### ಜಾದವ್ ಪ್ರಕರಣದಲ್ಲಿ ಮುಂದೇನು?

- ಕುಲಭೂಷಣ್ ಜಾದವ್ ಪ್ರಕರಣದಲ್ಲಿ ಒಂದು ವೇಳೆ ಪಾಕಿಸ್ತಾನ ಅಂತಾರಾಷ್ಟ್ರೀಯ ನ್ಯಾಯಾಲಯದ ಆದೇಶವನ್ನು ಪಾಲಿಸದೇ ಹೋದರೆ, ಭಾರತ ವಿಶ್ವಸಂಸ್ಥೆಯ ಸುರಕ್ಷಾ ಮಂಡಳಿಯ ಮುಂದೆ ದೂರು ದಾಖಲಿಸುವ ಅವಕಾಶ ಇದೆ. ಆದರೆ ಸುರಕ್ಷಾ ಮಂಡಳಿಯಲ್ಲಿ ಶಾಶ್ವತ ಸದಸ್ಯತ್ವ ಪಡೆದಿರುವ ಚೈನಾ ಅಥವಾ ಉಳಿದ ರಾಷ್ಟ್ರಗಳು ಭಾರತದ ಪರವಾಗಿ ನಿಲ್ಲದೇ ಹೋಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.
- ಸದ್ಯ, ಜಾದವ್ ವಿಚಾರ ಅಂತಾರಾಷ್ಟ್ರೀಯ ನ್ಯಾಯಾಲಯದ ಅಂಗಳದಲ್ಲಿದೆ. ಅಲ್ಲಿ ಎರಡೂ ರಾಷ್ಟ್ರಗಳು ತಮ್ಮ ಕಡೆಯಿಂದ ಮೊದಲು ಮೌಖಿಕವಾಗಿ ನಂತರ ಲಿಖಿತ ರೂಪದಲ್ಲಿ ಅವಹಾಲುಗಳನ್ನು ಸಲ್ಲಿಸಲಿವೆ. ಒಂದು ವೇಳೆ, ಇಬ್ಬರೂ ಒಪ್ಪಿಕೊಂಡರೆ ಉಭಯ ದೇಶಗಳು ಸಲ್ಲಿಸುವ ಲಿಖಿತ ಅವಹಾಲುಗಳು ಬಹಿರಂಗಗೊಳ್ಳುತ್ತವೆ. ಇದಾದ ನಂತರ ನ್ಯಾಯಾಲಯ ಬಹಿರಂಗವಾಗಿಯೇ ತನ್ನ ಅಂತಿಮ ತೀರ್ಮಾನವನ್ನು ಪ್ರಕಟಿಸಲಿದೆ. ಇದರ ಮೇಲೆ ಎರಡೂ ರಾಷ್ಟ್ರಗಳು ಮೇಲ್ಮನವಿ ಹೋಗಲು ಅವಕಾಶ ಇರುವುದಿಲ್ಲ. ಬದಲಿಗೆ ತೀರ್ಪಿನ ಪುನರ್ ವಿಮರ್ಶೆಗೆ

ಮಾತ್ರವೇ ಮನವಿ ಮಾಡಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಕುಲಭೂಷಣ್ ವಿಚಾರದಲ್ಲಿ ಪಾಕಿಸ್ತಾನಕ್ಕೆ ಸೋಲು, ಭಾರತಕ್ಕೆ ಗೆಲುವು ಎಂದು ಬೀಗುವುದು ಅವಸರದ ನಡೆಯಾಗುತ್ತದೆ.

## 4. ನೇರವಾಗಿ ಎದುರಿಸಲಾಗದ ಪಾಕ್, ಸ್ವರ್ಗದಂಥ ಕಾಶ್ಮೀರವನ್ನು ನರಕವಾಗಿಸಿದ್ದು ಹೇಗೆ?

### ಪ್ರಮುಖ ಸುದ್ದಿ

- ಭರತ ವರ್ಷ'ದ ಅವಿಭಾಜ್ಯ ಅಂಗವಾದ ಕಾಶ್ಮೀರವು ಇದೀಗ ಪಾಕಿಸ್ತಾನ-ಭಾರತ ನಡುವಿನ 'ಕದನದ ಕೊಂಡಿ'ಯಾಗಿದೆ.

### ಮುಖ್ಯ ಅಂಶಗಳು

### ಕಾಶ್ಮೀರದ ಇಂದಿನ ಪರಿಸ್ಥಿತಿಗೆ ಯಾರು, ಹೇಗೆ, ಯಾಕೆ ಕಾರಣರಾದರು?

### ಮುಸ್ಲಿಂ ಅರಸರ ಆಳ್ವಿಕೆ –

- ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಹೊತ್ತಲ್ಲಿ ಕಾಶ್ಮೀರವನ್ನು ಹಿಂದೂ ರಾಜ ಆಳುತ್ತಿದ್ದ. ಅದಕ್ಕೂ ಮೊದಲು ಈ ರಾಜ್ಯವನ್ನು ಅಂದರೆ, 1346ರಿಂದ 1819ರವರೆಗೆ ಮುಸ್ಲಿಂ ರಾಜರು ಆಡಳಿತ ನಡೆಸಿದ್ದಾರೆ. ಈ ಅವಧಿಯಲ್ಲಿ ಹಿಂದೂ ದೇಗುಲಗಳನ್ನು ನಾಶ ಮಾಡಲಾಯಿತು.
- ಜನರ ಒತ್ತಾಯದಿಂದ ಇಸ್ಲಾಮ್ ಧರ್ಮವನ್ನು ಹೇರಲಾಯಿತು. ಆದರೆ, 1587ರಿಂದ 1752ರವರೆಗಿನ ಮೊಘಲ ಆಡಳಿತದಲ್ಲಿ ಕಾಶ್ಮೀರ ಯಾವುದೇ ಅಪಸವ್ಯಗಳಿಗೆ ಒಳಗಾಗಲಿಲ್ಲ. ನಂತರದ ಆಫ್ಘನ್ಆಡಳಿತವನ್ನು ಕತ್ತಲೆ ಅವಧಿ ಎದು ಕರೆಯಲಾಗುತ್ತದೆ. 1819ರಲ್ಲಿ ಮುಸ್ಲಿಂ ಆಡಳಿತ ಕೊನೆಗೊಂಡಿತು.

### ಹಿಂದೂ ಅರಸರ ಆಡಳಿತ

- ಮೊದಲನೆಯ ಸಿಖ್ ವಾರ್(1846)ರ ಮುಕ್ತಾಯ ಬಳಿಕ ಈಗಿರುವ ಕಾಶ್ಮೀರವನ್ನು ಜಮ್ಮುವಿನಲ್ಲಿ ಆಡಳಿತ ಮಾಡುತ್ತಿದ್ದ ಮಹಾರಾಜ ಗುಲಾಬ್ ಸಿಂಗ್ ಅವರ ಸುಪರ್ದಿಗೆ ವಹಿಸಲಾಯಿತು. ಬಳಿಕ, ಮಹಾರಾಜ ರಣಬೀರ್ ಸಿಂಗ್, ಮಹಾರಾಜ ಪ್ರತಾಪ್ ಸಿಂಗ್, ಮಹಾರಾಜ ಹರಿಸಿಂಗ್ ಅವರು ಆಧುನಿಕ ಜಮ್ಮು-ಕಾಶ್ಮೀರ ರಾಜ್ಯಕ್ಕೆ ಅಡಿಪಾಯ ಹಾಕಿದರು.
- ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಹೊತ್ತಲ್ಲಿ ಕಾಶ್ಮೀರವನ್ನು ಆಳುತ್ತಿದ್ದವರು ರಾಜಾ ಹರಿಸಿಂಗ್ ಅವರು. 1880ರಲ್ಲಿ ಬ್ರಿಟಿಷ್ ಆಡಳಿತವು ಅಫ್ಘಾನಿಸ್ತಾನ ಮತ್ತು ರಷ್ಯಾಗೆ ಸಂಬಂಧಿಸಿದಂತೆ ಸ್ಪಷ್ಟವಾದ ಗಡಿಗಳನ್ನು ಗುರುತಿಸಿತು.

### ಸ್ವಾತಂತ್ರ್ಯದ ಬಳಿಕ ಕಾಶ್ಮೀರ

- ಭಾರತದಿಂದ ಪಾಕಿಸ್ತಾನ ಪ್ರತ್ಯೇಕತೆಯಲ್ಲೇ ಕಾಶ್ಮೀರ ಬಿಕ್ಕಟ್ಟು ಕೂಡ ಅಡಕವಾಗಿದೆ. ವಿಭಜನೆಯ ಸಮಯದಲ್ಲಿ ಕಾಶ್ಮೀರ ಯಾವ ಕಡೆ ಹೋಗಬೇಕು ಎಂಬ ನಿರ್ಧಾರವನ್ನು ಅಂದಿನ

ರಾಜ ಹರಿಸಿಂಗ್ ಅವರಿಗೆ ಬಿಡಲಾಯಿತು. ಅವರ ಮುಂದೆ ಕೆಲವು ಷರತ್ತುಗಳೊಂದಿಗೆ ಸ್ವತಂತ್ರ ರಾಷ್ಟ್ರವಾಗುವ ಆಯ್ಕೆಯನ್ನು ನೀಡಲಾಗಿತ್ತು.

- ಕೆಲವು ತಿಂಗಳು ತೊಳಲಾಡಿದ ಬಳಿಕ ಅವರು, ಭಾರತೀಯ ಒಕ್ಕೂಟ ಜತೆ ಸೇರುವ ನಿರ್ಧಾರಕ್ಕೆ ಬಂದರು. ಮುಸ್ಲಿಂ ಬಾಹುಳ್ಯದ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಬೇಕೆಂದು ಹಟ ಹಿಡಿದ ಪಾಕಿಸ್ತಾನ, ಕಣಿವೆ ರಾಜ್ಯದ ಮೇಲೆ ಯುದ್ಧ ಸಾರಿತು. ರಾಜಾ ಹರಿಸಿಂಗ್ ಭಾರತದ ಆಶ್ರಯಕ್ಕೆ ಬಂದರು.
- ಭಾರತ ತನ್ನ ಸೇನೆಯನ್ನು ಕಾಶ್ಮೀರಕ್ಕೆ ಕಳುಹಿಸಿ ಕೊಟ್ಟಿತು. ಅದು 1948ರ ಸಮಯ. ಉಭಯ ರಾಷ್ಟ್ರಗಳ ನಡುವಿನ ಮೊದಲ ಯುದ್ಧವದು. ಇದರಲ್ಲಿ ಸೋಲುಂಡಿದ್ದು ಪಾಕಿಸ್ತಾನವೇ. ಕಾಶ್ಮೀರದ ಕೆಲವು ಪ್ರದೇಶದ ಮೇಲೆ ಪಾಕಿಸ್ತಾನ ನಿಯಂತ್ರಣ ಸಾಧಿಸಿದರೆ, ಬಹುತೇಕ ಭಾಗವು ಭಾರತದ ಆಡಳಿತಕ್ಕೆ ಒಳಪಟ್ಟಿತು.

### ವಿಶೇಷ ಸ್ಥಾನಮಾನ

- ಭಾರತ ಒಕ್ಕೂಟ ಸೇರಬೇಕಿದ್ದರೆ ಒಂದಿಷ್ಟು ಭರವಸೆಗಳನ್ನು ಈಡೇರಿಸಬೇಕೆಂಬುದು ಅಂದಿನ ರಾಜಮನೆತನದ ಆಗ್ರಹವಾಗಿತ್ತು. ಇದಕ್ಕೆ ಅಂದಿನ ಪ್ರಧಾನಿ ನೆಹರು ಕೂಡ ಒಪ್ಪಿಗೆ ಸೂಚಿಸಿದ್ದರು. ಇದರ ಪರಿಣಾಮವೇ ಸಂವಿಧಾನದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲಾಯಿತು.
- ರಕ್ಷಣೆ, ಹಣಕಾಸು, ಸಂವಹನ ಮತ್ತು ವಿದೇಶಾಂಗ ವ್ಯವಹಾರಗಳನ್ನು ಹೊರತುಪಡಿಸಿ ಉಳಿದ ಎಲ್ಲ ಆಡಳಿತದಲ್ಲಿ ಕಾಶ್ಮೀರವು ಪ್ರತ್ಯೇಕತೆಯನ್ನು ಹೊಂದಿದೆ. ಇದಕ್ಕಾಗಿ ಸಂವಿಧಾನದ ವಿಧಿ 370ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದರನ್ವಯ, ಕಾಶ್ಮೀರವು ತನ್ನದೇ ಸ್ವಂತ ಸಂವಿಧಾನ ಹೊಂದಿದ್ದು, ಕೆಲವೊಂದು ವಿಶೇಷ ಹಕ್ಕುಗಳನ್ನು ಪಡೆದುಕೊಂಡಿದೆ.

### ನೆತ್ತರ ಹರಿಸಿದ ಯುದ್ಧಗಳು-

- ಇಡೀ ಕಾಶ್ಮೀರವನ್ನು ಹೇಗಾದರೂ ಮಾಡಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲೇಬೇಕೆಂಬ ಪಾಕಿಸ್ತಾನದ ದುರಾಸೆಯಿಂದಾಗಿ ಈವರೆಗೆ ನಾಲ್ಕು ಯುದ್ಧಗಳು ಉಭಯ ರಾಷ್ಟ್ರಗಳ ನಡುವೆ ನಡೆದಿವೆ. ಈ ಪೈಕಿ ಮೂರು ಯುದ್ಧಗಳು ನೇರವಾಗಿ ಕಾಶ್ಮೀರ ವಿಷಯಕ್ಕೆ ಸಂಬಂಧಿಸಿದ್ದರೆ, ಒಂದು ಯುದ್ಧವು ಪೂರ್ವ ಪಾಕಿಸ್ತಾನ ವಿಮೋಚನೆಗೆ ಸಂಬಂಧಿಸಿದ್ದಾಗಿದೆ.
- ವಿಶೇಷ ಎಂದರೆ, ಈ ನಾಲ್ಕೂ ಯುದ್ಧಗಳಲ್ಲಿ ಭಾರತ ಮೇಲುಗೈಯ ಸಾಧಿಸಿದೆ.
- **1947 ಯುದ್ಧ:** ಇದನ್ನು ಮೊದಲನೆಯ ಕಾಶ್ಮೀರ ಯುದ್ಧ ಎಂದು ಕರೆಯಲಾಗುತ್ತದೆ. 1947 ಅಕ್ಟೋಬರ್‌ನಲ್ಲಿ ಆರಂಭವಾದ ಯುದ್ಧ ಏಪ್ರಿಲ್ 1948ರವರೆಗೆ ನಡೆಯಿತು. ಅಂತಿಮವಾಗಿ ಕಾಶ್ಮೀರ ಕಣಿವೆ, ಜಮ್ಮು ಮತ್ತು ಲಡಾಕ್ ಭಾರತದ ವಶವಾದರೆ, ಪಾಕಿಸ್ತಾನಕ್ಕೆ ಅಜಾದ್ ಕಾಶ್ಮೀರ ಮತ್ತು ಗಿಲ್ಗಿಟ್-ಬಾಲ್ಟಿಸ್ತಾನ ದಕ್ಕಿದವು. ಜತೆಗೆ ಲೈನ್ ಆಫ್ ಕಂಟ್ರೋಲ್ ಗುರುತಿಲಾಯಿತು.

- **1965ರ ಯುದ್ಧ:** ಪಾಕಿಸ್ತಾನದ ಆಪರೇಷನ್ ಗ್ರಿಬ್ರಾಲ್ಟರ್‌ನೊಂದಿಗೆ ಯುದ್ಧ ಕೂಡ ಆರಂಭವಾಯಿತು. ಮೊದಲಿಗೆ ಪಾಕಿಸ್ತಾನದ ಸೇನೆಯ ಕಾಶ್ಮೀರದೊಳಗೆ ನುಸುಳಿತು. ಇದಕ್ಕೆ ಪ್ರತಿಯಾಗಿ ಭಾರತವು ಪೂರ್ಣ ಪ್ರಮಾಣದ ಯುದ್ಧವನ್ನು ಘೋಷಿಸಿತು. 17 ದಿನಗಳ ಕಾಲ ನಡೆದ ಯುದ್ಧದಲ್ಲಿ ಎರಡೂ ಕಡೆ ಅಪಾರ ಸಾವು ನೋವು ಸಂಭವಿಸಿತು. ಅಂತಿಮವಾಗಿ ಪಾಕ್ ಅಧ್ಯಕ್ಷ ಅಯೋಬ್ ಖಾನ್ ಮತ್ತು ಅಂದಿನ ಪ್ರಧಾನಿ ಲಾಲ ಬಹದ್ದೂರ್ ಶಾಸ್ತ್ರಿ ತಾಷ್ಕೆಂಟ್‌ನಲ್ಲಿ ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದರು.
- ಪೂರ್ವ ಪಾಕಿಸ್ತಾನ ವಿಮೋಚನೆ: ಕಾಶ್ಮೀರ ಕಾರಣಕ್ಕಾಗಿ 1971ರ ಯುದ್ಧ ನಡೆಯಲಿಲ್ಲ. ಬದಲಿಗೆ ಪೂರ್ವ ಪಾಕಿಸ್ತಾನ (ಈಗಿನ ಬಾಂಗ್ಲಾದೇಶ) ವಿಮೋಚನೆಗಾಗಿ ನಡೆದ ಈ ಯುದ್ಧವಿದು. ಪಶ್ಚಿಮ ಪಾಕಿಸ್ತಾನದ ದುರಾಡಳಿತಕ್ಕೆ ಬೇಸತ್ತ ಪೂರ್ವ ಪಾಕಿಸ್ತಾನದ ನಾಯಕರು ಬಂಡಾಯವೆದ್ದರು.
- ಪೂರ್ವ ಪಾಕಿಸ್ತಾನದ ನೆರವಿಗೆ ಧಾವಿಸಿದ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು, ಪೂರ್ವ ಪಾಕಿಸ್ತಾನವನ್ನು ಪಶ್ಚಿಮ ಪಾಕಿಸ್ತಾನದಿಂದ ಬೇರ್ಪಡಿಸುವ ಮೂಲಕ ಭಾರಿ ಹೊಡೆತವನ್ನು ನೀಡಿದರು. ಅಪಾರ ಪ್ರಮಾಣದ ಸಾವು ನೋವು ಸಂಭವಿಸಿತು. ಪಾಕಿಸ್ತಾನದ ನೌಕಾ ಪಡೆ ಮತ್ತು ವಾಯು ಪಡೆ ಇನ್ನಿಲ್ಲದಂತೆ ಘಾಸಿಗೊಂಡವು. ಪಾಕಿಸ್ತಾನದ 90 ಸಾವಿರ ಸೈನಿಕರು ಸೆರೆಯಾಳಾದರು. ಅಂತಿಮವಾಗಿ ಬಾಂಗ್ಲಾದೇಶ ಎಂಬ ಹೊಸ ರಾಷ್ಟ್ರ ಉದಯವಾಯಿತು. ಪಾಕಿಸ್ತಾನ ಇನ್ನಿಲ್ಲದಂತೆ ನಷ್ಟ ಅನುಭವಿಸಿತು.
- **ಕಾರ್ಗಿಲ್ ಯುದ್ಧ-1999:** ಎಲ್‌ಒಸಿ ದಾಟಿ ಒಳ ನುಗ್ಗಿದ ಪಾಕಿಸ್ತಾನದ ಪಡೆಗಳು ಕಾಶ್ಮೀರ ಕಾರ್ಗಿಲ್ ಜಿಲ್ಲೆಯ ಕೆಲವು ಪ್ರದೇಶಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಇದಕ್ಕೆ ಪ್ರತ್ಯುತ್ತರ ನೀಡಿದ ಭಾರತವು ಪೂರ್ಣ ಪ್ರಮಾಣದ ಸೇನಾ ಕಾರ್ಯಾಚರಣೆ ಕೈಗೊಂಡಿತು. ಎರಡು ತಿಂಗಳ ಕಾಲ ಈ ಯುದ್ಧ ನಡೆಯಿತು. ಭಾರತೀಯ ಸೇನೆ ತನ್ನೆಲ್ಲ ಪ್ರದೇಶಗಳನ್ನು ಒಂದೊಂದಾಗಿ ಮರಳಿ ವಶಪಡಿಸಿಕೊಂಡಿತು. ಘನಘೋರ ಯುದ್ಧದ ಸುಳಿವು ಅರಿತ ಅಂತಾರಾಷ್ಟ್ರೀಯ ಸಮುದಾಯವು ಯುದ್ಧ ವಿರಾಮಕ್ಕೆ ಒತ್ತಡ ಹೇರಿದವು. ಯುದ್ಧ ಕೊನೆಯಾಯಿತು. ಎರಡು ಕಡೆ ಅಪಾರ ಸಾವು ನೋವು ಸಂಭವಿಸಿತು.

### ಮಾತುಕತೆ, ಒಪ್ಪಂದಗಳು

- ಕಾಶ್ಮೀರ ಮೇಲಿನ ಹಕ್ಕು ಸಾಧನೆಗೆ ಪಾಕಿಸ್ತಾನ ಆಗಾಗ ಯುದ್ಧಕ್ಕೆ ಮುಂದಾದರೂ ಭಾರತವು ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಅನೇಕ ಒಪ್ಪಂದ ಮತ್ತು ಮಾತುಕತೆಗಳನ್ನು ಆ ರಾಷ್ಟ್ರದ ಜತೆ ಕೈಗೊಂಡಿದೆ. ಈ ಪೈಕಿ ಕೆಲವು ಯಶಸ್ವಿಯಾದರೆ, ಬಹುತೇಕ ವಿಫಲವಾಗಿವೆ.
- **ಶಿಮ್ಲಾ ಒಪ್ಪಂದ:** 1971ರ ಯುದ್ಧದಲ್ಲಿ ಪಾಕಿಸ್ತಾನ ಸೋತ ನಂತರ ಏರ್ಪಟ್ಟ ಒಪ್ಪಂದವಿದು. ಪಾಕ್ ಅಧ್ಯಕ್ಷ ಝುಲ್ಫಿಕರ್ ಅಲಿ ಭುಟ್ಟೊ ಮತ್ತು ಪ್ರಧಾನಿ ಇಂದಿರಾ ಗಾಂಧಿ ಅವರು ಶಿಮ್ಲಾದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು. ಅದರ ಅನ್ವಯ ಭಾರತವು ಸೆರೆಯಾಳಾಗಿಸಿಕೊಂಡಿದ್ದ ಎಲ್ಲ ಪಾಕ್ ಸೈನಿಕರನ್ನು ಬಿಟ್ಟುಕೊಡುವುದು. ಉಭಯ ರಾಷ್ಟ್ರಗಳ ನಡುವಿನ ಸಮಸ್ಯೆಯನ್ನು ಮಾತುಕತೆಯ ಮೂಲಕ ನಡೆಸಬೇಕೆಂದು ಕರಾರು ಮಾಡಲಾಯಿತು.

- **1990ರ ದಶಕ**: ಈ ಅವಧಿಯಲ್ಲಿ ಉಭಯ ರಾಷ್ಟ್ರಗಳ ಪ್ರಧಾನಿಗಳು ಎರಡು ಬಾರಿ ಭೇಟಿಯಾಗಿ ಮಾತುಕತೆ ನಡೆಸಿದರು. ಹಾಗೆಯೇ ವಿದೇಶಾಂಗ ಕಾರ್ಯದರ್ಶಿಗಳು ಮೂರು ಸುತ್ತಿನ ಮಾತುಕತೆ ನಡೆಸಿದರು. ಕಾಶ್ಮೀರ ಸಮಸ್ಯೆ ಸೇರಿದಂತೆ ಒಟ್ಟು 8 ವಿಷಯಗಳ ಬಗ್ಗೆ ಚರ್ಚಿಸಲಾಯಿತು. 1997ರಲ್ಲಿ ನಡೆದ ಮಾತುಕತೆ ವಿಫಲವಾದರೆ(ಕಾಶ್ಮೀರ ವಿಷಯಕ್ಕಾಗಿ), 1999ರಲ್ಲಿ ಕೈಗೊಳ್ಳಲಾದ ಪ್ರಯತ್ನದಲ್ಲಿ ಉಭಯ ಪ್ರಧಾನಿಗಳು ಲಾಹೋರ್‌ನಲ್ಲಿ ಮಾತುಕತೆ ನಡೆಸಿ ಮೂರು ಒಪ್ಪಂದಕ್ಕೆ ಸಹಿ ಹಾಕಿದದರು. ಆದರೆ, ಪಾಕಿಸ್ತಾನದಲ್ಲಿ ಸೇನಾಡಳಿತ ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಎಲ್ಲ ಮಾತುಕತೆಗಳು ವಿಫಲಗೊಂಡವು.
- **ಲಾಹೋರ್‌ಗೆ ಬಸ್**: ಶಾಂತಿಯ ಸಂದೇಶ ಹೊತ್ತು ಅಂದಿನ ಪ್ರಧಾನಿ ವಾಜಪೇಯಿ ಅವರು 1999ರಲ್ಲಿ ಲಾಹೋರ್ ಬಸ್ ಯಾತ್ರೆಯನ್ನು ಕೈಗೊಂಡರು. ಫೆಬ್ರವರಿ 21ರಂದು ಉಭಯ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿದವು. ಆದರೆ, ಬಸ್ ಯಾತ್ರೆ ಮುಗಿಸಿ ವಾಪಸ್ ಬರುವಷ್ಟರಲ್ಲಿ ಪಾಕಿಸ್ತಾನದ ಸೇನಾ ಪಡೆಗಳು ಕಾರ್ಗಿಲ್‌ನೊಳಗೆ ನುಸುಳಿಕೊಂಡಿದ್ದವು. ಇದೇ ಮುಂದೆ ಕಾರ್ಗಿಲ್ ಯುದ್ಧಕ್ಕೆ ಕಾರಣವಾಯಿತು.

### ಭಯೋತ್ಪಾದನೆ-

- ಯುದ್ಧದ ಮೂಲಕ ಭಾರತದ ಮೇಲೆ ಸವಾರಿ ಮಾಡಲು ಸಾಧ್ಯವಿಲ್ಲ ಎಂಬುದು ಗೊತ್ತಾಗುತ್ತಿದ್ದಂತೆ ಪಾಕಿಸ್ತಾನದ ಸೇನೆ ಭಯೋತ್ಪಾದನೆಗೆ ನೀರೆರೆಯಿತು. ಇದಕ್ಕೆ ಕಾಶ್ಮೀರ ಪ್ರತ್ಯೇಕವಾದಿಗಳೂ ಇಂಬು ನೀಡಿದರು. ಸ್ಥಳೀಯರ ಭಾರತ ವಿರೋಧಿ ಭಾವನೆಯನ್ನೆ ಬಂಡವಾಳವಾಗಿಸಿಕೊಂಡ ಅಲ್ಲಿನ ಸೇನೆ ಉಗ್ರ ಸಂಘಟನೆಗಳು ಎಲ್ಲ ಸಹಕಾರ, ನೆರವು ಒದಗಿಸಿತು.
- ಈ ವಿಷಯ ಪ್ರತಿ ಭಯೋತ್ಪಾದನೆ ಸಂದರ್ಭದಲ್ಲಿ ಸಾಬೀತಾಗಿದೆ. ಕಾಶ್ಮೀರದಲ್ಲಿ ಭಯೋತ್ಪಾದನೆಗೆ ಬಲಿಯಾದ ಸೈನಿಕರು, ನಾಗರಿಕರ ಪಟ್ಟಿ ದೊಡ್ಡದಿದೆ. ಜೈಷೆ ಇ ಮೊಹಮ್ಮದ್ ಉಗ್ರ ಸಂಘಟನೆ ದಾಳಿಗೆ 2017ರಿಂದ 2019ವರೆಗಿನ ಫೆಬ್ರವರಿ 14ರ ವರೆಗೆ 110ಕ್ಕೂ ಹೆಚ್ಚು ಯೋಧರು ಬಲಿಯಾದರೆ, ಉಗ್ರರನ್ನೂ ಸೇನೆ ಸದೆ ಬಡೆದಿದೆ. ಇದು ಕೇವಲ ಉದಾಹರಣೆಯಷ್ಟೇ. ಒಂದು ಅಂದಾಜಿನ ಪ್ರಕಾರ, 1947ರಿಂದ ಇಲ್ಲಿಯವರೆಗೆ ಯೋಧರು, ನಾಗರಿಕರು ಸೇರಿ 40 ಸಾವಿರದಿಂದ 80 ಸಾವಿರವರೆಗೂ ಜನ ಸತ್ತಿದ್ದಾರೆ.

### ಮುಂದಿನ ಹಾದಿ

- ಯುದ್ಧದಲ್ಲಿ ಗೆಲ್ಲಲಾಗದ ಪಾಕಿಸ್ತಾನ ಆಯ್ದುಕೊಂಡ ದಾರಿಯೇ ಭಯೋತ್ಪಾದನೆ . 'ಸ್ವರ್ಗಕ್ಕಿಂತ ಸುಂದರ' ಎಂದು ಕಾಶ್ಮೀರ ಕುರಿತು ಕವಿರತ್ನ ಕಾಳಿದಾಸ ಹೇಳಿದ ಮಾತುಗಳೇನೂ ಅತಿಶೋಯುಕ್ತಿವಲ್ಲ. ಹಿಮಾಲಯ ಗರಡಿಯ ಈ ನಾಡು ಕಣ್ಣಿಗೆ ತಂಪೆರೆಯುವ ಬೀಡು. ಆದರೆ, ರಾಜಕೀಯ ಕಾರಣಗಳಿಂದಾಗಿ ಅದರ ಮಣ್ಣಿನಲ್ಲಿ ನಿತ್ಯ ನೆತ್ತರು ಹರಿಯುತ್ತಿದೆ. ಆಗಿರುವ ಐತಿಹಾಸಿಕ ಪ್ರಮಾದಗಳನ್ನು ತಿದ್ದಿಕೊಂಡು, ಕಾಶ್ಮೀರಕ್ಕೊಂದು ಹೊಸ ಭರವಸೆಯನ್ನು

ನೀಡಬೇಕಾದ, ರಾಜಕೀಯ ಪರಿಹಾರವನ್ನು ಕಂಡುಕೊಳ್ಳಬೇಕಾದ ಅಗತ್ಯ ಈ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.

## 5. ಮೆಕ್ಸಿಕೋ ಗೋಡೆಗಾಗಿ ಅಮೆರಿಕದಲ್ಲಿ ಎಮರ್ಜೆನ್ಸಿ

### ಪ್ರಮುಖ ಸುದ್ದಿ

- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕ- ಮೆಕ್ಸಿಕೋ ನಡುವಿನ ಮಹಾಗೋಡೆ ನಿರ್ಮಾಣಕ್ಕೆ ನಿಧಿ ಸಂಗ್ರಹಿಸುವ ಉದ್ದೇಶಕ್ಕಾಗಿ ರಾಷ್ಟ್ರೀಯ ತುರ್ತುಪರಿಸ್ಥಿತಿ ವಿಧಿಸಿದ್ದಾರೆ.

### ಮುಖ್ಯ ಅಂಶಗಳು

### ತುರ್ತು ಪರಿಸ್ಥಿತಿ ಘೋಷಣೆ ಏಕೆ?

- ಶ್ವೇತಭವನದ ಗುಲಾಬಿ ಉದ್ಯಾನದಲ್ಲಿ ಟ್ರಂಪ್ ತುರ್ತು ಪರಿಸ್ಥಿತಿ ಘೋಷಿಸಿದ್ದರು. ಇದಕ್ಕವರು, 'ತುರ್ತುಪರಿಸ್ಥಿತಿ ಘೋಷಣೆಯಿಂದ ತಡೆಗೋಡೆಗೆ 8 ಬಿಲಿಯನ್ ಡಾಲರ್ (57 ಸಾವಿರ ಕೋಟಿ ರೂ.) ಹಣ ಸಿಗಲಿದೆ' ಎಂದಿದ್ದರು. ಆದರೆ 3,200 ಕಿಲೋಮೀಟರ್ ಉದ್ದದ ತಡೆಗೋಡೆ ನಿರ್ಮಾಣಕ್ಕೆ ಬೇಕಾದ 23 ಬಿಲಿಯನ್ ಡಾಲರ್‌ಗಿಂತ ಇದು ತೀರಾ ಕಡಿಮೆಯಾಗಿದೆ ಎಂಬುದು ವಾಸ್ತವ.
- ಇನ್ನು ತಮ್ಮ ನಿರ್ಧಾರಕ್ಕೆ ಕಾನೂನಿನ ತೊಡಕು ಎದುರಾಗಲಿದೆ ಎಂಬುದು ಟ್ರಂಪ್‌ಗೂ ಗೊತ್ತಿತ್ತು. 'ತುರ್ತುಪರಿಸ್ಥಿತಿ ಅನಿವಾರ್ಯವಾಗಿರಲಿಲ್ಲ. ಆದರೆ ತಡೆಗೋಡೆಗೆ ಬೇಕಾದ ಹಣವನ್ನು ಆದಷ್ಟು ಬೇಗ ಹೊಂದಿಸುವ ದೃಷ್ಟಿಯಿಂದ ತುರ್ತು ಪರಿಸ್ಥಿತಿ ಘೋಷಿಸಿದ್ದೇನೆ,' ಎಂದು ಅವರು ಸಮಜಾಯಿಷಿ ನೀಡಿದ್ದರು. ಈ ಕಾರಣವೇ ಅವರಿಗೀಗ ನ್ಯಾಯಾಲಯದಲ್ಲಿ ತಿರುಗುಬಾಣವಾಗುವ ಸಾಧ್ಯತೆ ಇದೆ.

### ಏನಿದು ರಾಷ್ಟ್ರೀಯ ತುರ್ತುಪರಿಸ್ಥಿತಿ?

- ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಬಳಕೆ ಮಾಡಲೆಂದು 'ರಾಷ್ಟ್ರೀಯ ತುರ್ತು ಪರಿಸ್ಥಿತಿ ಕಾಯ್ದೆ' ಅಮೆರಿಕಾದಲ್ಲಿದೆ. ಅಮೆರಿಕಾದ ದಕ್ಷಿಣ ಗಡಿಯಲ್ಲಿ ವಲಸೆ ಬಿಕ್ಕಟ್ಟು ಸೃಷ್ಟಿಯಾಗಿರುವುದರಿಂದ ತಾನು ಇದನ್ನು ಜಾರಿ ಮಾಡುತ್ತಿದ್ದೇನೆ ಎಂಬುದು ಟ್ರಂಪ್ ವಾದ. ಆದರೆ ಇದು ಸುಳ್ಳು ಎನ್ನುತ್ತಿದ್ದಾರೆ ವಲಸೆ ತಜ್ಞರು ಮತ್ತು ಅಮೆರಿಕಾದ ಸರಕಾರಿ ಇಲಾಖೆಗಳು. ಅಮೆರಿಕಾದಲ್ಲಿ ವಾಸವಾಗಿರುವ ಹೆಚ್ಚಿನ ವಲಸಿಗರು ವೀಸಾಗಳ ಮೇಲೆ ಬಂದು ವೀಸಾ ಅವಧಿ ಕೊನೆಗೊಂಡ ನಂತರ ದೇಶದಲ್ಲಿ ಉಳಿದುಕೊಂಡವರು. ಮೆಕ್ಸಿಕೋದಿಂದ ವಲಸೆ ಬಂದವರಲ್ಲ ಎಂಬುದು ಇವರ ವಾದ.
- ಆದರೂ ತಮ್ಮ ಚುನಾವಣಾ ಭರವಸೆ ಪೂರ್ಣಗೊಳಿಸಲು ಟ್ರಂಪ್ ಈ ವಿಶೇಷ ಅಧಿಕಾರದ ಬೆನ್ನತ್ತಿದ್ದಾರೆ. ತುರ್ತು ಪರಿಸ್ಥಿತಿ ಘೋಷಣೆ ಮೂಲಕ ವಿಶೇಷ ಅಧಿಕಾರದೊಂದಿಗೆ ಸಾಮಾನ್ಯ

ರಾಜಕೀಯ ಪ್ರಕ್ರಿಯೆಯನ್ನು ಬದಿಗೊತ್ತಿ ತಡೆಗೋಡೆಗೆ ಬೇಕಾದ ಹಣವನ್ನು ಹೊಂದಿಸಲು ಅವರು ಮುಂದಾಗಿದ್ದಾರೆ. ಈ ನಿರ್ಧಾರ ರಕ್ಷಣೆ ಮತ್ತು ವಿಪತ್ತು ಪರಿಹಾರಕ್ಕೆಂದು ಮೀಸಲಿರುವ ಹಣವನ್ನು ತಡೆಗೋಡೆ ನಿರ್ಮಾಣಕ್ಕೆ ಬಳಸಿಕೊಳ್ಳಲು ಅನುವಾಗಲಿದೆ.

- ಈ ಹಿಂದಿನ ಅಧ್ಯಕ್ಷರುಗಳು ವಿದೇಶಿ ನೀತಿಯ ಬಿಕ್ಕಟ್ಟಿನ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯ ಅಸ್ತ್ರಗಳನ್ನು ಬಳಸಿದ್ದರು. ಭಯೋತ್ಪಾದನೆ ತಡೆಗಟ್ಟಲು, ಮಾನವ ಹಕ್ಕುಗಳ ಉಲ್ಲಂಘನೆ ಜತೆ ಗುರುತಿಸಿಕೊಂಡ ದೇಶಗಳಲ್ಲಿ ಹೂಡಿಕೆ ತಡೆ ಹಿಡಿಯಲು ಈ ಮಾರ್ಗವನ್ನು ಅನುಸರಿಸುತ್ತಿದ್ದರು. ಆದರೆ ಇದೇ ಮೊದಲ ಬಾರಿಗೆ ಯೋಜನೆಯೊಂದನ್ನು ಪೂರ್ಣಗೊಳಿಸಲು 'ವಿಲಕ್ಷಣ ಅಧ್ಯಕ್ಷ' ಎನಿಸಿರುವ ಟ್ರಂಪ್ ತುರ್ತು ಪರಿಸ್ಥಿತಿ ಹೇರಿದ್ದಾರೆ.

### ಟ್ರಂಪ್‌ನ ಉದ್ದೇಶವೇನು ?

- ದಕ್ಷಿಣ ಅಮೆರಿಕದ ಕಡೆಯಿಂದ ಆಗಮಿಸುತ್ತಿರುವ ನಿರಾಶ್ರಿತರು, ವಲಸಿಗರನ್ನು ತಡೆಯುವುದಾಗಿ ಟ್ರಂಪ್ ಚುನಾವಣೆಗೆ ಮುನ್ನ ನೀಡಿದ ವಾಗ್ದಾನ ಈಡೇರಿಸಲು ಮುಂದಾಗಿದ್ದಾರೆ.
- ಇದಕ್ಕೆ 570 ಕೋಟಿ ಡಾಲರ್ ವೆಚ್ಚದಲ್ಲಿ 322 ಕಿಲೋಮೀಟರ್ ದೂರದ ಅಭೇದ್ಯ ಗೋಡೆ ಕಟ್ಟುವ ಉದ್ದೇಶ.
- ಈ ಪ್ರಸ್ತಾಪವನ್ನು ಯುಎಸ್ ಕಾಂಗ್ರೆಸ್ ತಿರಸ್ಕರಿಸಿದೆ. ಹಣ ಉಳಿಸುವುದಕ್ಕಾಗಿ, ಹಣ ಎತ್ತುವುದಕ್ಕಾಗಿ ಈಗಾಗಲೇ 35 ದಿನಗಳ ಸರಕಾರಿ ಶಟ್‌ಡೌನ್ ನಡೆಸಲಾಗಿದೆ.
- ಆದರೆ, 90 ಕಿಲೋಮೀಟರ್‌ನಷ್ಟುದ್ದಕ್ಕೆ 140 ಕೋಟಿ ಡಾಲರ್ ವೆಚ್ಚದಲ್ಲಿ ಬೇಲಿ ನಿರ್ಮಿಸಲು ಕಾಂಗ್ರೆಸ್ ಒಪ್ಪಿಗೆ ನೀಡಿದೆ.
- ತುರ್ತು ಪರಿಸ್ಥಿತಿಯ ವೇಳೆ ಟ್ರಂಪ್ ಫೆಡರಲ್ ಬಜೆಟ್, ರಕ್ಷಣಾ ವೆಚ್ಚ ಸೇರಿದಂತೆ ಇತರೆಡೆಗಳಿಂದ ತಮ್ಮ ಈ ಉದ್ದೇಶಕ್ಕಾಗಿ ಹಣವನ್ನು ತಿರುಗಿಸಬಹುದು.

### ಟ್ರಂಪ್ ಮುಂದಿನ ಸವಾಲು

- ತಮ್ಮ ಈ ನಿರ್ಧಾರದಿಂದ ಟ್ರಂಪ್ ಕೆಲವು ಸವಾಲುಗಳನ್ನು ಎದುರಿಸಬೇಕಾಗಬಹುದು. ಈಗಾಗಲೇ ಎರಡು ಕೇಸುಗಳು ಎಮರ್ಜೆನ್ಸಿಯ ವಿರುದ್ಧ ದಾಖಲಾಗಿವೆ. ಅಮೆರಿಕದ ಕಾಂಗ್ರೆಸ್ ಜಂಟಿ ನಿರ್ಣಯ ತೆಗೆದುಕೊಂಡು ಈ ಎಮರ್ಜೆನ್ಸಿಯನ್ನು ರದ್ದುಪಡಿಸಬಹುದಾದರೂ, ಅದು ದೂರದ ಮಾತು. ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ ಪ್ರಬಲರಾಗಿರುವ ಡೆಮೊಕ್ರಾಟರು, ಸೆನೆಟ್‌ನಲ್ಲಿ ಪ್ರಬಲರಾಗಿರುವ ರಿಪಬ್ಲಿಕನ್ನರನ್ನು ತುರ್ತು ಪರಿಸ್ಥಿತಿಯನ್ನು ತಡೆಯುವ ಕುರಿತು ಮನವೊಲಿಸಬೇಕು. ನಂತರ ಇಬ್ಬರೂ ನಿರ್ಣಯ ತೆಗೆದುಕೊಂಡು, ಸ್ವತಃ ಎಮರ್ಜೆನ್ಸಿ ಘೋಷಿಸಿರುವ ಅಧ್ಯಕ್ಷರಿಂದಲೇ ಅದಕ್ಕೆ ವಿರುದ್ಧದ ಒಪ್ಪಿಗೆ ಪಡೆಯಬೇಕು.

### ಟ್ರಂಪ್‌ಗೆ ಯಾವ ಅಧಿಕಾರ ಲಭ್ಯ?

- ಇಂಟರ್‌ನೆಟ್ ಸ್ಥಗಿತಗೊಳಿಸಬಹುದು. ಯುದ್ಧದ ಆತಂಕವಿದೆ ಎಂದು ಘೋಷಿಸಿ ಯಾವುದೇ ಬಗೆಯ ತಂತು ಸಂಪರ್ಕವನ್ನು ನಿಯಂತ್ರಿಸಬಹುದು.
- ವಿದೇಶದ ಸಂಪರ್ಕ ಹೊಂದಿರುವ ಅಮೆರಿಕನ್ನರ ಅಥವಾ ವಿದೇಶೀಯರ ಬ್ಯಾಂಕ್ ಖಾತೆಗಳ ವಹಿವಾಟನ್ನು ಸ್ಥಗಿತಗೊಳಿಸಬಹುದು.
- ಯಾವುದೇ ಬಗೆಯ ಪ್ರತಿಭಟನೆ, ದಂಗೆ, ಅಂತರ್ಯುದ್ಧ ಇತ್ಯಾದಿಗಳನ್ನು ಹಣಿಯಲು ಸಶಸ್ತ್ರ ಸೇನಾಪಡೆಗಳನ್ನು ಕಳಿಸಬಹುದು.
- ನಾಗರಿಕರ ಓಡಾಟವನ್ನು ನಿರ್ಬಂಧಿಸಬಹುದು. ಕರ್ಫ್ಯೂ ಹೇರಬಹುದು.
- ಮನುಷ್ಯ, ಪ್ರಾಣಿಗಳ ಮೇಲಿನ ಜೈವಿಕ, ರಾಸಾಯನಿಕ ಅಸ್ತ್ರಗಳ ದಾಳಿಯನ್ನು ನಿಷೇಧಿಸುವ ಕಾನೂನನ್ನು ರದ್ದುಪಡಿಸಬಹುದು.

## ಇದುವರೆಗಿನ ಎಮರ್ಜೆನ್ಸಿಗಳು

- ಅಮೆರಿಕದ ಸಂವಿಧಾನದಲ್ಲಿ ಯಾವುದೇ ಎಮರ್ಜೆನ್ಸಿಯ ಉಲ್ಲೇಖ ಇಲ್ಲ. ಆದರೆ 1967ರಲ್ಲಿ ವಿಶೇಷ ಕಾಯಿದೆ ರೂಪಿಸಿ, ಅಧ್ಯಕ್ಷರು ಯಾವ ಉದ್ದೇಶಕ್ಕಾಗಿ ಎಮರ್ಜೆನ್ಸಿಯನ್ನು ಬಯಸುತ್ತಾರೋ ಅದಕ್ಕನುಗುಣವಾದ ಎಮರ್ಜೆನ್ಸಿಯ ರೂಪುರೇಷೆಗಳನ್ನು ವಿನ್ಯಾಸಗೊಳಿಸಲಾಯ್ತು. ಅಲ್ಲಿಂದೀಚೆಗೆ ದೇಶದಲ್ಲಿ 58 ಬಾರಿ ಎಮರ್ಜೆನ್ಸಿ ವಿಧಿಸಲಾಗಿದೆ. ಹೆಚ್ಚಿನ ಬಾರಿ ಅವುಗಳನ್ನು ವಿಧಿಸಿರುವುದು ಆರ್ಥಿಕ ನಿರ್ಬಂಧಗಳನ್ನು ವಿಧಿಸುವುದಕ್ಕಾಗಿ. ಸ್ವತಃ ಟ್ರಂಪ್ ಈಗಾಗಲೇ ಮೂರು ಬಾರಿ ಆರ್ಥಿಕ ತುರ್ತು ಪರಿಸ್ಥಿತಿ ವಿಧಿಸಿದ್ದಾರೆ. ಬರಾಕ್ ಒಬಾಮ ಹಾಗೂ ಜಾರ್ಜ್ ಬುಶ್ ತಲಾ 13 ಮತ್ತು 12 ಬಾರಿ ವಿಧಿಸಿದ್ದಾರೆ. ಆದರೆ ಇವು ವಿದೇಶಾಂಗ ನೀತಿ, ಉಗ್ರವಾದದ ಕುರಿತು ನೀತಿ, ಮಾನವ ಹಕ್ಕುಗಳ ಕುರಿತ ನೀತಿಯನ್ನು ನಿಭಾಯಿಸುವುದಕ್ಕಾಗಿ ಹೇರಲಾಗಿತ್ತು. ಟ್ರಂಪ್ ಅವರ ಈ ಹಿಂದಿನ ಎಮರ್ಜೆನ್ಸಿ, ನಿಕರಾಗುವಾದ ದಮನಕಾರಿ ಸರಕಾರಿ ನೀತಿಯ ಕುರಿತು ತೆಗೆದುಕೊಂಡುದಾಗಿತ್ತು.

## ಕೊನೆಗೊಳ್ಳುವುದು ಹೇಗೆ?

- ತುರ್ತು ಪರಿಸ್ಥಿತಿಯ ಕಾಲಾವಧಿ ಒಂದು ವರ್ಷ. ಅಧ್ಯಕ್ಷರು ಅದನ್ನು ನವೀಕರಿಸಿದರೆ ಮುಂದುವರಿಯಬಹುದು. ಪ್ರತಿ ಆರು ತಿಂಗಳಿಗೊಮ್ಮೆ ಸೆನೆಟ್ ಹಾಗೂ ಹೌಸ್‌ಗಳು ಸಭೆ ಸೇರಿ, ತುರ್ತು ಪರಿಸ್ಥಿತಿ ಮುಂದುವರಿಯಬೇಕೇ ಬೇಡವೇ ಎಂಬ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕು.
- ಆದರೆ ಅಮೆರಿಕದಲ್ಲಿ ಈಗಾಗಲೇ ಹಲವಾರು ಸಣ್ಣಪುಟ್ಟ ಆರ್ಥಿಕ ಎಮರ್ಜೆನ್ಸಿಗಳು ಜಾರಿಯಲ್ಲಿವೆ. ಕೆಲವು ಎಲ್ಲ ಕಡೆಯೂ ಇದ್ದರೆ, ಇನ್ನು ಕೆಲವು ಕೆಲವು ರಾಜ್ಯಗಳಿಗೆ ಸೀಮಿತವಾಗಿವೆ. ಆರು ತಿಂಗಳಿಗೊಮ್ಮೆ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾದ ಸಂಸತ್ ಸಭೆ, ವರ್ಷಗಳಾದರೂ ನಿರ್ಣಯ ತೆಗೆದುಕೊಳ್ಳದೆ ಹಾಗೇ ಮುಂದುವರಿಸುತ್ತಿರುವ ಉದಾಹರಣೆ ಇದೆ.

### ಗೋಡೆ ಯಾಕೆ?

- ಇಂದು ಅಮೆರಿಕದಲ್ಲಿ ಸುಮಾರು 5 ಕೋಟಿ ವಲಸಿಗರಿದ್ದಾರೆ. ಅವರಲ್ಲಿ ಮೆಕ್ಸಿಕನ್ ಮೂಲದವರು ಸುಮಾರು 30 ಶೇಕಡ. ಮೊದಲು ಚಿಕ್ಕಪುಟ್ಟ ನೌಕರಿಗಾಗಿ ಮೆಕ್ಸಿಕನ್ನರನ್ನು ಕರೆತರಲಾಯಿತು. ಆದರೆ ದೇಶಕ್ಕೆ ಆರ್ಥಿಕ ಸಂಕಷ್ಟ ಎದುರಾಗಿ, ಬಿಳಿಯರಿಗೇ ಉದ್ಯೋಗವಿಲ್ಲದಂಥ ಸ್ಥಿತಿ ಎದುರಾದಾಗ, ಮೆಕ್ಸಿಕನ್ನರು ನಮ್ಮ ಉದ್ಯೋಗ ಕಸಿದುಕೊಳ್ಳುತ್ತಿದ್ದಾರೆ ಎಂಬ ಕೂಗು ಎದ್ದಿತು. ಅಮೆರಿಕ ಸರಕಾರ ಈ ವಲಸಿಗರನ್ನು ವಾಪಸ್ ಮೆಕ್ಸಿಕೋಗೆ ಅಟ್ಟಲು ಆರಂಭಿಸಿತು. ಆದರೆ ಕಡಿಮೆ ಸಂಬಳಕ್ಕೆ ದುಡಿಯುವ ಅಕ್ರಮ ಮೆಕ್ಸಿಕನ್ ವಲಸಿಗರು ಮತ್ತೆ ಬಂದರು. ಮೊದಲಿನಿಂದಲೂ ಮೆಕ್ಸಿಕೋದಲ್ಲಿ ಮಾದಕ ವಸ್ತುಗಳ ಹಾವಳಿ. ವಲಸಿಗರ ಜತೆ ಡ್ರಗ್ ಡೀಲರ್‌ಗಳು, ಕ್ರಿಮಿನಲ್‌ಗಳು ಸಾಕಷ್ಟು ಸೇರಿಕೊಂಡಿದ್ದಾರೆ. ಈ ಅಕ್ರಮ ವಲಸೆಯಿಂದ ದೇಶದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣ ಹದಗೆಡುತ್ತಿದೆ ಎಂಬ ಆತಂಕ ಹೆಚ್ಚಿನವರಲ್ಲಿದೆ. ಟ್ರಂಪ್ ತಮ್ಮ ಭಾಷಣಗಳಲ್ಲಿ ಮುಸ್ಲಿಂ ಮತ್ತು ಮೆಕ್ಸಿಕನ್ ಅಕ್ರಮ ವಲಸಿಗರ ಮೇಲೆ ಕೆಂಡ ಕಾರುತ್ತಾರೆ. ಈ ಆಕ್ರೋಶವನ್ನು ಟ್ರಂಪ್ ಕಳೆದ ಚುನಾವಣೆಯಲ್ಲಿ ನಗದೀಕರಿಸಿಕೊಂಡಿದ್ದರು.

### ಹಿನ್ನೆಲೆ:

- ಉತ್ತರ ಅಮೆರಿಕಕ್ಕೆ ತಾಗಿಕೊಂಡಿರುವ ಮೆಕ್ಸಿಕೊ 31 ಸಂಸ್ಥಾನಗಳು ಮತ್ತು ಮೆಕ್ಸಿಕೊ ನಗರವನ್ನು ಒಳಗೊಂಡ ಸಾಂವಿಧಾನಿಕ ಒಕ್ಕೂಟ ಗಣರಾಜ್ಯವಾಗಿದೆ. ಅಮೆರಿಕದೊಂದಿಗೆ ಈ ಪುಟ್ಟರಾಷ್ಟ್ರದ ಗಡಿವಿವಾದ ತುಂಬ ಹಳೆಯದು. 19ನೇ ಶತಮಾನದಲ್ಲಿ ಈ ಎರಡೂ ರಾಷ್ಟ್ರಗಳ ನಡುವೆ ನಡೆದ ಯುದ್ಧಟಭಿವಂತೂ ಕರಾಳ ಅಧ್ಯಾಯ. ಆದರೆ, ಇತ್ತೀಚಿನ ವರ್ಷಗಳಲ್ಲಿ ಉಭಯ ರಾಷ್ಟ್ರಗಳ ನಡುವೆ ಆರ್ಥಿಕ ಹಾಗೂ ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಳು ಹೆಚ್ಚಿ, ಸಂಬಂಧಗಳು ಸಾಮಾನ್ಯ ಸ್ಥಿತಿಗೆ ಬಂದಿವೆ. ಆದರೆ, ಭಾರಿ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಮೆಕ್ಸಿಕೊ ಆಂತರಿಕ ಕ್ಷೋಭೆಗಳಿಂದ ತತ್ತರಿಸಿದೆ. ಮತ್ತೊಂದೆಡೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿದೇಶಾಂಗ ನೀತಿಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದ್ದು, ಮೆಕ್ಸಿಕೊದೊಂದಿಗಿನ ಗಡಿ ಪೈಕಿ 1610 ಕಿಲೋಮೀಟರ್ ಪ್ರದೇಶಲ್ಲಿ ಗೋಡೆ ನಿರ್ಮಿಸುವುದಾಗಿ ಘೋಷಿಸಿದ್ದಾರೆ
- ಅಮೆರಿಕ-ಮೆಕ್ಸಿಕೊ ಗಡಿ: ಮೆಕ್ಸಿಕೊ ಮತ್ತು ಅಮೆರಿಕದ ಗಡಿ 3,100 ಕಿಮೀ ಉದ್ದದ್ದು. ಇದರಲ್ಲಿ ಈಗಾಗಲೇ 1,046 ಕಿಲೋಮೀಟರ್ ಪ್ರದೇಶ ಬೇಲಿ, ಕಾಂಕ್ರೀಟ್ ಸ್ಲಾಬ್ ಮತ್ತಿತರ ರೀತಿಯಲ್ಲಿ ಆವರಿಸಿದೆ. ಟ್ರಂಪ್ 1610 ಕಿಮೀ ಪ್ರದೇಶದಲ್ಲಿ ಗೋಡೆ ನಿರ್ಮಿಸುವುದಾಗಿ ಭರವಸೆ ನೀಡಿದ್ದಾರೆ. ಆಗ ಮೆಕ್ಸಿಕೋದ ಗಡಿ ಪೂರ್ಣವಾಗಿ ಮುಚ್ಚಿದಂತೆ ಆಗಲಿದೆ.

### ಅಮೆರಿಕದಲ್ಲೇ ಯಾಕೆ ಹೀಗಾಗುತ್ತೆ?

- ಇದು ಅಮೆರಿಕದಲ್ಲಿ ಅಸ್ತಿತ್ವದಲ್ಲಿರುವ ಪ್ರಜಾತಂತ್ರ ವ್ಯವಸ್ಥೆಯ ಪರಿಣಾಮ. ಇಲ್ಲಿ ಅಧ್ಯಕ್ಷರು ರಾಜ್ಯ ಹಾಗೂ ಸರ್ಕಾರದ ಪ್ರಮುಖರಾಗಿದ್ದರೂ ಸಂಸತ್ತಿನಲ್ಲಿ ಬಹುಮತ ಹೊಂದಿರುತ್ತಾರೆ ಎಂದೇನೂ ಇಲ್ಲ. ಏಕೆಂದರೆ ಅಧ್ಯಕ್ಷ, ಕಾಂಗ್ರೆಸ್ (ಸಂಸತ್ತು), ಸೆನೆಟ್ ಚುನಾವಣೆಗಳು ಪ್ರತ್ಯೇಕವಾಗಿ ನಡೆಯುತ್ತವೆ. ಸದ್ಯ ರಿಪಬ್ಲಿಕನ್ ಪಕ್ಷ, ಹೌಸ್ ಆಫ್ ರೆಪ್ರಿಸೆಂಟೇಟಿವ್ (ಅಮೆರಿಕ ಸಂಸತ್ತಿನ ಕೆಳಮನೆ)ನಲ್ಲಿ ಬಹುಮತ ಹೊಂದಿದ್ದರೆ, ಡೆಮಾಕ್ರಟಿಕ್ ಪಕ್ಷ ಸೆನೆಟ್ ಮೇಲೆ ಹಿಡಿತ ಹೊಂದಿದೆ. ಅಮೆರಿಕ ಕಾನೂನಿನ ಪ್ರಕಾರ ದೇಶದ ಖರ್ಚುವೆಚ್ಚಗಳಿಗಾಗಿ ಬಜೆಟ್ ಮಸೂದೆಗೆ ರಾಷ್ಟ್ರಾಧ್ಯಕ್ಷರು, ಹೌಸ್ ಆಫ್ ರೆಪ್ರಿಸೆಂಟೇಟಿವ್ ಹಾಗೂ ಸೆನೆಟ್ ಅನುಮೋದನೆ ನೀಡಬೇಕು. ಪ್ರತಿ ವರ್ಷ ಸೆಪ್ಟೆಂಬರ್ 30ರಂದು ಅಮೆರಿಕ ಕಾಂಗ್ರೆಸ್ ಮುಂದಿನ ವರ್ಷದ ಅವಧಿಯವರೆಗೆ ಬಜೆಟ್ ಅಂಗೀಕರಿಸುತ್ತದೆ. ಇದರಿಂದ ಸರ್ಕಾರಕ್ಕೆ ತನ್ನ ಯೋಜನೆಗಳಿಗಾಗಿ ಹಣ ಲಭಿಸುತ್ತದೆ.

**ಮೆಕ್ಸಿಕೋಗೇನಾಗಿದೆ?-**

- ಅಮೆರಿಕದೊಂದಿಗೆ ಮುಕ್ತ ಒಪ್ಪಂದ ಮಾಡಿಕೊಂಡ ಮೇಲೆ ಕಳೆದ ಇಪ್ಪತ್ತು ವರ್ಷದಿಂದ ಮೆಕ್ಸಿಕೋದ ಆರ್ಥಿಕತೆ ಉತ್ಪಾದನಾ ವಲಯದ ಮೇಲೆ ಅವಲಂಬಿತವಾಗಿ, ಬೆಳೆಯುತ್ತಲೇ ಸಾಗಿದೆ. 2013ರ ವೇಳೆಗೆ ಆ ದೇಶ ಅಮೆರಿಕ ಸಂಸ್ಥಾನದ ಮೂರನೇ ಅತಿದೊಡ್ಡ ಆಮದು ಮಾರುಕಟ್ಟೆಯಾಗಿ ಬದಲಾಯಿತು. ಅದೊಂದೇ ವರ್ಷದಲ್ಲಿ ಎರಡೂ ರಾಷ್ಟ್ರಗಳ ನಡುವಿನ ವ್ಯಾಪಾರವೇ 507 ಶತಕೋಟಿ ಡಾಲರ್‌ಗಳಷ್ಟಿತ್ತು. ಒಟ್ಟಲ್ಲಿ ಈಗ ಮೆಕ್ಸಿಕೋದ ಆರ್ಥಿಕತೆ 1.3 ಟ್ರಿಲಿಯಲ್ ಡಾಲರ್ ತಲುಪಿದೆ. ಆದರೆ ಇಷ್ಟಿದ್ದರೂ ಆದಾಯ ಹಂಚಿಕೆಯಲ್ಲಿ ಮಾತ್ರ ತೀವ್ರ ಅಸಮಾನತೆಯಿರುವುದರಿಂದ, ಸಿರಿವಂತರು ಮತ್ತು ಬಡವರ ನಡುವಿನ ಅಂತರ ಮಾತ್ರ ಹಿಂದಿನಂತೆಯೇ ಇದೆ.
- ಇಂಟರ್ ಅಮೆರಿಕನ್ ಹ್ಯೂಮನ್ ರೈಟ್ಸ್ ಕಮಿಷನ್(ಐಎಸಿಎಚ್‌ಆರ್) ವರದಿಯ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ಮೆಕ್ಸಿಕೋದಲ್ಲಿ ಮತ್ತೆ ಡ್ರಗ್ ಮಾಫಿಯಾಗಳ ಹಾವಳಿ, ಎರಡು ದಶಕದ ಹಿಂದಿದ್ದ ಪರಿಸ್ಥಿತಿಯನ್ನು ಹೋಲುತ್ತಿದೆ. ಡ್ರಗ್ ಕಾರ್ಟಲ್‌ಗಳ ಮೇಲೆ ಮೆಕ್ಸಿಕನ್ ಸರಕಾರ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದೆ(ಎಂದು ಹೇಳಲಾಗುತ್ತದಾದರೂ)ಯಾದರೂ, ಅಲ್ಲಿನ ಕಾನೂನು ಸುವ್ಯವಸ್ಥೆ ಮಾತ್ರ ಅವ್ಯವಸ್ಥೆಯ ಆಗರ ಕೊಲೆ, ಸುಲಿಗೆ, ಅಪಹರಣ ಪ್ರಕರಣಗಳ ಸಂಖ್ಯೆಯ ಲೆಕ್ಕವೇ ಸರಕಾರದ ಬಳಿ ಇಲ್ಲ ಎನ್ನುತ್ತದೆ ಈ ವರದಿ. 2012-2015ರ ನಡುವೆ ಸುಮಾರು 27,000 ಅನುಮಾನಾಸ್ಪದ ರೀತಿಯಲ್ಲಿ ಕಾಣೆಯಾದವರನ್ನು ಇಂದಿಗೂ ಪತ್ತೆ ಮಾಡಲು ಅಲ್ಲಿನ ಆಡಳಿತಕ್ಕೆ ಸಾಧ್ಯವಾಗಿಲ್ಲ. ಪೊಲೀಸರು ಮತ್ತು ಡ್ರಗ್ಸ್ ಗ್ಯಾಂಗ್‌ಗಳ ನಡುವೆ ಜಗಳ-ದೋಸ್ತಿ ಮುಂದುವರಿದೇ ಇದೆ.
- 2006ರಲ್ಲಿ ಅಧ್ಯಕ್ಷ ರಾಗಿದ್ದ ಫಿಲಿಪೇ ಕಾಲ್ಡೆರಾನ್ ಡ್ರಗ್ಸ್ ಮಾಫಿಯಾಗಳ ವಿರುದ್ಧ ಸಮರ ಸಾರಿದ ನಂತರದಿಂದ ಇಂದಿನವರೆಗೂ ಸುಮಾರು 1 ಲಕ್ಷ ಇಪ್ಪತ್ತು ಸಾವಿರ ಜನರು ಹತ್ಯೆಗೀಡಾಗಿದ್ದಾರೆ. ದೇಶದ ಮೇಲೆ ಸರಕಾರಕ್ಕೆ ಹಿಡಿತವೇ ಸಿಗುತ್ತಿಲ್ಲ, ಇನ್ನು ದೇಶವಾಸಿಗಳ

ಪಾಡನ್ನು ಕೇಳುವವರಾರಯರು? ಹೀಗಾಗೇ, ಉತ್ತಮ ಜೀವನ ಅರಸುವವರಿಗೆಲ್ಲ ಕಣ್ಣು ಕೋರೈಸುತ್ತಿರುವುದು ಅಮೆರಿಕವೇ.

### ಇದರಿಂದ ಭಾರತದ ಮೇಲೂ ಬೀರುವ ಪರಿಣಾಮವೇನು ?

- ಅಮೆರಿಕದಲ್ಲಿನ ಶಟ್‌ಡೌನ್ ಪರಿಣಾಮ ಅಲ್ಲಿಗೆ ತೆರಳಲು ವೀಸಾ ಸಿಗುವುದು ಕಠಿಣವಾಗಲಿದೆ. ಶಟ್‌ಡೌನ್ ಅವಧಿಯಲ್ಲಿ ವಿದೇಶಿಯರ ಆಗಮನಕ್ಕೆ ಅಮೆರಿಕ ಕಡಿವಾಣ ಹಾಕುತ್ತದೆ. ಇದರಿಂದ ಭಾರತದ ಸಾಫ್ಟ್‌ವೇರ್ ಕಂಪನಿಗಳು ತೊಂದರೆಗೆ ಒಳಗಾಗಲಿದ್ದು, ಅವುಗಳ ವಹಿವಾಟು ಕುಸಿಯಲಿದೆ. ರೂಪಾಯಿ ಮತ್ತಷ್ಟು ಅಪಮೌಲ್ಯಗೊಳ್ಳುವ ಆತಂಕ ಎದುರಾಗಿದೆ.

## 6. ಮ್ಯೂನಿಚ್ ಭದ್ರತಾ ಸಮ್ಮೇಳನ

### ಪ್ರಮುಖ ಸುದ್ದಿ

- ಇತ್ತೀಚಿಗೆ ಜರ್ಮನಿಯಲ್ಲಿ 55ನೇ ಮ್ಯೂನಿಚ್ ಭದ್ರತಾ ಸಮ್ಮೇಳನ ನಡೆಯಿತು.

### ಮುಖ್ಯ ಅಂಶಗಳು

- ಈ ವರ್ಷ ನಡೆದ 55ನೇ ಭದ್ರತಾ ಸಮ್ಮೇಳನದಲ್ಲಿ ಭಾರತದ ಪರವಾಗಿ ರಾಷ್ಟ್ರೀಯ ಭದ್ರತಾ ಉಪ ಸಲಹೆಗಾರ ಪಂಕಜ್ ಶರಣ್ ಪಾಲ್ಗೊಂಡಿದ್ದರು
- ಸಮ್ಮೇಳನದಲ್ಲಿ ವಿಶ್ವದ ನಾನಾ ದೇಶಗಳ 600ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದು ಭಯೋತ್ಪಾದನೆ ಸೇರಿದಂತೆ ಭದ್ರತೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಯಿತು.

### ಏನಿದು ಸಮ್ಮೇಳನ?

- ಅಂತಾರಾಷ್ಟ್ರೀಯ ಭದ್ರತೆ ನೀತಿ ಕುರಿತು ಚರ್ಚಿಸಲು ಜರ್ಮನಿಯ ಬವೇರಿಯಾ ರಾಜಧಾನಿ ಮ್ಯೂನಿಚ್‌ನಲ್ಲಿ ಪ್ರತಿ ವರ್ಷ ನಡೆಯುವ ವಾರ್ಷಿಕ ಸಮ್ಮೇಳನ ಇದಾಗಿದೆ.
- 1963ರಿಂದಲೂ ಈ ಸಮ್ಮೇಳನವನ್ನು ನಡೆಸಿಕೊಂಡು ಬರಲಾಗುತ್ತಿದೆ. ಅಂತಾರಾಷ್ಟ್ರೀಯ ಭದ್ರತಾ ನೀತಿ ನಿರ್ಧಾರಕರ ಅಭಿಪ್ರಾಯಗಳ ವಿನಿಮಯಕ್ಕೆ ಸಮ್ಮೇಳನವು ಸ್ವತಂತ್ರ ವೇದಿಕೆಯಾಗಿದೆ.
- ಪ್ರತಿ ವರ್ಷ ಈ ಸಮ್ಮೇಳನದಲ್ಲಿ 70ಕ್ಕೂ ಹೆಚ್ಚು ದೇಶಗಳ 350ಕ್ಕೂ ಹೆಚ್ಚು ಗಣ್ಯರು ಪಾಲ್ಗೊಂಡು ಪ್ರಸ್ತುತ ಮತ್ತು ಭವಿಷ್ಯದ ಭದ್ರತಾ ಸವಾಲುಗಳ ಬಗ್ಗೆ ಚರ್ಚೆ ನಡೆಸುತ್ತಾರೆ.

### ಸಮ್ಮೇಳನದ ರೂವಾರಿ :

- ಸಮ್ಮೇಳನದ ಹಿಂದಿನ ರೂವಾರಿ ಇವಾಲ್ಡ್ ಹೆನ್ರಿಚ್. ಕ್ಲೈಸ್ಟ್ ಇವರು 1963ರಲ್ಲಿ ಈ ಸಮ್ಮೇಳನವನ್ನು ಹುಟ್ಟು ಹಾಕಿದರು.
- 1991ರಲ್ಲಿ ನಡೆದ ಮೊದಲ ಗಲ್ಫ್ ಯುದ್ಧ ಹಾಗೂ 1997ರಲ್ಲಿ ಕ್ಲೈಸ್ಟ್ ಅವರು ನಿವೃತ್ತಿಯಾದ ಹಿನ್ನೆಲೆಯಲ್ಲಿ ಎರಡು ಬಾರಿ ಈ ಸಮ್ಮೇಳನವನ್ನು ರದ್ದು ಮಾಡಲಾಗಿತ್ತು. ಉದ್ದೇಶ:

- ಭವಿಷ್ಯದಲ್ಲಿ ಎರಡನೇ ಮಹಾಯುದ್ಧದಂತಹ ಸೇನಾ ಬಿಕ್ಕಟ್ಟುಗಳು ಉಂಟಾಗುವುದನ್ನು ತಡೆಯುವುದು. ಈ ಕಾರಣಕ್ಕಾಗಿ ಭದ್ರತಾ ನೀತಿಯನ್ನು ರೂಪಿಸಲು ವಿಶ್ವದ ನಾಯಕರು ಹಾಗೂ ತಜ್ಞರನ್ನು ಒಟ್ಟುಗೂಡಿಸಿ ಕಾರತಂತ್ರವನ್ನು ರೂಪಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ.
- ಮೊದಲ ಸಭೆಯಲ್ಲಿ 60 ದೇಶಗಳ ನಾಯಕರು ಮಾತ್ರ ಪಾಲ್ಗೊಂಡಿದ್ದರು.

### ಯಾರಾರು ಪಾಲ್ಗೊಳ್ಳುತ್ತಾರೆ?

- ಮಾತುಕತೆ ಮೂಲಕ ಶಾಂತಿ ಕಲ್ಪಿಸಬೇಕೆಂಬ ಥೀಮ್‌ನಡಿ ನಡೆಯುವ ಈ ಸಮ್ಮೇಳನದಲ್ಲಿ ಹಿರಿಯ ರಾಜತಾಂತ್ರಿಕರು, ರಾಜ ಕಾರಣಿಗಳು, ಸೇನೆ, ಭದ್ರತಾ ಪರಿಣತರು, ವಿಜ್ಞಾನಿಗಳು, ಮಾಧ್ಯಮ, ನೇಟೊ, ಯುರೋಪಿಯನ್ ಒಕ್ಕೂಟದ ಸದಸ್ಯ ದೇಶಗಳ ನಾಯಕರು ಮಾತ್ರವಲ್ಲದೆ ಚೀನಾ, ಭಾರತ, ಇರಾನ್, ಜಪಾನ್, ರಷ್ಯಾ ದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳುತ್ತಾರೆ.

## 7. ಇ-ವೀಸಾ ಆಡಳಿದಲ್ಲಿ ಬದಲಾವಣೆ ಗೊಳಿಸದ ಕೇಂದ್ರ ಸರ್ಕಾರ

### ಪ್ರಮುಖ ಸುದ್ದಿ

- ಪ್ರವಾಸೋದ್ಯಮ ಕ್ಷೇತ್ರವನ್ನು ಬಲಪಡಿಸುವಲ್ಲಿ ಉದ್ದೇಶದಿಂದ ಕೇಂದ್ರ ಸರ್ಕಾರ ಇ-ವೀಸಾ ಆಡಳಿತವನ್ನು ಸರಳಗೊಳಿಸಿದೆ.

### ಮುಖ್ಯ ಅಂಶಗಳು

- ವಿದೇಶಾಂಗ ಇಲಾಖೆಯೊಂದಿಗೆ ನಿಕಟವಾಗಿ ಕಾರ್ಯನಿರ್ವ ಹಿಸುತ್ತಿರುವ ಪ್ರವಾಸೋದ್ಯಮ ಇಲಾಖೆ ಭಾರತವನ್ನು ಪ್ರವಾಸೋದ್ಯಮ ಸ್ನೇಹಿ ದೇಶವಾಗಿ ಬದಲಾಯಿಸಲು ಸಾಕಷ್ಟು ಕ್ರಮಗಳು ರೂಪಿಸುತ್ತಿದೆ.
- 2014ರಲ್ಲಿ ಇ-ವೀಸಾ ಪರಿಚಯಿಸಿದಾಗ 46 ದೇಶಗಳಿಗೆ ಇ-ವೀಸಾ ಸೌಲಭ್ಯ ಕಲ್ಪಿಸಲಾಗಿತ್ತು. ಇದೀಗ 166ಕ್ಕೆ ಹೆಚ್ಚಿಸಲಾಗಿದೆ

### ಇ-ವೀಸಾ ಆಡಳಿತದಲ್ಲಿ ಆದ ಮಾರ್ಪಾಡುಗಳು

- ಇ-ಪ್ರವಾಸಿ ಅಥವಾ ಬಿಜಿನೆಸ್ ವೀಸಾ ಪಡೆದವರು 1 ವರ್ಷದಲ್ಲಿ ಹಲವು ಬಾರಿ ಭಾರತಕ್ಕೆ ಭೇಟಿ ನೀಡಬಹುದು.
- ಗರಿಷ್ಠ 1 ವರ್ಷ ಭಾರತದಲ್ಲಿ ನೆಲೆಸುವ ಅವಕಾಶ.
- ಇ-ವೀಸಾ ಪಡೆದು ವರ್ಷದಲ್ಲಿ ಭಾರತಕ್ಕೆ ಗರಿಷ್ಟ 3 ಬಾರಿ ಮಾತ್ರ ಬರಬಹುದು ಎಂಬ ಅಂಶ ತೊಡೆದುಹಾಕಲಾಗಿದೆ.
- ಅಮೆರಿಕ, ಬ್ರಿಟನ್, ಕೆನಡಾ ಮತ್ತು ಜಪಾನ್ ದೇಶದ ಪ್ರಜೆಗಳನ್ನು ಹೊರತುಪಡಿಸಿದ ವಿದೇಶಿಗರು ದೇಶದಲ್ಲಿ 90 ದಿನ ಮಾತ್ರ ತಂಗಬಹುದು.
- ಅಮೆರಿಕ, ಬ್ರಿಟನ್ ,ಕೆನಡಾ ಮತ್ತು ಜಪಾನ್ ಪ್ರವಾಸಿಗರು 180 ದಿನ ನೆಲೆಸಬಹುದು.

- ಇ–ವೀಸಾ ಪಡೆದವರಿಗೆ ನೋಂದಣಿ ಅಗತ್ಯವಿಲ್ಲ.
- ಇ-ಬಿಜಿನೆಸ್ ವೀಸಾ ಪಡೆದವರು ಒಂದು ಭೇಟಿಗೆ 180 ದಿನ ದೇಶದಲ್ಲಿರಬಹುದು.
- 180 ಕ್ಕೂ ಕಡಿಮೆ ದಿನ ಇರಬಯಸಿದರೆ ನೋಂದಣಿ ಅಗತ್ಯವಿಲ್ಲ.
- ಇ-ವೀಸಾ ವಿಮಾನ ನಿಲ್ದಾಣಗಳ ಪಟ್ಟಿಗೆ ಭುವನೇಶ್ವರ್ ಮತ್ತು ಪೋರ್ಟ್ ಭೇರ್ ವಿಮಾನ ನಿಲ್ದಾಣಗಳನ್ನು ಸೇರಿಸಲಾಗಿದೆ.

**ಏನಿದು ಇ-ವೀಸಾ?:**

- ಇ-ವೀಸಾ ಎನ್ನುವುದು ಎಲೆಕ್ಟ್ರಾನಿಕ್ ತಂತ್ರಜ್ಞಾನದ ಮೂಲಕ ನೀಡಲಾಗುವ ವೀಸಾ. ಇದಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿದ್ದು, ಎಲೆಕ್ಟ್ರಾನಿಕ್ ವ್ಯವಸ್ಥೆ ಮೂಲಕವೇ ವೀಸಾ ಮಂಜೂರಾಗುತ್ತದೆ. ಇಲ್ಲಿ ಸಮಯ ಮತ್ತು ಕಾಗದದ ಉಳಿತಾಯ ಆಗುವುದು ಮಾತ್ರವಲ್ಲದೆ ಹೆಚ್ಚು ಭದ್ರತೆ ಹೊಂದಿರುತ್ತದೆ. ಸಾಂಪ್ರದಾಯಿಕ ರೀತಿಯಲ್ಲಿ ವೀಸಾ ಪಡೆಯಲು ಸುದೀರ್ಘ ಅರ್ಜಿ ಪ್ರಕ್ರಿಯೆ ಇದೆ. ವಿದೇಶ ಪ್ರಯಾಣ ಮಾಡುವವರು ಅರ್ಜಿ ಜತೆಗೆ ತಮ್ಮ ಮೂಲ ಪಾಸ್ ಪೋರ್ಟ್ ನ್ನು ಸಲ್ಲಿಸಬೇಕು.
- ಈ ವೀಸಾ ಪ್ರಕ್ರಿಯೆಗೆ ಸುಧೀರ್ಘ ಅವಧಿ ತೆಗೆದುಕೊಳ್ಳುತ್ತಿದೆಯಾದರೂ ಇದರ ಸಿಂಧುತ್ವ ಬಹುಕಾಲ ಉಳಿಯುತ್ತದೆ. ಹಾಗೂ ಅಧಿಕ ಎಂಟ್ರಿಗಳನ್ನು ಇದರಲ್ಲಿ ನಮೂದಿಸಲು ಅವಕಾಶವಿದೆ.ಆದರೆ, ಇ-ವೀಸಾ ಅಲ್ಪಾವಧಿಯದ್ದಾಗಿದ್ದು, ಇದನ್ನು ಪ್ರವಾಸಿಗಳ ಅನುಕೂಲಕ್ಕೆ ಪರಿಚಯಿಸಲಾಗಿದೆ. ಭಾರತದಲ್ಲಿ ಇದನ್ನು ಇ-ಟೂರಿಸ್ಟ್ ವೀಸಾ ಎಂಬುದಾಗಿ ಹೆಸರಿಸಲಾಗಿದೆ.
- ಇ-ವೀಸಾ ಪಡೆಯಲು ಪ್ರವಾಸಿಗರು ವಿದೇಶದಿಂದ ಭಾರತದ ವಿಮಾನ ಏರುವ ಮೊದಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ವಿಮಾನದಲ್ಲಿ ಪ್ರಯಾಣಿಸಿ ಭಾರತದಲ್ಲಿ ಇಳಿದ ಬಳಿಕ ಅಲ್ಲಿನ ಇಮಿಗ್ರೇಶನ್ ಅಧಿಕಾರಿಗಳು ಅದನ್ನು ಪರಿಶೀಲಿಸಿ ನಿಲ್ದಾಣದಿಂದ ಹೊರಗೂ ಹೋಗಲು ಅನುಮತಿ ನೀಡುತ್ತಾರೆ.
- ಬೆಂಗಳೂರು, ಚೆನ್ನೈ, ಕೊಚ್ಚಿನ್, ದೆಹಲಿ, ಗೋವಾ, ಹೈದರಾಬಾದ್, ಕೋಲ್ಕತ್ತಾ, ಮುಂಬೈ,ಮಂಗಳೂರು ಮತ್ತು ತಿರುವಂತಪುರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಮಾತ್ರ ಇ-ವೀಸಾ ಪರಿಶೀಲನೆ ವ್ಯವಸ್ಥೆ ಇದೆ.

# ECONOMY

## 1. ಪಿಎಂ-ಕಿಸಾನ್ ಯೋಜನೆ

### ಪ್ರಮುಖ ಸುದ್ದಿ

- ಪಿಎಂ-ಕಿಸಾನ್ ಯೋಜನೆಯ ಎರಡು ಕಂತುಗಳು ಅಂದರೆ, 4,000 ರೂ.ಗಳನ್ನು ಲೋಕಸಭೆ ಚುನಾವಣೆಯೊಳಗೆ ರೈತರ ಖಾತೆಗೆ ಪಾವತಿಸಲು ಕೇಂದ್ರ ಸರಕಾರ ಸಜ್ಜಾಗುತ್ತಿದೆ.

### ಮುಖ್ಯ ಅಂಶಗಳು

### ಏನಿದು ಪಿಎಂ-ಕಿಸಾನ್ ಯೋಜನೆ ?

- ರೈತರಿಗೆ ವರ್ಷಕ್ಕೆ 6,000 ರೂ.ಗಳ ನೇರ ನಗದು ಒದಗಿಸುವ ಪಿಎಂ-ಕಿಸಾನ್ ಯೋಜನೆಯನ್ನು ಮಧ್ಯಂತರ ಬಜೆಟ್‌ನಲ್ಲಿ ಹಣಕಾಸು ಸಚಿವ ಪಿಯೂಷ್ ಗೋಯಲ್ ಪ್ರಕಟಿಸಿದ್ದರು.
- ಕಳೆದ ಡಿಸೆಂಬರ್‌ನಿಂದ ಅದು ಪೂರ್ವಾನ್ವಯವಾಗಲಿದ್ದು, ಮೊದಲ ಕಂತಾಗಿ 2,000 ರೂ. ಅನ್ನು ಮಾರ್ಚ್‌ನಲ್ಲಿ ವಿತರಣೆ ಮಾಡುವುದಾಗಿ ಗೋಯಲ್ ಹೇಳಿದ್ದರು. ಏತನ್ಮಧ್ಯೆ, ಲೋಕಸಭೆ ಚುನಾವಣೆಗೂ ಮುನ್ನವೇ ಎರಡು ಕಂತುಗಳನ್ನು ವಿತರಿಸುವ ಯತ್ನಗಳೂ ನಡೆದಿವೆ.
- 2 ಹೆಕ್ಟೇರ್ ತನಕ ಜಮೀನ್ ಹೊಂದಿದ ಕಿರು ರೈತರಿಗೆ ಯೋಜನೆ ಅನ್ವಯವಾಗಲಿದ್ದು, ಸುಮಾರು 12 ಕೋಟಿ ರೈತರಿಗೆ ಇದರ ಲಾಭ ದೊರೆಯಲಿದೆ. ಅರ್ಹ ರೈತರ ಗುರ್ತಿಸಲು ರಾಜ್ಯಗಳಿಗೆ ಕೇಂದ್ರವು ಈಗಾಗಲೇ ಸೂಚಿಸಿದ್ದು, ಫಲಾನುಭವಿಗಳ ಆರಂಭಿಕ ಪಟ್ಟಿ ಸದ್ಯದಲ್ಲಿಯೇ ಸಿದ್ಧವಾಗಲಿದೆ.
- ಕರ್ನಾಟಕ, ಆಂಧ್ರಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳು ಭೂ ದಾಖಲೆಗಳನ್ನು ಡಿಜಿಟಲೀಕರಣ ಮಾಡಿದ್ದು, ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವುದು ಸುಲಭವಾಗಲಿದೆ.
- ಇನ್ನು ಪಿಎಂ-ಕಿಸಾನ್ ಮಾದರಿಯದೇ ಯೋಜನೆಗಳನ್ನು ತೆಲಂಗಾಣ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳೂ ಜಾರಿಗೊಳಿಸಿದ್ದು ಈ ಸಂಬಂಧಿ ಡೇಟಾ ಈಗಾಗಲೇ ಸಿದ್ಧವಿದೆ.

### ಯಾರಿಗೆ ಅನ್ವಯಿಸುವುದಿಲ್ಲ ?

- ಸಂವಿಧಾನಾತ್ಮಕ ಹುದ್ದೆ ಹೊಂದಿದವರು, ಸೇವೆಯಲ್ಲಿರುವ ಮತ್ತು ನಿವೃತ್ತರಾಗಿರುವ ಸರಕಾರಿ ಅಧಿಕಾರಿಗಳು, ಪಿಎಸ್‌ಯುಗಳಲ್ಲಿ ಸೇವೆ ಸಲ್ಲಿಸಿ ತಿಂಗಳಿಗೆ 10,000 ರೂ. ಗಿಂತಲೂ ಹೆಚ್ಚಿನ ಪಿಂಚಣಿ ಪಡೆಯುವ ನಿವೃತ್ತರು, ಆದಾಯ ತೆರಿಗೆ ಪಾವತಿಸುವವರು, ಎಂಜಿನಿಯರ್, ವಕೀಲರನ್ನು ಹಾಗೂ ಇಂಥವರನ್ನು ಸದಸ್ಯರನ್ನಾಗಿ ಹೊಂದಿದ ಕುಟುಂಬಗಳನ್ನು ಯೋಜನೆಯಿಂದ ಹೊರಗಿಡಲಾಗಿದೆ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

- 2019ರ ಫೆ.1ರೊಳಗೆ ಭೂ ದಾಖಲೆಗಳಲ್ಲಿ ಹೆಸರಿರುವ ಕಿರು ರೈತರು ಯೋಜನೆಗೆ ಅರ್ಹರು.

## 2. ಭೌಗೋಳಿಕ ಸೂಚ್ಯಂಕ (ಜಿಐ)

### ಪ್ರಮುಖ ಸುದ್ದಿ

- ರಾಜಮುಡಿ ಭತ್ತದ ತಳಿಗೆ ಭೌಗೋಳಿಕ ಗುರುತು (ಜಿಐ-ಜಿಯಾಗ್ರಫಿಕಲ್ ಐಡೆಂಟಿಫಿಕೇಷನ್ ) ಪಡೆಯಲು ಸಿದ್ಧತೆ ಆರಂಭವಾಗಿದೆ.ಐವರು ಸದಸ್ಯರ ಸಮಿತಿಯೊಂದು ಅದಕ್ಕೆ ಬೇಕಾದ ಎಲ್ಲ ಪ್ರಕ್ರಿಯೆಗಳನ್ನು ನಡೆಸಿ ಈ ವರ್ಷಾಂತ್ಯದೊಳಗೆ ಗುರುತು ಸಿಗುವಂತೆ ಮಾಡುವ ಹೊಣೆ ವಹಿಸಿಕೊಳ್ಳಲಿದೆ.

### ಮುಖ್ಯ ಅಂಶಗಳು

### ಏನಿದು ಜಿಐ ?

- ಭೌಗೋಳಿಕ ಸೂಚ್ಯಂಕ (ಜಿಐ ಟ್ಯಾಗ್ ) ಎನ್ನುವುದು ಆಯಾ ಭೌಗೋಳಿಕ ವೈಶಿಷ್ಟ್ಯಗಳನ್ನು ಹೊಂದಿರುವ ನಿಗದಿತ ಉತ್ಪನ್ನಗಳಿಗೆ ನೀಡುವ ಟ್ಯಾಗ್ ಆಗಿದೆ.
- ಒಂದು ವಸ್ತು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಹುಟ್ಟಿದ್ದು, ಅಲ್ಲಿನ ನಿರ್ದಿಷ್ಟ ಗುಣಮಟ್ಟ ಗೌರವ, ಸ್ಥಾನಮಾನ ಮತ್ತು ಇತರ ಗುಣಲಕ್ಷಣಗಳನ್ನು ಹೊಂದಿದ್ದಾಗ ಅದನ್ನು ಆ ಭೌಗೋಳಿಕ ವ್ಯಾಪ್ತಿಯ ಮೂಲದ್ದೆಂದು ಗುರುತಿಸಲಾಗುತ್ತದೆ.
- ಭಾರತವು 1999ರಲ್ಲಿ ತನ್ನ ಭೌಗೋಳಿಕ ಸೂಚ್ಯಂಕ ನಿಯಮಗಳನ್ನು ರೂಪಿಸಿಕೊಂಡಿತು.
- ನಾಲ್ಕು ವರ್ಷ ಬಳಿಕ ಅದು ಜಾರಿಗೆ ಬಂತು. ಇದುವರೆಗೆ ಭಾರತ ಸರಕಾರ 303 ಜಿಐಗಳನ್ನು ನೀಡಿದೆ. ಅದರಲ್ಲಿ ಸ್ಕಾಚ್, ಕೊನ್ಯಾಕ್‌ನಂಥ 11 ವಿದೇಶಿ ಉತ್ಪನ್ನಗಳೂ ಇವೆ.
- ಇದರಲ್ಲಿ 29 ಉತ್ಪನ್ನಗಳ ಹೆಸರು ಹಾಗೂ ಲೋಗೋ ಎರಡಕ್ಕೂ ಬೇರೆ ಬೇರೆ ಜಿಐಗಳಿವೆ. ಡಾರ್ಜಿಲಿಂಗ್ ಟೀ, ಕಾಶ್ಮೀರದ ಪಶ್ಮಿನಾ, ಲಖನೌನ ಚಿಕಾನ್ ಕಲೆ, ಹೈದರಾಬಾದ್‌ನ ಹಲೀಮ್, ಮಹಾರಾಷ್ಟ್ರದ ವರ್ಲಿ ಚಿತ್ರಕಲೆಗಳು ಹೀಗೆ ಜಿಐ ಗಳಿಸಿಕೊಂಡಿರುವ ಕೆಲವು ಸುಪ್ರಸಿದ್ಧ ಉತ್ಪನ್ನಗಳು.
- ಅದರಲ್ಲೂ ಕರ್ನಾಟಕವೇ ಅತಿ ಹೆಚ್ಚು ಜಿಐ ಹೊಂದಿದೆ. ದೇಶದ ಜಿಐಗಳ ಹತ್ತನೇ ಒಂದು ಭಾಗ ಕರ್ನಾಟಕದಲ್ಲೇ ಇದೆ.

### ಇದರಿಂದ ಆಗುವ ಅನುಕೂಲವೇನು?

- ಜಿಯೋಗ್ರಾಫಿಕಲ್ ಇಂಡಿಕೇಷನ್ಸ್ ಆಫ್ ಗೂಡ್ಸ್ (ನೋಂದಣಿ ಮತ್ತು ರಕ್ಷಣೆ) ಕಾಯ್ದೆ ಪ್ರಾದೇಶಿಕ ಸೂಚಕ ವಿಶೇಷತೆಗಳಿಗೆ ನೋಂದಣಿ ಹಾಗೂ ರಕ್ಷಣೆ ಒದಗಿಸುತ್ತದೆ.
- ಈ ಉತ್ಪನ್ನಗಳ ಪ್ರಾದೇಶಿಕ ಸೂಚಕಗಳನ್ನು ಅನಧಿಕೃತವಾಗಿ ಇತರರು ಬಳಸುವುದನ್ನು ತಡೆಯುತ್ತದೆ.

- ವಿಶ್ವ ವಾಣಿಜ್ಯ ಸಂಸ್ಥೆಯ ಇತರ ಸದಸ್ಯ ರಾಷ್ಟ್ರಗಳಿಂದ ಕಾನೂನುಬದ್ಧ ರಕ್ಷಣೆ ಪಡೆಯಲು ಪೂರಕವಾಗಿರುತ್ತದೆ.
- ಜಿಐ ಮಾನ್ಯತೆ ಪಡೆಯಲು ಒಂದರಿಂದ ಮೂರು ವರ್ಷ ಹಿಡಿಸಬಹುದು. ಒಮ್ಮೆ ಜಿಐ ಮಾನ್ಯತೆ ದೊರೆತರೆ ಹೊರಗಿನವರು ಅದನ್ನು ಅದೇ ಹೆಸರಿನಲ್ಲಿ ತಯಾರಿಸುವುದು ಮತ್ತು ಮಾರಾಟ ಮಾಡುವುದು ಕಾನೂನು ಬಾಹಿರವಾಗುತ್ತದೆ.

### ಲಾಭ ಯಾರಿಗೆ?

- ಜಿಐ ಸಿಕ್ಕ ನಂತರ ಅದರ ಬೆಲೆ ಏರುತ್ತದೆ. ಬ್ರಾಂಡ್ ಆಗುತ್ತದೆ. ಬೇರೆ ಬೇರೆ ಕಡೆಗಳಿಂದ ಹೆಚ್ಚೆಚ್ಚು ಆರ್ಡರ್ಗಳು ಬರುತ್ತವೆ.
- ಉದಾಹರಣೆಗೆ, ತಿರುಪೂರಿನ ಬನಿಯನ್, ಕಾಂಚಿಪುರಂನ ಸೀರೆ ಅಲ್ಲಿನದ್ದೇ ಆಗಿರಬೇಕು. ಅದನ್ನು ಮಂಡ್ಯದಲ್ಲಿ ನೇಯ್ದು ತಂದರೆ ಬೆಲೆ ಇರೋಲ್ಲ, ಜನ ಕೂಡ ಬ್ರಾಂಡೆಡ್ ಕೇಳುತ್ತಾರೆ. ಹೀಗೆ ನಮ್ಮ ವಸ್ತುಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಬರುತ್ತದೆ. ಹಾಗೆಯೇ ಬಾಸುಮತಿ ಅಕ್ಕಿಯನ್ನು ಹರಿಯಾಣ, ಪಂಜಾಬ್‌ನಲ್ಲೇ ಬೆಳೀಬೇಕು ನಮ್ಮ ರಾಯಚೂರಲ್ಲಿ ಬೆಳೆದರೆ ಅದಕ್ಕೆ ಬೆಲೆ ಇರೋಲ್ಲ, ಬೆಲೆ ಸಿಗೋಲ್ಲ.

## 3. ರಾಷ್ಟ್ರೀಯ ಕನಿಷ್ಠ ವೇತನ

### ಪ್ರಮುಖ ಸುದ್ದಿ

- ಕಾರ್ಮಿಕರಿಗೆ ತಿಂಗಳ ಕನಿಷ್ಠ ವೇತನ 18 ಸಾವಿರ ನೀಡಬೇಕು' ಎಂದು ಆಗ್ರಹಿಸಿ ವಿವಿಧ ರಾಜ್ಯಗಳ ಹಾಗೂ ರಾಷ್ಟ್ರಮಟ್ಟದ ಕಾರ್ಮಿಕ ಸಂಘಟನೆಗಳು ಹೋರಾಟ ಮಾಡಿಕೊಂಡು ಬರುತ್ತಿದ್ದರೇ ಕೇಂದ್ರ ಸರ್ಕಾರ ರಚಿಸಿದ 'ಕನಿಷ್ಠ ವೇತನ ಸಲಹಾ ಸಮಿತಿ'ಯು ಕಾರ್ಮಿಕರ ಮಾಸಿಕ ವೇತನ ನಿಗದಿಪಡಿಸಿದೆ.

### ಮುಖ್ಯ ಅಂಶಗಳು

- ಕೇಂದ್ರ ಸರ್ಕಾರವು ದೇಶದ ವಿವಿಧ ವಲಯಗಳಲ್ಲಿ ಕನಿಷ್ಠ ವೇತನ ನಿಗದಿ ಮಾಡುವ ಸಂಬಂಧ ಸಲಹಾ ಸಮಿತಿ ನೇಮಕ ಮಾಡಿತ್ತು. 2017ರ ಕಾರ್ಮಿಕ ವೇತನ ನೀತಿಯ ಅನುಷ್ಠಾನ ಮತ್ತು ವಿವಿಧ ವಲಯ, ಪ್ರದೇಶ, ಅನುಭವ ಮತ್ತು ಕೌಶಲಕ್ಕೆ ಅನುಗುಣವಾಗಿ ಉದ್ಯೋಗಿಗಳಿಗೆ 'ರಾಷ್ಟ್ರೀಯ ಕನಿಷ್ಠ ವೇತನ' ನಿಗದಿಯ ಹೊಣೆಯನ್ನು ಈ ಸಲಹಾ ಸಮಿತಿ ವಹಿಸಿಕೊಂಡಿತ್ತು.
- ವೇತನ ಪಾವತಿಯ ಬಗ್ಗೆ ಅಧ್ಯಯನ ಮಾಡಿದ ಸಮಿತಿಯು ತನ್ನ ವೇತನ ನಿಗದಿಯನ್ನು ಕೇಂದ್ರದ ಮುಂದಿಟ್ಟಿದ್ದು, ವಿವಿಧ ವಲಯ, ಪ್ರದೇಶ, ಅನುಭವ ಮತ್ತು ಕೌಶ್ಯಲಕ್ಕೆ ಅನುಗುಣವಾಗಿ ರಾಷ್ಟ್ರೀಯ ಮಟ್ಟದಲ್ಲಿ ನಿತ್ಯದ ಕನಿಷ್ಠ ವೇತನ 375 ಅಥವಾ ಮಾಸಿಕ ವೇತನ 9,750 ಇರಬೇಕೆಂದು ಶಿಫಾರಸು ಮಾಡಿದೆ. ನಗರ ಪ್ರದೇಶದಲ್ಲಿ ವಾಸಿಸುವ ಕಾರ್ಮಿಕರಿಗೆ

ಹೆಚ್ಚುವರಿಯಾಗಿ ದಿನಕ್ಕೆ 55 (ಮಾಸಿಕ 1,430) ಮನೆ ಬಾಡಿಗೆ ಒಳಗೊಂಡ ಮೊತ್ತವನ್ನು ನಿಗದಿಪಡಿಸಿದೆ.

**ರಾಷ್ಟ್ರೀಯ ಕನಿಷ್ಠ ವೇತನವನ್ನು ಪ್ರಾದೇಶಿಕ ಮಟ್ಟದಲ್ಲಿ ಐದು ವರ್ಗಗಳಲ್ಲಿ ವಿಂಗಡಿಸಲಾಗಿದೆ. ಅದು...**

- 1. ಅಸ್ಸಾಂ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ, ಒಡಿಶಾ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಕನಿಷ್ಠ ವೇತನ ದಿನಕ್ಕೆ 342/ ಮಾಸಿಕ 8,892
- 2. ಆಂಧ್ರ ಪ್ರದೇಶ, ತೆಲಂಗಾಣ, ಛತ್ತೀಸ್‌ಗಢ, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ನಿತ್ಯ 380/ ತಿಂಗಳಿಗೆ 9,880
- 3. ಗುಜರಾತ್, ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ದಿನಕ್ಕೆ 414/ ಮಾಸಿಕ 10,764
- 4. ದೆಹಲಿ, ಗೋವಾ, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಪಂಜಾಬ್‌ನಲ್ಲಿ ನಿತ್ಯ 447/ ತಿಂಗಳಿಗೆ 11,622
- 5. ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ನಾಗಾಲ್ಯಾಂಡ್, ಸಿಕ್ಕಿಂ, ಮಿಜೋರಾಂ ಮತ್ತು ತ್ರಿಪುರದಲ್ಲಿ ದಿನಕ್ಕೆ 386/ 10, 036
- ರಾಷ್ಟ್ರೀಯ ಕನಿಷ್ಠ ವೇತನ ನಿಗದಿಗೆ ಸಂಬಂಧಿಸಿದಂತೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸಲಹಾ ಸಮಿತಿಯ ನಿರ್ಧಾರಗಳನ್ನು ಪಾಲಿಸಬೇಕು. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ನಿಗದಿ ಮಾಡುವ ಕನಿಷ್ಠ ವೇತನ ಕೇಂದ್ರ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿರಬಹುದು. ಆದರೆ, ಕಡಿಮೆ ಇರುವ ಹಾಗಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

## 4. ಖಾಸಗಿ ಕ್ಷೇತ್ರದಲ್ಲಿ ಕನ್ನಡಿಗರಿಗೆ ಉದ್ಯೋಗ

### ಪ್ರಮುಖ ಸುದ್ದಿ

- ಐಟಿ-ಬಿಟಿಯಂಥ ಮಹತ್ತರ ಉದ್ಯಮ ಹೊರತುಪಡಿಸಿ ಕೈಗಾರಿಕಾ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಆದ್ಯತೆ ನೀಡುವಂತೆ ಡಾ.ಸರೋಜಿನಿ ಮಹಿಷಿ ವರದಿಯ ಶಿಫಾರಸಿಗೆ ಹಲವು ದಶಕಗಳ ಬಳಿಕ ಕಾನೂನಾತ್ಮಕ ಬೆಂಬಲ ನೀಡಲು ರಾಜ್ಯ ಸರಕಾರ ಮುಂದಾಗಿದೆ.

### ಮುಖ್ಯ ಅಂಶಗಳು

- ಕರ್ನಾಟಕ ಇಂಡಸ್ಟ್ರಿಯಲ್ ಎಂಪ್ಲಾಯ್ಮೆಂಟ್ ಎಸ್ಟಾಬ್ಲಿಷ್ಮೆಂಟ್ ಆಕ್ಟ್-1961ರ ಆದೇಶಕ್ಕೆ ತಿದ್ದುಪಡಿಗೆ ಸರಕಾರ ಮುಂದಾಗಿದೆ. ರಾಜ್ಯ ಸರಕಾರದಿಂದ ಪ್ರತ್ಯಕ್ಷ ಹಾಗೂ ಪರೋಕ್ಷ ನೆರವಿನೊಂದಿಗೆ ಸ್ಥಾಪಿತವಾದ ಹಾಗೂ ತೆರಿಗೆ ವಿನಾಯಿತಿ ಪಡೆದ ಕೈಗಾರಿಕೆಗಳಲ್ಲಿ ಲಭ್ಯತೆ ಇದ್ದರೆ ಸಿ ಮತ್ತು ಡಿ ದರ್ಜೆಯ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ನಿಯಮ ರೂಪಿಸಲು ನಿರ್ಧರಿಸಲಾಗಿದೆ. ಮಹಿಷಿ ವರದಿಗೆ ಇದೇ ಮೊದಲ ಬಾರಿಗೆ ಕಾನೂನಾತ್ಮಕ ಬೆಂಬಲ ನೀಡುವ

ಪ್ರಯತ್ನ ನಡೆದಿರುವುದನ್ನು ಬಿಟ್ಟರೆ ಉದ್ಯೋಗ ನೀಡುವಿಕೆಯನ್ನು ಕಡ್ಡಾಯ ಅಥವಾ ಐಚ್ಛಿಕ ಎಂದು ಘೋಷಿಸುವಲ್ಲಿ ರಾಜ್ಯ ಸರಕಾರ ಮೀನಾಮೇಷ ಎಣಿಸಿದೆ.

### ಮೀಸಲು ಹೇಗೆ?

- ವಿವಿಧ ರೀತಿಯಲ್ಲಿ ಸರ್ಕಾರದ ಸಹಾಯ ಪಡೆದುಕೊಳ್ಳುವ ಖಾಸಗಿ ವಲಯದ ಉದ್ಯಮಗಳಲ್ಲಿ ಹುದ್ದೆಗಳು ಲಭ್ಯವಿದ್ದಲ್ಲಿ ಕನ್ನಡಿಗರಿಗೆ 'ಸಿ' ಮತ್ತು 'ಡಿ' ದರ್ಜೆ ಕೆಲಸ ನೀಡಬೇಕಾಗುತ್ತದೆ.
- ಸರ್ಕಾರದಿಂದ ಪ್ರೋತ್ಸಾಹಧನ, ತೆರಿಗೆ, ಕಂದಾಯ, ವಿದ್ಯುತ್ ದರರಿಯಾಯಿತಿ, ಪಾಲಿಸಿ ಮೀಸಲು ಇನ್ಸೆಂಟಿವ್ ಪಡೆದುಕೊಳ್ಳುವ ಕಂಪನಿಗಳು ಕನ್ನಡಿಗರಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಆದ್ಯತೆ ನೀಡಬೇಕಾಗುತ್ತದೆ.
- ಒಂದು ವೇಳೆ ಹುದ್ದೆ ಇದ್ದರೂ ಅರ್ಜಿದಾರರು ಆದ್ಯತೆ ಅವಕಾಶ ವಂಚಿತರಾದರೆ, ಅಂಥವರು ಜಿಲ್ಲಾಧಿಕಾರಿ ನೇತೃತ್ವದ ಸಮಿತಿಗೆ ದೂರುಕೊಡಬಹುದು.
- ಆ ಸಮಿತಿ ಸಂಬಂಧಪಟ್ಟವರನ್ನು ಕರೆಸಿ ವಿಚಾರಣೆ ಮಾಡಿ ಸೂಕ್ತ ಕ್ರಮಕ್ಕೆ ಸೂಚಿಸಬಹುದು.
- ಸಮಿತಿ ನಿರ್ದೇಶನ ಪಾಲಿಸದೇ ಇದ್ದರೆ ಸೌಲಭ್ಯ ನಿಲ್ಲಿಸಲು ಸರ್ಕಾರಕ್ಕೆ ಶಿಫಾರಸು ಮಾಡಲು ಅವಕಾಶವಿರುತ್ತದೆ.

### ಸರೋಜಿನಿ ಮಹಿಷಿ ವರದಿಯಲ್ಲಿ ಏನಿದೆ?

- 1983ರಲ್ಲಿ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಕನ್ನಡಿಗರಿಗೆ ಕರ್ನಾಟಕದಲ್ಲಿ ಪರಭಾಷಿಕರಿಂದ ಅನ್ಯಾಯವಾಗುತ್ತಿದೆ ಎಂಬ ಕೂಗೆದ್ದಾಗ ಸರಕಾರದ ಕರ್ನಾಟಕದಲ್ಲಿ ಕನ್ನಡಿಗರಿಗೆ ದೊರೆಯುತ್ತಿದ್ದ ಉದ್ಯೋಗಾವಕಾಶಗಳನ್ನು ಪರಿಶೀಲಿಸಿ ವಿಮರ್ಶಿಸಲು ಶ್ರೀಮತಿ ಸರೋಜಿನಿ ಮಹಷಿಯವರಿಗೆ ಕೇಳಿಕೊಂಡಿತ್ತು.
- ಮಹಿಷಿಯವರು ನೀಡಿದ ವರದಿಯು ಸರೋಜಿನಿ ಮಹಿಷಿ ವರದಿ ಎಂದು ಖ್ಯಾತವಾಗಿದೆ. ಕರ್ನಾಟಕದಲ್ಲಿ ನ್ಯಾಯವಾಗಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ದೊರೆಯಬೇಕೆಂಬುದನ್ನು ಪ್ರತಿಪಾದಿಸುವ ಆ ವರದಿ ಇಂದಿಗೂ ಕೂಡ ಕನ್ನಡ ಮತ್ತು ಕರ್ನಾಟಕಪರ ಹೋರಾಟಗಳಿಗೆ ಆಧಾರವಾಗಿದೆ.
- ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿಯಲ್ಲಿ ಒಟ್ಟು ಮೂರು ಭಾಗಗಳಿವೆ. ಮೊದಲ ಭಾಗದಲ್ಲಿ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬೇಕಾದ ಅಂಶಗಳ 14 ಶಿಫಾರಸುಗಳಿವೆ. ಎರಡನೇ ಭಾಗದಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಸಲಹೆಗಳ ಒಂಬತ್ತು ಅಂಶಗಳನ್ನು ಒಳಗೊಂಡ ಶಿಫಾರಸುಗಳಿವೆ. ಮೂರನೇ ಭಾಗದಲ್ಲಿ ಡಾ. ಸರೋಜಿನಿ ಮಹಿಷಿ ವರದಿಯ ಸಂಪೂರ್ಣ ಶಿಫಾರಸುಗಳ ಮಾಹಿತಿ ಇದೆ.

### ಪ್ರಮುಖ ಶಿಫಾರಸುಗಳು:

- ಐಟಿ, ಬಿಟಿ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಿಗೆ ಪೂರ್ವ ಷರತ್ತು ವಿಧಿಸಬೇಕು

- ಎಂಎನ್‌ಸಿ ಬ್ಯಾಂಕ್‌ಗಳೂ ಸೇರಿ ರಾಜ್ಯದ ಎಲ್ಲ ಬ್ಯಾಂಕ್'ಗಳಲ್ಲಿ ಗುಮಾಸ್ತರ ಹುದ್ದೆ ನೇಮಕಾತಿ ವೇಳೆ ಕನ್ನಡ ಭಾಷಾ ಜ್ಞಾನ ಕಡ್ಡಾಯಗೊಳಿಸಬೇಕು
- ರಾಜ್ಯದ ಸರ್ಕಾರಿ ವಲಯದ ಉದ್ದಿಮೆಗಳಲ್ಲಿ ಎಲ್ಲ ಹುದ್ದೆಗಳಿಗೂ ಕನ್ನಡಿಗರನ್ನೇ ಆಯ್ಕೆ ಮಾಡಬೇಕು. ಅನಿವಾರ್ಯ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪೂರ್ವಾನುಮತಿಯೊಂದಿಗೆ ಹೊರ ರಾಜ್ಯದವರನ್ನು ಪರಿಗಣಿಸಬಹುದು.
- ಉದ್ಯೋಗ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲು ಪ್ರತ್ಯೇಕ ತಾಂತ್ರಿಕ ಸಲಹಾ ಮಂಡಳಿ ರಚಿಸಬೇಕು.
- ಕೇಂದ್ರದ ಎಂಪ್ಲಾಯ್‌ಮೆಂಟ್ ನ್ಯೂಸ್ ಮಾದರಿಯಲ್ಲಿ ರಾಜ್ಯದ ಎಲ್ಲ ವಲಯಗಳ ಉದ್ಯೋಗಾವಕಾಶವನ್ನು ಕನ್ನಡದಲ್ಲಿಯೇ ಜಾಹೀರಾತು ನೀಡಬೇಕು.
- ಸ್ಥಳೀಯರು ಎಂದು ಪರಿಗಣಿಸುವಾಗ ರಾಜ್ಯದಲ್ಲಿ 15 ವರ್ಷಗಳ ಕಾಲ ವಾಸವಾಗಿರುವ ನಿರ್ಬಂಧ ಇರಬೇಕು. ಕನ್ನಡ ಭಾಷಾ ಜ್ಞಾನವೂ ಕಡ್ಡಾಯವಾಗಿ ಇರಬೇಕು.
- ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ 10ನೇ ತರಗತಿವರೆಗೆ ಓದಿರುವ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿ ಓದಿದವರಿಗೆ ಸಿಗುವ ಎಲ್ಲ ಸೌಲಭ್ಯಗಳು ಸಿಗಬೇಕು.
- ರಾಜ್ಯದ ಕೇಂದ್ರ ಮತ್ತು ಸರ್ಕಾರಿ ಕಚೇರಿಗಳು, ಉದ್ಯಮಗಳು ಹಾಗೂ ಖಾಸಗಿ ವಲಯದಲ್ಲಿ ನಾಮಫಲಕ, ಜಾಹೀರಾತು ಫಲಕ ಹಾಗೂ ಹೆದ್ದಾರಿ ಫಲಕಗಳನ್ನು ಅಳವಡಿಸುವಾಗ ಕನ್ನಡಕ್ಕೆ ಪ್ರಥಮ ಆದ್ಯತೆ ನೀಡಬೇಕು.
- ರಾಜ್ಯದಲ್ಲಿರುವ ಸಿಬಿಎಸ್‌ಸಿ, ಐಸಿಎಸ್'ಸಿ, ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಇತರ ಆಂಗ್ಲ ಭಾಷೆಗಳ ಶಿಕ್ಷಣ ಸಂಸ್ಥೆಗಳಲ್ಲಿ 1ರಿಂದ 10ನೇ ತರಗತಿವರೆಗೆ ರಾಜ್ಯಭಾಷೆಯಾದ ಕನ್ನಡವನ್ನು ಒಂದು ವಿಷಯವಾಗಿ ಕಡ್ಡಾಯಗೊಳಿಸಬೇಕು.
- ಉನ್ನತ ಶಿಕ್ಷಣ ಅಥವಾ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಕಡ್ಡಾಯವಾಗಿ ಕನ್ನಡದಲ್ಲೇ ಇರಬೇಕು.
- ಸರ್ಕಾರ ಆಡಳಿತದಲ್ಲಿ ಬಳಸುವ ಎಲ್ಲ ತಂತ್ರಾಂಶಗಳು, ಖಾಸಗಿ ವಲಯದ ಸಾರ್ವಜನಿಕ ಸಂಪರ್ಕದಲ್ಲಿ ಬಳಸುವ ಸಾಧನಗಳು, ಅಭಿವ್ಯಕ್ತಿ ಮಾಹಿತಿಗಳು ಕನ್ನಡದಲ್ಲೇ ಕಡ್ಡಾಯವಾಗಿ ಬಳಸಬೇಕು.

## 5. ಆರ್ಥಿಕ ಕಪ್ಪುಪಟ್ಟಿಗೆ ಪಾಕಿಸ್ತಾನ ?

### ಪ್ರಮುಖ ಸುದ್ದಿ

➢ ಜಾಗತಿಕವಾಗಿ ಪಾಕಿಸ್ತಾನವನ್ನು ಮೂಲೆಗುಂಪು ಮಾಡಲು ಭಾರತ ಒಂದೊಂದೆ ಹೆಜ್ಜೆ ಇಡುತ್ತಿದ್ದು, ಆರ್ಥಿಕ ವ್ಯವಹಾರಗಳ ಕಾರ್ಯಪಡೆಯಲ್ಲಿ(ಎಫ್‌ಎಟಿಎಫ್) ಪಾಕಿಸ್ತಾನವನ್ನು ಕಪ್ಪುಪಟ್ಟಿಗೆ ಸೇರಿಸಲು ತಯಾರಿ ನಡೆಸುತ್ತಿದೆ.

### ಮುಖ್ಯ ಅಂಶಗಳು

- ಈಗಾಗಲೇ ಪಾಕಿಸ್ತಾನವು ಎಫ್‌ಎಟಿಎಫ್‌ನ ಕಂದು ಪಟ್ಟಿಯಲ್ಲಿದೆ. ಸದ್ಯ ಕಪ್ಪು ಪಟ್ಟಿಯಲ್ಲಿ ಉತ್ತರ ಕೊರಿಯಾ ಹಾಗೂ ಇರಾನ್ ದೇಶಗಳಿವೆ. ಎಫ್‌ಎಟಿಎಫ್ ನಿಯಮದ ಪ್ರಕಾರ ಅಕ್ರಮ ಆರ್ಥಿಕ ವ್ಯವಹಾರ ಹಾಗೂ ಭಯೋತ್ಪಾದನೆಗೆ ಆರ್ಥಿಕ ನೆರವು ನೀಡುತ್ತಿರುವ ರಾಷ್ಟ್ರಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ.

### ಆರ್ಥಿಕ ವ್ಯವಹಾರಗಳ ಕಾರ್ಯಪಡೆ ಬಗ್ಗೆ ( FATF)

- ಇದು ಒಂದು ಅಂತರ ಸರ್ಕಾರದ ನೀತಿ ಮಾಡುವ ಸಂಸ್ಥೆಯಾಗಿದೆ
- ಮನಿ ಲಾಂಡರಿಂಗ್ ಮತ್ತು ಭಯೋತ್ಪಾದಕ ಹಣಕಾಸುಗಳ ವಿರುದ್ಧ ಹೋರಾಡಲು ಅಂತಾರಾಷ್ಟ್ರೀಯ ಮಾನದಂಡಗಳನ್ನು ಸ್ಥಾಪಿಸುವುದು ಇದರ ಉದ್ದೇಶವಾಗಿದೆ.
- ಮನಿ ಲಾಂಡರಿಂಗ್ ಬೆಳೆಯುತ್ತಿರುವ ಸಮಸ್ಯೆಯನ್ನು ಎದುರಿಸಲು 1989 ರಲ್ಲಿ ಪ್ಯಾರಿಸ್ (ಫ್ರಾನ್ಸ್) ಜಿ 7 ಶೃಂಗಸಭೆಯಲ್ಲಿ ಸ್ಥಾಪಿಸಲಾಯಿತು.
- ಇದು 39 ದೇಶಗಳಲ್ಲಿದೆ.
- ಭಾರತವು ಒಂದು ಸದಸ್ಯ ದೇಶ.
- FATF ಸಚಿವಾಲಯವು ಪ್ಯಾರಿಸ್ನ ಒಇಸಿಡಿ ಕೇಂದ್ರ ಕಾರ್ಯಾಲಯದಲ್ಲಿದೆ.
- ಆರಂಭದಲ್ಲಿ ಇದು ಮನಿ ಲಾಂಡರಿಂಗ್ ವಿರುದ್ಧ ಹೋರಾಡಲು ನೀತಿಗಳನ್ನು ಅಭಿವೃದ್ಧಿಪಡಿಸುತ್ತಿದೆ. ಆದರೆ 2001 ರಲ್ಲಿ ಅದರ ಉದ್ದೇಶವು ಭಯೋತ್ಪಾದನೆ ಹಣಕಾಸು ವಿರುದ್ಧ ಕಾರ್ಯನಿರ್ವಹಿಸಲು ವಿಸ್ತರಿಸಿತು.

### ಉದ್ದೇಶಗಳು:

- ಮಾನದಂಡಗಳನ್ನು ಹೊಂದಿಸಿ ಮತ್ತು ಮನಿ ಲಾಂಡರಿಂಗ್, ಭಯೋತ್ಪಾದಕ ಹಣಕಾಸು ಮತ್ತು ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸಮಗ್ರತೆಗೆ ಸಂಬಂಧಿಸಿದ ಇತರ ಬೆದರಿಕೆಗಳನ್ನು ಎದುರಿಸಲು ಕಾನೂನು, ನಿಯಂತ್ರಕ ಮತ್ತು ಕಾರ್ಯಾಚರಣೆಯ ಕ್ರಮಗಳ ಪರಿಣಾಮಕಾರಿ ಅನುಷ್ಠಾನವನ್ನು ಉತ್ತೇಜಿಸುವುದು.

### ಕಾರ್ಯಗಳು:

- ಮನಿ ಲಾಂಡರಿಂಗ್ ಮತ್ತು ಭಯೋತ್ಪಾದನಾ ಹಣಕಾಸುಗಳ ವಿರುದ್ಧ ಹೋರಾಡಲು ಅಂತಾರಾಷ್ಟ್ರೀಯ ಮಾನದಂಡಗಳನ್ನು ಹೊಂದಿಸಿ.
- FATF ಮಾನದಂಡಗಳಿಗೆ ಅನುಗುಣವಾಗಿ ಮಾನ್ಯತೆ ಮತ್ತು ಮೇಲ್ವಿಚಾರಣೆ.
- ಮನಿ ಲಾಂಡರಿಂಗ್ ಮತ್ತು ಭಯೋತ್ಪಾದನಾ ಹಣಕಾಸು ವಿಧಾನಗಳು, ಪ್ರವೃತ್ತಿಗಳು ಮತ್ತು ತಂತ್ರಗಳ ಅಧ್ಯಯನಗಳನ್ನು ನಡೆಸುವುದು.

- ಪ್ರಸರಣದ ಹಣಕಾಸು (ರಾಸಾಯನಿಕ, ಜೈವಿಕ ಮತ್ತು ಪರಮಾಣು ಶಸ್ತ್ರಾಸ್ತ್ರಗಳ ಪ್ರಸರಣವನ್ನು ಉತ್ತೇಜಿಸಲು ಬಳಸಲಾಗುತ್ತದೆ) ಹೊಸ ಮತ್ತು ಉದಯೋನ್ಮುಖ ಬೆದರಿಕೆಗಳಿಗೆ ಪ್ರತಿಕ್ರಿಯಿಸುವುದು

### ಕಪ್ಪು ಪಟ್ಟಿ ಸೇರಿದರೆ ಬೀರುವ ಪರಿಣಾಮ

- ಐಎಂಎಫ್, ವಿಶ್ವಬ್ಯಾಂಕ್, ಎಡಿಬಿ, ಐರೋಪ್ಯ ಒಕ್ಕೂಟಗಳಿಂದ ಆರ್ಥಿಕ ನೆರವು ಬಂದ್
- ಮೂಡಿ, ಫಿಚ್ ಇತರ ಜಾಗತಿಕ ಆರ್ಥಿಕ ಸಂಸ್ಥೆಗಳು ಈ ದೇಶಕ್ಕೆ ಮಾನ್ಯತೆ ನೀಡುವುದಿಲ್ಲ
- ವಿಶ್ವದ ಇತರ ದೇಶಗಳ ಬಂಡವಾಳ ಹೂಡಿಕೆ ಹಾಗೂ ಆರ್ಥಿಕ ನೆರವಿನ ಮೇಲೂ ಪ್ರತಿಕೂಲ ಪರಿಣಾಮ

## 6. ಇಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಮೂಲ ಸೌಕರ್ಯ ನಿರ್ಮಾಣಕ್ಕೆ ಪ್ರತ್ಯೇಕ ಮಾರ್ಗಸೂಚಿ

### ಪ್ರಮುಖ ಸುದ್ದಿ

- ದೇಶದಲ್ಲಿ ಇಲೆಕ್ಟ್ರಿಕ್ ವೆಹಿಕಲ್ (ಇವಿ)ಗಳ ಬಳಕೆ ಉತ್ತೇಜಿಸಲು ಕೇಂದ್ರ ಸರ್ಕಾರ ಸಾಕಷ್ಟು ರಿಯಾಯಿತಿಗಳನ್ನು ಘೋಷಿಸಿದೆ. ಪರಿಣಾಮ ಇಲೆಕ್ಟ್ರಿಕ್ ವಾಹನಗಳ ಸಂಖ್ಯೆ ದಿನೇದಿನೆ ಅಧಿಕವಾಗುತ್ತಿದೆ.ಆದರೆ ನಿರೀಕ್ಷೆಯಷ್ಟು ವೇಗವಾಗಿ ಇಲೆಕ್ಟ್ರಿಕ್ ವಾಹನಗಳ ಸಂಖ್ಯೆ ಬೆಳವಣಿಗೆ ಕಾಣುತ್ತಿಲ್ಲ.ಚಾರ್ಜಿಂಗ್ ಮೂಲ ಸೌಕರ್ಯಗಳ ಕೊರತೆ ಇದಕ್ಕೆ ಕಾರಣವಾಗಿದೆ. ಆದ್ದರಿಂದ ಚಾರ್ಜಿಂಗ್ ಮೂಲಸೌಕರ್ಯಗಳನ್ನು ಹೆಚ್ಚಿಸಲು ಕೇಂದ್ರಸರ್ಕಾರದ ಸಚಿವ ಸಂಪುಟ ಇಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಮೂಲ ಸೌಕರ್ಯ ನಿರ್ಮಾಣಕ್ಕೆ ಪ್ರತ್ಯೇಕ ಮಾರ್ಗಸೂಚಿಗಳನ್ನು ರೂಪಿಸಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಅಂಶಗಳು

### ಮಾರ್ಗಸೂಚಿಗಳಲ್ಲಿನ ಕೆಲವು ಪ್ರಮುಖ ಅಂಶಗಳೆಂದರೆ:

- ಹೆದ್ದಾರಿಯ ಪ್ರತಿ 25 ಕಿಲೋಮೀಟರ್ ಅಂತರದಲ್ಲಿ ಎರಡೂ ಭಾಗಗಳಲ್ಲಿ ತಲಾ ಒಂದು ಸಾರ್ವಜನಿಕ ವಾಹನ ಚಾರ್ಜಿಂಗ್ ಸ್ಟೇಷನ್ ಇರಬೇಕು. ದೂರ ಪ್ರಯಾಣಿಸುವ ಹಾಗೂ ಅಧಿಕ ಸಾಮರ್ಥ್ಯದ ಇಲೆಕ್ಟ್ರಿಕ್ ವಾಹನಗಳಿಗಾಗಿ ಹೆದ್ದಾರಿಯ ಪ್ರತಿ 100 ಕಿಲೋ ಮೀಟರ್‌ಗೆ ಒಂದು ಚಾರ್ಜಿಂಗ್ ಘಟಕ ನಿರ್ಮಿಸಬೇಕು.
- ಜನ ಸಾಮಾನ್ಯರು ವಾಸಿಸುವ ಪ್ರದೇಶಗಳಲ್ಲಿಯೂ ಇದೇ ನಿಯಮಗಳು ವರ್ತಿಸುತ್ತವೆ. ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಈ ನಿಯಮಗಳನ್ನು ತಮ್ಮ ಇಲೆಕ್ಟ್ರಿಕ್ ವಾಹನಗಳ ಮಾರ್ಗಸೂಚಿ ಕಾನೂನುಗಳಲ್ಲಿ ಅಳವಡಿಸಿಕೊಳ್ಳಬೇಕು.
- ಕೇಂದ್ರ ಸರ್ಕಾರ 2030 ಕ್ಕೆ ದೇಶದ ರಸ್ತೆ ಗಳಲ್ಲಿ ಶೇ.25 ಇಲೆಕ್ಟ್ರಿಕ್ ವಾಹನಗಳು ಸಂಚರಿಸಬೇಕು ಎಂಬ ಮಹತ್ವದ ಗುರಿಯನ್ನು ನಿರ್ದೇಶಿಸಿಕೊಂಡಿದೆ. ಗುರಿ ಸಾಧಿಸಲು ದೇಶದ ಎಲ್ಲಾ

ಹೆದ್ದಾರಿಗಳಲ್ಲಿ ಇಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಮೂಲಸೌಕರ್ಯ ಒದಗಿಸಲು ಭರದಿಂದ ಕಾರ್ಯನಿರ್ವಹಿಸುತ್ತಿದೆ.

## ENVIRONMRNT AND ECOLOGY

## 1. ಸ್ವಚ್ಛ ಶಕ್ತಿ-2019

### ಪ್ರಮುಖ ಸುದ್ದಿ

- ಇತ್ತೀಚಿಗೆ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಸ್ವಚ್ಛ ಶಕ್ತಿ-2019 ಪ್ರಶಸ್ತಿಗಳನ್ನು ವಿತರಿಸಿದರು .

### ಮುಖ್ಯ ಅಂಶಗಳು

### ಏನಿದು ಸ್ವಚ್ಛ ಶಕ್ತಿ-2019 ?

- ಸ್ವಚ್ಛ ಶಕ್ತಿ – 2019, ಸ್ವಚ್ಛ ಭಾರತ ಅಭಿಯಾನದಲ್ಲಿ ಗ್ರಾಮೀಣ ಮಹಿಳೆಯರ ನಾಯಕತ್ವ ಪಾತ್ರವನ್ನು ಕೇಂದ್ರೀಕರಿಸುವ ಒಂದು ರಾಷ್ಟ್ರೀಯ ಸಮಾವೇಶ. ಈ ಸಮಾವೇಶದಲ್ಲಿ ದೇಶದೆಲ್ಲೆಡೆಯಿಂದ ಮಹಿಳಾ ಸರಪಂಚರು ಮತ್ತು ಪಂಚರು ಭಾಗವಹಿಸಿದ್ದರು
- ಕುಡಿಯುವ ನೀರು ಮತ್ತು ನೈರ್ಮಲೀಕರಣ ಸಚಿವಾಲಯವು ಹರಿಯಾಣ ಸರ್ಕಾರದ ಸಹಯೋಗದಲ್ಲಿ ಸ್ವಚ್ಛ ಶಕ್ತಿ-2019ನ್ನು ಆಯೋಜಿಸಿದೆ. ಸ್ವಚ್ಛ ಭಾರತಕ್ಕಾಗಿ ಗ್ರಾಮೀಣ ಭಾಗಗಳಲ್ಲಿ ತಳಮಟ್ಟದಲ್ಲಿ ಕೈಗೊಂಡ ಉತ್ತಮ ಚಟುವಟಿಕೆಗಳನ್ನು ಅವರು ಹಂಚಿಕೊಳ್ಳಲಿದ್ದಾರೆ. ಸಮಾವೇಶವು ಸ್ವಚ್ಛ ಭಾರತದ ಸಾಧನೆಗಳು ಹಾಗೂ ಇತ್ತೀಚೆಗೆ ಜಾಗತಿಕ ಮಟ್ಟದಲ್ಲಿ ಪ್ರಥಮವೆನಿಸಿರುವ ಅನನ್ಯವಾದ ಸ್ವಚ್ಛ ಸುಂದರ ಶೌಚಾಲಯದ (neat and clean toilet) ಬಗ್ಗೆ ಬೆಳಕು ಚೆಲ್ಲಲಿದೆ.

ಹಿನ್ನೆಲೆ:

- ಪ್ರಧಾನಿ ಶ್ರೀ ನರೇಂದ್ರ ಮೋದಿಯವರು 2017ರಲ್ಲಿ ಗುಜರಾತ್ ನ ಗಾಂಧಿನಗರದಲ್ಲಿ ಸ್ವಚ್ಛ ಶಕ್ತಿ ಕಾರ್ಯಕ್ರಮಕ್ಕೆ ಚಾಲನ ನೀಡಿದ್ದರು. ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಗುಜರಾತ್ ನಲ್ಲಿ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛ ಶಕ್ತಿ-2017 ಸಮಾವೇಶದಲ್ಲಿ ದೇಶದೆಲ್ಲೆಡೆಯಿಂದ ಆಗಮಿಸಿದ್ದ 6000 ಮಹಿಳಾ ಸರಪಂಚರು ಭಾಗವಹಿಸಿದ್ದರು.
- ಎರಡನೇ ಸ್ವಚ್ಛ ಶಕ್ತಿ ಸಮಾವೇಶ ಸ್ವಚ್ಛ ಶಕ್ತಿ-2018 ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆಯಿತು. ದೇಶಾದ್ಯಂತ ಸ್ವಚ್ಛ ಭಾರತಕ್ಕಾಗಿ ಅಭೂತಪೂರ್ವ ಕೊಡುಗೆ ನೀಡಿದ ದೇಶದ 8000 ಮಹಿಳಾ ಸರಪಂಚರು, 3000 ಮಹಿಳಾ ಸ್ವಚ್ಛಗ್ರಾಹಿಗಳು ಮತ್ತು ಮಹಿಳಾ ಚಾಂಪಿಯನ್ ಗಳನ್ನು ಗುರುತಿಸಲಾಗಿತ್ತು.
- ಈಗ ಮೂರನೇ ಸಮಾವೇಶ ಕುರುಕ್ಷೇತ್ರದಲ್ಲಿ ಉದ್ಘಾಟನೆಯಾಗುತ್ತಿದೆ.
- ತಳಮಟ್ಟದ, ಗ್ರಾಮೀಣ ಮಹಿಳೆಯರು ಬದಲಾವಣೆಯ ಪ್ರತಿನಿಧಿಗಳಾಗಿ ಹೇಗೆ ಸ್ವಚ್ಛ ಭಾರತದ ಚಟುವಟಿಕೆಗಳಲ್ಲಿ ಸಮುದಾಯವನ್ನು ಕ್ರೋಢೀಕರಿಸಿ ಮುನ್ನಡೆಸುತ್ತಾರೆ ಎಂಬುದಕ್ಕೆ ಸ್ವಚ್ಛ ಶಕ್ತಿ ಒಂದು ಉದಾಹರಣೆಯಾಗಿದೆ. 2019ರ ಅಕ್ಟೋಬರ್ 2 ರೊಳಗೆ ಸ್ವಚ್ಛ ಮತ್ತು ಬಯಲು ಬಹಿರ್ದೆಸೆ ಮುಕ್ತ ಭಾರತದ ಗುರಿ ಸಾಧನೆಗಾಗಿ 2014ರ ಅಕ್ಟೋಬರ್ 2 ರಂದು ಪ್ರಧಾನಿ ನರೇಂದ್ರ ಮೋದಿಯವರು ಚಾಲನೆ ನೀಡಿದ ಸ್ವಚ್ಛ ಭಾರತ ಅಭಿಯಾನದಡಿ ನಡೆಯುತ್ತಿರುವ ಚಟುವಟಿಕೆಗಳಲ್ಲಿ ಈ ಆಂದೋಲನವು ಒಂದು ಭಾಗವಾಗಿದೆ.

## 2. ಕೃತಕ ಎಲೆಗಳನ್ನು ಅಭಿವೃದ್ಧಿ ಪಡಿಸಿದ ಅಮೆರಿಕದ ವಿಜ್ಞಾನಿಗಳು

ಪ್ರಮುಖ ಸುದ್ದಿ

- ಸಾಮಾನ್ಯ ಸಸ್ಯಗಳಿಂದ ವೇಗವಾಗಿ ಇಂಗಾಲದ ಡೈಆಕ್ಸೈಡ್‌ಅನ್ನು ಹೀರಿಕೊಳ್ಳುವ ಕೃತಕ ಎಲೆಗಳನ್ನು ಅಮೆರಿಕದ ವಿಜ್ಞಾನಿಗಳು ಅಭಿವೃದ್ಧಿ ಮಾಡಿದ್ದಾರೆ. ಚಿಕಾಗೋನಲ್ಲಿರುವ ಯೂನಿವರ್ಸಿಟಿ ಆಫ್ ಇಲ್ಲಿನಾಯ್ಸ್ (ಯುಐಸಿ)ನ ಸಂಶೋಧಕರು ಕೃತಕ ಸಸ್ಯವನ್ನು ಅಭಿವೃದ್ಧಿ ಪಡಿಸಿದ್ದಾರೆ.

ಮುಖ್ಯ ಅಂಶಗಳು

ದ್ಯುತಿ ಸಂಶ್ಲೇಷಣಾ ಕ್ರಿಯೆ ಎಂದರೇನು ?

- ಸಸ್ಯಗಳು ನೈಸರ್ಗಿಕವಾಗಿ ಗಾಳಿಯನ್ನು ಶುದ್ಧೀಕರಿಸುತ್ತವೆ. ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೈಡ್‌ಅನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಈ ಪ್ರಕ್ರಿಯೆಯನ್ನು ಫೋಟೋಸಿಂಥಸಿಸ್ ಎಂದು ವೈಜ್ಞಾನಿಕವಾಗಿ ಕರೆಯಲಾಗುತ್ತದೆ. ಕನ್ನಡದಲ್ಲಿ

ದ್ಯುತಿ ಸಂಶ್ಲೇಷಣಾ ಕ್ರಿಯೆ ಎನ್ನಲಾಗುತ್ತದೆ. ಅಶ್ವತ್ಥಮರದ ಎಲೆಗಳು ಅತಿಹೆಚ್ಚು ಆಮ್ಲಜನಕ ಬಿಡುಗಡೆ ಮಾಡುತ್ತವೆ.

### ಸಂಶೋಧನೆಗೆ ಕಾರಣವೇನು ?

- ವಾತಾವರಣದಲ್ಲಿ ಇಂಗಾಲ ಹೆಚ್ಚಾಗಲು ಪ್ರಮುಖ ಕಾರಣ ಸಸ್ಯಗಳ ನಾಶ. ನಗರೀಕರಣ ಹೆಚ್ಚಾದಂತೆ ಸಸ್ಯಕುಲವನ್ನು ಮನುಷ್ಯ ನಾಶ ಮಾಡುತ್ತಿರುವ ಪರಿಣಾಮ ಉತ್ಪತ್ತಿಯಾಗುತ್ತಿರುವ ಇಂಗಾಲವನ್ನು ನಿರ್ಮೂಲನೆಗೊಳಿಸುವ ಪ್ರಮಾಣದ ಸಸ್ಯಗಳ ಕೊರತೆಯನ್ನು ಭೂಮಿ ಎದುರಿಸುತ್ತಿದೆ.
- ನೈಜ ಸಸ್ಯಗಳಂತೆ ಕಂಡುಬರುವ ಕೃತಕ ಸಸ್ಯವು ಕಾರ್ಬನ್ ಡೈಆಕ್ಸೈಡ್‌ಅನ್ನು ಆಮ್ಲಜನಕವಾಗಿ ಪರಿವರ್ತನೆ ಮಾಡುತ್ತದೆ. ಸಾಮಾನ್ಯ ಸಸ್ಯಗಳಿಗಿಂತ 10 ಪಟ್ಟು ಹೆಚ್ಚು ವೇಗವಾಗಿ ಎಂಬುದು ಸಂಶೋಧನೆಯ ಹೈಲೈಟ್ ಆಗಿದೆ.
- ಪ್ರಸ್ತುತ ವಿಜ್ಞಾನಿಗಳು ಸಾಧ್ಯಸಾಧ್ಯತೆ ಬಗ್ಗೆ ವಿಸ್ತೃತ ಅಧ್ಯಯನ ನಡೆಸಿ ಕೃತಕ ಸಸ್ಯ ಸೃಷ್ಟಿಗೆ ಸಿದ್ಧರಾಗಿದ್ದಾರೆ. ಕಂಟೈನರ್‌ಗಳಲ್ಲಿ ಪ್ರಯೋಗಾತ್ಮಕ ಪರೀಕ್ಷೆಗಳನ್ನು ನಡೆಸಿದ್ದಾರೆ. ಗಾಳಿಯಲ್ಲಿರುವ ಕಾರ್ಬನ್ ಡಾಆಕ್ಸೈಡ್‌ಅನ್ನು ನಿರ್ಮೂಲನೆಗೊಳಿಸುತ್ತದೆ.

### ಸಂಶೋಧನೆ ಏನು ?

- ವಿಜ್ಞಾನಿಗಳ ತಂಡ ಕೃತಕ ಎಲೆಯನ್ನು ನೀರು ತುಂಬಿದ ಕ್ಯಾಪ್ಸೂಲ್ ಒಳಗೆ ಅಳವಡಿಸಿದ್ದಾರೆ. ಕ್ಯಾಪ್ಸೂಲ್ ಅತ್ಯಂತ ಸೂಕ್ಷ್ಮ ತೂತುಗಳಿರುವ ಮೆಂಬ್ರೇನ್‌ನಿಂದ ಮಾಡಿದ್ದಾಗಿತ್ತು. ಸೂರ್ಯನ ಕಿರಣಗಳು ಬಿದ್ದಾಗ ನಿಧಾನವಾಗಿ ನೀರು ಆವಿಯಾಗುತ್ತ ಹೋಗುತ್ತದೆ. ಅತಿಸೂಕ್ಷ್ಮ ರಂಧ್ರಗಳ ಮೂಲಕ ಆವಿಯಾದ ನೀರು ಹೊರಗೆ ಹೋಗುತ್ತದೆ. ಈ ಪ್ರಕ್ರಿಯೆ ವೇಳೆ ಸುತ್ತಲಿನ ಇಂಗಾಲದ ಡೈಆಕ್ಸೈಡ್‌ಅನ್ನು ಸೂಕ್ಷ್ಮ ರಂಧ್ರಗಳು ಸೆಳೆಯುತ್ತವೆ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.
- ಇಂಗಾಲದ ಡೈಆಕ್ಸೈಡ್‌ಅನ್ನು ಕೃತಕ ಎಲೆ ಮೋನಾಕ್ಸೈಡ್ ಮತ್ತು ಆಮ್ಲಜನಕವನ್ನಾಗಿ ಪರಿವರ್ತನೆ ಮಾಡುತ್ತದೆ. ಹೀಗೆ ಉತ್ಪತ್ತಿಯಾದ ಆಮ್ಲಜನಕವನ್ನು ಹೊರಗೆ ಬಿಡಬಹುದು ಅಥವಾ ಸಂಗ್ರಹಿಸಿಡಬಹುದು. ಅಥವಾ ಅಪಾಯಕಾರಿ ಅನಿಲವನ್ನು ಬೇರ್ಪಡಿಸಿ ಮೆಥನಾಲ್‌ನಂತಹ ಸಂಶ್ಲೇಷಿತ ಇಂಧನವನ್ನು ಉತ್ಪತ್ತಿ ಮಾಡಬಹುದು ಎಂದು ಪ್ರಯೋಗದ ಬಗ್ಗೆ ವಿಜ್ಞಾನಿಗಳು ವಿವರಣೆ ನೀಡಿದ್ದಾರೆ.
- ವಿಜ್ಞಾನಿಗಳ ಪ್ರಕಾರ ಇಂತಹ 360 ಕೃತಕ ಎಲೆಗಳಿಂದ ಪ್ರತಿದಿನ ಅರ್ಧ ಟನ್ ಕಾರ್ಬನ್ ಮೋನಾಕ್ಸೈಡ್ ಉತ್ಪತ್ತಿ ಮಾಡಬಹುದು. 500 ಚದರ ಮೀಟರ್ ಪ್ರದೇಶದಲ್ಲಿ ಒಂದು ದಿನದಲ್ಲಿ ವಾತಾವರಣದಲ್ಲಿರುವ ಕಾರ್ಬನ್ ಡೈಆಕ್ಸೈಡ್ ಪ್ರಮಾಣವನ್ನು ಇಳಿಕೆ ಮಾಡಬಹುದು

## 3. ಭೂಮಿಯ ಒಳಗೂ ಪರ್ವತಗಳು-ವಿಜ್ಞಾನಿಗಳ ಸಂಶೋಧನೆ

### ಪ್ರಮುಖ ಸುದ್ದಿ

- ಭೂಮಿಯ ಪ್ರಮುಖ ರಚನೆಗಳಾದ ಪರ್ವತಗಳು ಸಾಗರದ ಆಳ ಪ್ರದೇಶ ಹಾಗೂ ಭೂಮಿ ಮೇಲೆ ಇರುವುದು ಎಲ್ಲರಿಗೂ ತಿಳಿದಿದೆ.ಆದರೆ ವಿಜ್ಞಾನಿಗಳ ಇತ್ತೀಚಿನ ಸಂಶೋಧನೆಯೊಂದು ಭೂಮಿ ಮೇಲ್ಮೈನಿಂದ 660 ಕಿ.ಮೀ. ಆಳದಲ್ಲಿರುವ ಮ್ಯಾಂಟಲ್ ಪದರದಲ್ಲೂ ಭಾರೀ ಗಾತ್ರದ ಒರಟಾದ ಪರ್ವತಗಳಿವೆ ಎಂದು ಹೇಳಿದ್ದಾರೆ

### ಮುಖ್ಯ ಅಂಶಗಳು

- ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ ಹಾಗೂ ಚೀನಾದ ಇನ್‌ಸ್ಟಿಟ್ಯೂಟ್ ಆಫ್ ಜಿಯೋಡೆಸಿ ಆ್ಯಂಡ್ ಜಿಯೋಫಿಸಿಕ್ಸ್ ವಿಜ್ಞಾನಿಗಳು ಜಂಟಿ ಸಂಶೋಧನೆ ನಡೆಸಿ ಈ ಮಹತ್ವದ ಅಂಶ ಕಂಡುಕೊಂಡಿದ್ದಾರೆ.
- ಭೂಮಿಯ ಕವಚ, ಮ್ಯಾಂಟಲ್ ಹಾಗೂ ಕೋರ್ ಅನ್ನು ದಾಟಿ ಭೂಮಿಯ ಮತ್ತೊಂದು ಭಾಗಕ್ಕೆ ಸಾಗುವ ಸಾಮರ್ಥ್ಯವಿರುವ ಪ್ರಬಲ ಅಲೆಗಳನ್ನು, ಹಾಗೂ 1994 ರಲ್ಲಿ ಬೊಲಿವಿಯಾದಲ್ಲಿ 2 ತೀವ್ರತೆಯಲ್ಲಿ ಸಂಭವಿಸಿದ ಜಗತ್ತಿನ ಎರಡನೇ ಅತ್ಯಂತ ಪ್ರಬಲ ಭೂಕಂಪದ ದತ್ತಾಂಶಗಳನ್ನು ಸಂಶೋಧನೆಗೆ ಬಳಸಿಕೊಂಡು ಇರುವಿಕೆಯನ್ನು ಪತ್ತೆಹಚ್ಚಿದ್ದಾರೆ.
- ಬೆಳಕಿನ ಕಿರಣಗಳಂತೆ ಪ್ರತಿಫಲಿಸುವ ಹಾಗೂ ಬಾಗುವ ಸಾಮರ್ಥ್ಯ ಹೊಂದಿರುವ ಭೂಕಂಪದ ಅಲೆಗಳು, ಏಕರೂಪದ ಬಂಡೆಗಳಲ್ಲಿ ನೇರವಾಗಿ ಸಾಗುತ್ತವೆ.
- ಆದರೆ, ಒರಟಾದ ಗಡಿ ಪ್ರದೇಶಗಳನ್ನುತಲುಪಿದಾಗ ಪ್ರತಿಫಲಿಸುವುದು ಅಥವಾ ವಕ್ರೀಭವನಗೊಳ್ಳುತ್ತವೆ. ಈ ಅಲೆಗಳನ್ನು ಭೂಮಿಯ ಆಳಕ್ಕೆ ಬಿಟ್ಟಾಗ ಮ್ಯಾಂಟಲ್ ಮಧ್ಯಭಾಗದಲ್ಲಿ ಭೂ ಕಂಪನ ಅಲೆಗಳು ವಕೀಕರಣಗೊಂಡಿರುವುದಲ್ಲದೆ, ಪ್ರತಿಫಲಿಸಿವೆ.
- ಇದರಿಂದ ಮ್ಯಾಂಟಲ್‌ನಲ್ಲಿ ಭೂ ಮೇಲ್ಮೈ ನ ಪರ್ವತಗಳಿಗಿಂತ ಕಠಿಣವಾದ ಪರ್ವತಗಳಂತ ರಚನೆಗಳಿವೆ ಎಂಬ ನಿರ್ಧಾರಕ್ಕೆ ವಿಜ್ಞಾನಿಗಳು ಬಂದಿದ್ದಾರೆ.
- ಭೂಮಿಯ ರಚನೆ ಕುರಿತು ತಿಳಿಯಲು ಈ ಸಂಶೋಧನೆ ಸಾಕಷ್ಟು ನೆರವಾಗಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ ಮಸ್ಸೂರಿಗೆ/ಮೈಸೂರಿಗೆ IAS/KAS

## SCIENCE AND TECHNOLOGY

### 1. ಬಾಹ್ಯಾಕಾಶ ಕ್ಷೇತ್ರದಲ್ಲಿ ಸಹಕಾರ ಕುರಿತ ತಿಳುವಳಿಕಾ ಒಡಂಬಡಿಕೆಗೆ ಸಂಪುಟದ ಅನುಮೋದನೆ.

**ಪ್ರಮುಖ ಸುದ್ದಿ**

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯು ಭಾರತ ಮತ್ತು ಫಿನ್ಲ್ಯಾಂಡ್ ನಡುವೆ ಬಾಹ್ಯಾಕಾಶವನ್ನು ಶಾಂತಿಯುತ ಉದ್ದೇಶಕ್ಕಾಗಿ ಬಳಸುವ ಕ್ಷೇತ್ರದಲ್ಲಿ ಸಹಕಾರ ಕುರಿತ ತಿಳುವಳಿಕಾ ಒಡಂಬಡಿಕೆಗೆ ಅನುಮೋದನೆ ನೀಡಿತು.

**ಮುಖ್ಯ ಅಂಶಗಳು**

**ಪರಿಣಾಮ:**

- ಅಂಕಿತ ಹಾಕಲಾದ ತಿಳುವಳಿಕಾ ಒಡಂಬಡಿಕೆ ಹೊಸ ಸಂಶೋಧನಾ ಕಾರ್ಯಚಟುವಟಿಕೆಗಳಿಗೆ ವೇಗ ನೀಡಲಿದೆ ಮತ್ತು ಭೂಮಿಯ ದೂರ ಸಂವೇದಿ ಕ್ಷೇತ್ರದಲ್ಲಿ ಅನ್ವಯಿಕತೆ ಸಾಧ್ಯತೆಗಳಿಗೂ ವೇಗ ದೊರೆಯಲಿದೆ. ಉಪಗ್ರಹ ಸಂಪರ್ಕ, ಉಪಗ್ರಹ ಸಂಚಾರ, ಬಾಹ್ಯಾಕಾಶ ವಿಜ್ಞಾನ ಮತ್ತು ಬಾಹ್ಯಾಕಾಶ ಅನ್ವೇಷಣೆಗೂ ಇದು ನೆರವಾಗಲಿದೆ.
- ಫಿನ್ಲ್ಯಾಂಡ್ ಸರಕಾರದ ಜೊತೆ ಸಹಕಾರವು ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಮನುಕುಲದ ಪ್ರಯೋಜನಕ್ಕಾಗಿ ಬಳಕೆ ಮಾಡುವ ಕ್ಷೇತ್ರದಲ್ಲಿ ಜಂಟಿ ಕಾರ್ಯಚಟುವಟಿಕೆ ಅಭಿವೃದ್ಧಿಗೆ ನೆರವಾಗಲಿದೆ.

**ವಿವರಗಳು:**

ತಿಳುವಳಿಕಾ ಒಡಂಬಡಿಕೆಯು ಈ ಕೆಳಗಿನ ಆಸಕ್ತಿಯ ಕ್ಷೇತ್ರಗಳಲ್ಲಿ ಸಹಕಾರವನ್ನು ಒಳಗೊಂಡಿರುತ್ತದೆ.

- ಭೂಮಿಯ ದೂರಸಂವೇದಿತ್ವ.
- ಉಪಗ್ರಹ ಸಂಪರ್ಕ ಮತ್ತು ಉಪಗ್ರಹ ಆಧಾರಿತ ಚಲನೆ.
- ಬಾಹ್ಯಾಕಾಶ ವಿಜ್ಞಾನ ಮತ್ತು ಗ್ರಹಗಳ ಅನ್ವೇಷಣೆ.
- ಬಾಹ್ಯಾಕಾಶ ವಸ್ತುಗಳು ಮತ್ತು ಭೂ ವ್ಯವಸ್ಥೆಯ ಅಭಿವೃದ್ಧಿ, ಪರೀಕ್ಷೆ ಮತ್ತು ಕಾರ್ಯನಿರ್ವಹಣೆ.
- ಭಾರತೀಯ ಉಡಾವಣಾಕಗಳ ಮೂಲಕ ಫಿನ್ನಿಶ್ ಬಾಹ್ಯಾಕಾಶ ವಸ್ತುಗಳ ಉಡಾವಣೆ.
- ಬಾಹ್ಯಾಕಾಶ ದತ್ತಾಂಶಗಳ ಸಂಸ್ಕರಣೆ ಮತ್ತು ಬಳಕೆ.
- ನವೀನ ಅನ್ವಯಿಕತೆಗಳ ಅಭಿವೃದ್ಧಿ ಮತ್ತು ಪರಿಹಾರ ಆಧಾರಿತ ಬಾಹ್ಯಾಕಾಶ ತಂತ್ರಜ್ಞಾನಗಳು ಮತ್ತು ಕೃತಕ ಬುದ್ಧಿಮತ್ತೆ ಬಳಕೆ.

- ಉದಯಿಸುತ್ತಿರುವ ಹೊಸ ಬಾಹ್ಯಾಕಾಶ ಅವಕಾಶಗಳಲ್ಲಿ ಸಹಕಾರ ಮತ್ತು ದತ್ತಾಂಶ ಪರಿಸರ ವ್ಯವಸ್ಥೆಗಳು ಹಾಗು ಬಾಹ್ಯಾಕಾಶದ ಸಹ್ಯ ಬಳಕೆ.
- ಈ ಎಂ.ಒ.ಯು. ಅಡಿಯಲ್ಲಿ ಅನುಷ್ಠಾನ ವ್ಯವಸ್ಥೆಯಡಿ ಕೈಗೆತ್ತಿಕೊಳ್ಳುವ ನಿರ್ದಿಷ್ಟ ಸಹಕಾರಿ ಯೋಜನೆಗಳ ನಿರ್ವಹಣೆಗೆ, ಸಹಭಾಗಿಗಳು ಅಥವಾ ಅವರ ಅಧಿಕಾರಿಗಳ ಮೂಲಕ, ಅನುಷ್ಠಾನ ಏಜೆನ್ಸಿಗಳ ಮೂಲಕ ಯೋಜನಾ ತಂಡಗಳನ್ನು, ಅವಶ್ಯವಿದ್ದ ಸಂದರ್ಭದಲ್ಲಿ ರಚಿಸಿಕೊಳ್ಳಬಹುದು

### ಅನುಷ್ಠಾನ ತಂತ್ರ ಮತ್ತು ಗುರಿಗಳು :

- ತಿಳುವಳಿಕಾ ಒಡಂಬಡಿಕೆಯಡಿ ಸಹಕಾರಿ ಚಟುವಟಿಕೆಗಳನ್ನು ಸಮನ್ವಯಗೊಳಿಸುವ ಉದ್ದೇಶದಿಂದ ಸಹಭಾಗಿಗಳು ಸಮನ್ವಯಕಾರರನ್ನು ನೇಮಿಸಿಕೊಳ್ಳಬಹುದು. ಈ ತಿಳುವಳಿಕಾ ಒಡಂಬಡಿಕೆಯನ್ನು (ಎಂ.ಒ.ಯು.) ಅನುಷ್ಠಾನಿಸಲು ಅನುಕೂಲವಾಗುವಂತೆ ಸಹಭಾಗಿಗಳು ಪರಸ್ಪರ ನಿರ್ಧರಿಸುವ ಮೂಲಕ ಭಾರತ ಅಥವಾ ಫಿನ್ಲ್ಯಾಂಡ್ ಗಳಲ್ಲಿ ಅನುಕ್ರಮವಾಗಿ ಭೇಟಿಯಾಗಬಹುದು ಅಥವಾ ವೀಡಿಯೋ ಕಾನ್ಫರೆನ್ಸ್ ಮೂಲಕ ಸಮಾಲೋಚಿಸಬಹುದು.
- ಅನುಷ್ಠಾನ ವ್ಯವಸ್ಥೆಯಡಿ ಕೈಗೆತ್ತಿಕೊಳ್ಳಲಾಗುವ ನಿರ್ದಿಷ್ಟ ಸಹಕಾರ ಯೋಜನೆಗಳ ನಿರ್ವಹಣೆಗಾಗಿ ಸಹಭಾಗಿಗಳು ಅಥವಾ ಅವರ ಅಧಿಕಾರಿಗಳು , ಅನುಷ್ಠಾನ ಏಜೆನ್ಸಿಗಳು ಅವಶ್ಯವಿದ್ದರೆ ಯೋಜನಾ ತಂಡಗಳನ್ನು ಸ್ಥಾಪಿಸಬಹುದು.
- ಫಿನ್ಲ್ಯಾಂಡ್ ಸರಕಾರವು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಹಕಾರಕ್ಕೆ ಆಸಕ್ತಿ ವ್ಯಕ್ತಪಡಿಸಿದ್ದರ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

## 2. ವಿಬಿಐಇಡಿ-VEHICLE-BORNE IMPROVISED EXPLOSIVE DEVICE

### ಪ್ರಮುಖ ಸುದ್ದಿ

- ದೇಶದ ಸೇನೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಉಗ್ರರು ಕಾರು ಆತ್ಮಹತ್ಯಾ ಬಾಂಬರ್ ಮೂಲಕ ದಾಳಿ ಮಾಡಿದ್ದಾರೆ. ಪುಲ್ವಾಮದಲ್ಲಿ ಉಗ್ರರು ಬಳಸಿದ ತಂತ್ರಜ್ಞಾನವನ್ನು VEHICLE-BORNE IMPROVISED EXPLOSIVE DEVICE (VBIED) ಎಂದು ಕರೆಯಲಾಗುತ್ತದೆ.

### ಮುಖ್ಯ ಅಂಶಗಳು

### ಹೇಗೆ ಬಳಕೆ ಮಾಡಲಾಗುತ್ತದೆ?

- ವಿಬಿಐಇ ಸ್ಫೋಟಕಗಳನ್ನು ಅಳವಡಿಸಿರುವ ವಾಹನಗಳನ್ನು ಸ್ಫೋಟ ಮಾಡಲು ಹಲವು ತಂತ್ರಗಳನ್ನು ಬಳಕೆ ಮಾಡಲಾಗುತ್ತದೆ. ಪ್ರಮುಖವಾಗಿ ವಾಹನ ಚಾಲಕನ ಡೋರ್ ಓಪನ್ ಮಾಡುತ್ತಿದ್ದಾಗ, ವಾಹನ ವೇಗ ಹೆಚ್ಚಾಗುತ್ತಿದಂತೆ, ವಾಹನ ಇಗ್ನಿಷನ್ ಆಫ್ ಅಥವಾ ಆನ್ ಮಾಡುವುದು, ಪಾರ್ಕ್ ಮಾಡಿರುವ ವಾಹನ ಸ್ಫೋಟಕ್ಕೆ ಸಮಯ ನಿಗದಿ ಪಡಿಸುವುದು. ಈ

ಎಲ್ಲಾ ಮಾರ್ಗಗಳ ಮೂಲಕ ಸ್ಫೋಟ ಆಗುವಂತೆ ಮಾಡಬಹುದು. ಪುಲ್ವಾಮಾ ದಾಳಿಯಲ್ಲಿ ಉಗ್ರರು ಕಾರಿನ ವೇಗವನ್ನು ಹೆಚ್ಚಿಸಿ ವಾಹನವನ್ನು ಡಿಕ್ಕಿ ಮಾಡುವ ತಂತ್ರವನ್ನು ಬಳಕೆ ಮಾಡಿದ್ದರು.

### ಎಲ್ಲಿ ಅಳವಡಿಸಲಾಗುತ್ತದೆ?

- ಸ್ಫೋಟಕಗಳನ್ನು ಭಾರೀ ಪ್ರಮಾಣದಲ್ಲಿ ಬಳಕೆ ಮಾಡುವ ಉದ್ದೇಶದಿಂದ ವಾಹನ ಮುಂಭಾಗ ಅಂದರೆ ಕಾಲು ಇಡುವ ಭಾಗದಲ್ಲಿ ಹಾಗೂ ವಾಹನ ಹಿಂಭಾಗ ಬೂಟ್ ಸ್ಪೇಸ್, ಹಿಂಭಾಗದ ಸಿಟ್ ಕೆಳಗೆ ಸ್ಫೋಟಗಳನ್ನು ಅಳವಡಿಸಿರುತ್ತಾರೆ. ತಜ್ಞರ ಮಾಹಿತಿ ಅನ್ವಯ ಸ್ಫೋಟಗಳನ್ನು ವಾಹನ ಇಂಧನ ಸಂಗ್ರಹಣ ಪ್ರದೇಶದಲ್ಲೇ ಹೆಚ್ಚು ಅಳವಡಿಸಲಾಗುತ್ತದೆ. ಸ್ಫೋಟಕಗಳ ಸ್ಫೋಟದೊಂದಿಗೆ ಡಿಸೇಲ್, ಪೆಟ್ರೋಲ್ ಕೂಡ ಸ್ಫೋಟದ ತೀವ್ರತೆಯನ್ನು ಹೆಚ್ಚಿಸುತ್ತದೆ.

### ಐಇಡಿ ಗಳನ್ನೇ ಏಕೆ ಬಳಸಲಾಗುತ್ತದೆ?

- ವಿಧ್ವಂಸಕ ಕೃತ್ಯಗಳನ್ನು ನಡೆಸುವ ಉದ್ದೇಶದೊಂದಿಗೆ ಭಾರೀ ಸ್ಫೋಟ ನಡೆಸುವ ಕಾರಣ ಐಇಡಿಗಳನ್ನು ಬಳಕೆ ಮಾಡಲಾಗುತ್ತದೆ. ಪಾಕ್ ಉಗ್ರರಿಗೆ ಐಇಡಿ ತಯಾರಿಸಲು ವಸ್ತುಗಳು ಸುಲಭವಾಗಿ ಸಿಗುತ್ತದೆ. ಆದರೆ ವಾಹನದಲ್ಲಿ ಐಇಡಿ ಅಳವಡಿಸಲು ಹೆಚ್ಚಿನ ಪರಿಣಿತಿ ಅಗತ್ಯವಿರುತ್ತದೆ. ಹೆಚ್ಚಿನ ಸಂಪನ್ಮೂಲ, ಹೆಚ್ಚು ಹಣ ಕೂಡ ಅಗತ್ಯವಿರುತ್ತದೆ.

### ಪತ್ತೆ ಹಚ್ಚುವುದು ಹೇಗೆ?

- ಅನುಮಾನ ವ್ಯಕ್ತವಾದ ವಾಹನಗಳ ಪರಿಶೀಲನೆ ಮಾಡುವುದು, ಐಇಡಿಗಳನ್ನು ಪತ್ತೆ ಹಚ್ಚುವಂತಹ ಚೆಕ್ ಪಾಯಿಂಟ್ ಗಳನ್ನು ನಿರ್ಮಿಸುವುದು. ಅಲ್ಲದೇ ಭಾರೀ ಪ್ರಮಾಣದಲ್ಲಿ ಸ್ಫೋಟಗಳ ಸಂಗ್ರಹಣೆ ಹಾಗೂ ಬಳಕೆ ಬಗ್ಗೆ ಗುಪ್ತಚರ ಮಾಹಿತಿಯನ್ನು ಪಡೆಯುವುದು. ಸ್ಫೋಟಕಗಳನ್ನು ಡಿಕೋಡ್ ಮಾಡುವಂತಹ ಆಧುನಿಕ ಪೊಲೀಸ್ ತಂಡವನ್ನು ನೇಮಿಸುವ ಮೂಲಕ ಪತ್ತೆ ಹಚ್ಚಬಹುದು.
- ಐಇಡಿಯನ್ನು ಪತ್ತೆ ಹಚ್ಚಿದ ಮಾತ್ರಕ್ಕೆ ಕೃತ್ಯ ತಡೆಯಬಹುದು ಎಂದು ಹೇಳಲು ಸಾಧ್ಯವಿಲ್ಲ. ಉಗ್ರರ ಉದ್ದೇಶವೇ ಸೈನಿಕರ ಮೇಲೆ ದಾಳಿ ಮಾಡುವುದು.ಹೀಗಾಗಿ ರಕ್ಷಣಾ ಪಡೆಗಳು ತಡೆಯುತ್ತಿರುವ ವೇಳೆಯೇ ಸ್ಫೋಟಿಸಿದ ಉದಾಹರಣೆಗಳು ವಿದೇಶದಲ್ಲಿ ನಡೆದಿದೆ. ಇಷ್ಟೆಲ್ಲ ಆಗಿಯೂ ಐಇಡಿಯನ್ನು ನಿಷ್ಕ್ರಿಯಗೊಳಿಸುವುದು ಸುಲಭದ ಮಾತಲ್ಲ. ಕಡಿಮೆ ಅವಧಿಯಲ್ಲಿ ಇದನ್ನು ನಿಷ್ಕ್ರಿಯಗಳಿಸುವುದು ಸವಾಲಿನ ಕೆಲಸವು ಹೌದು.

### ಎಲ್ಲಿ ಜಾಸ್ತಿ?

- ವಿಶ್ವದಲ್ಲಿ ಇಂತಹ ತಂತ್ರಜ್ಞಾನವನ್ನು ಬಳಸಿ ಅಫ್ಘಾನಿಸ್ತಾನ ಹಾಗೂ ಇರಾನ್ ದೇಶಗಳಲ್ಲಿ ಉಗ್ರರು ಸ್ಫೋಟ ಮಾಡುವುದು ಸಾಮಾನ್ಯವಾಗಿದೆ. ಉನ್ನತ ಮಟ್ಟದ ಪರಿಣತಿಯನ್ನು ಹೊಂದಿರುವವರು ಮಾತ್ರ ಇಂತಹ ಸ್ಫೋಟ ನಡೆಸಲು ಸ್ಕೆಚ್ ಹಾಕುತ್ತಾರೆ.

## 3 .ಆಕ್ಸಿಟೋಸಿನ್

### ಪ್ರಮುಖ ಸುದ್ದಿ

- ಕರ್ನಾಟಕ ಆಂಟಿಬಯೋಟಿಕ್ಸ್ ಮತ್ತು ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ (KAPL) ಆಕ್ಸಿಟೋಸಿನ್ ಉತ್ಪಾದನೆಯನ್ನು ನಿಭಾಯಿಸಲು ಅಥವಾ ಅನುಭವವನ್ನು ಹೊಂದಿಲ್ಲ ಎಂದು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಹೇಳಿದೆ.

### ಮುಖ್ಯ ಅಂಶಗಳು

### ಹಿನ್ನೆಲೆ

- ಜೀವ ರಸಾಯನ ವಿಜ್ಞಾನದಲ್ಲಿ ಪ್ರಮುಖ ಸ್ಥಾನ ಗಳಿಸಿಕೊಂಡಿರುವ ಆಕ್ಸಿಟೋಸಿನ್ ಮತ್ತು ಅದರ ತಯಾರಿಕೆಯಲ್ಲಿ ಬಳಸಲಾಗುವ ಘಟಕಗಳು, ಗರ್ಭಾವಸ್ಥೆ ಅಥವಾ ತಾಯ್ತನದ ಅಸ್ವಸ್ಥತೆ ನಿವಾರಿಸುವಲ್ಲಿ ಬಳಸಲಾಗುವ ಮದ್ದುಗಳನ್ನು ಖಾಸಗಿ ವಲಯಗಳು ಇನ್ನು ಮುಂದೆ ಮನೆ ಬಳಕೆಗೆ ಉತ್ಪಾದಿಸುವ ಹಾಗಿಲ್ಲ. ಅಂತೆಯೇ ಅವುಗಳನ್ನು ಚಿಲ್ಲರೆ ಔಷಧ ವ್ಯಾಪಾರಿಗಳು ಮಾರಾಟ ಮಾಡುವಂತೆಯೂ. ದೇಶಾದ್ಯಂತ ಕಳೆದ ವರ್ಷ ಜುಲೈ 1 ಈ ನಿರ್ಬಂಧ ಜಾರಿಗೆ ಬಂದಿದ್ದು , ಬೆಂಗಳೂರು ಪಿಎಸ್‌ಯು (ಪಬ್ಲಿಕ್ ಸೆಕ್ಟರ್ ಯೂನಿಟ್) ಮಾತ್ರ ಈ ಡ್ರಗ್ಸ್ ಉತ್ಪಾದಿಸಿ ವೈದ್ಯಕೀಯ ಘಟಕಗಳಿಗೆ ಮಾರಾಟ ಮಾಡಲಿದೆ ಎಂದು ತಿಳಿಸಿತ್ತು

### ಆಕ್ಸಿಟೋಸಿನ್ ಎಂದರೇನು?

- ಇದು ಗರ್ಭಕೋಶಗಳ ಸ್ನಾಯುಗಳ ಸಂಕೋಚನವನ್ನು ಪ್ರಚೋದಿಸುವ, ಸ್ತನದಿಂದ ಹಾಲು ಸುರಿಸುವ ಪಿಟ್ಯೂಟರಿ ಗ್ರಂಥಿಯ ಹಿಂದಿನ ಹಾಲೆಯಲ್ಲಿ ಉತ್ಪತ್ತಿಯಾಗುವ ಪಾಲಿಪೆಪ್ಟೈಡ್ ರೂಪದ ಹಾರ್ಮೋನು. ಜೊತೆಗೆ ಹೆರಿಗೆಯಾಗುವಂತೆ ಪ್ರಚೋದನ ನೀಡುವ ಕೆಲಸವನ್ನೂ ಆಕ್ಸಿಟೋಸಿನ್ ಮಾಡುತ್ತದೆ. ಹೆರಿಗೆ ವೇಳೆ ಅತಿಯಾದ ರಕ್ತಸ್ರಾವವಾಗುವುದನ್ನೂ ಇದು ತಡೆಗಟ್ಟುತ್ತದೆ.

### ಆಕ್ಸಿಟೋಸಿನ್ ದುರ್ಬಳಕೆ ಹೇಗೆ?

- ಡೈರಿ ಉದ್ಯಮದಲ್ಲಿ ಅದರಲ್ಲೂ ವಿಶೇಷವಾಗಿ ಹಾಲು ಉತ್ಪಾದನೆ ಹೆಚ್ಚಿಸಿಕೊಳ್ಳುವಲ್ಲಿ ಆಕ್ಸಿಟೋನ್‌ಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ.

- ಹಾಲು ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ ಖಾಸಗಿ ವಲಯಗಳು ಉತ್ಪಾದಿಸುವ ಆಕ್ಸಿಟೋನ್‌ಗಳನ್ನು ಮನುಷ್ಯರು ಬಳಸುವುದರಿಂದ ಹಾರ್ಮೋನು ಏರುಪೇರು ಸಂಭವಿಸುತ್ತದೆ ಎಂದು ಹೇಳಲಾಗುತ್ತಿದೆ.

## 4. ಮಂಗಳ ಗ್ರಹ ಅನ್ವೇಷಿಸುತ್ತಿದ್ದ ಆಪರ್ಚುನಿಟಿ ರೋವರ್‌ಗೆ ಗುಡ್ ಬೈ ಹೇಳಿದ ನಾಸಾ

### ಪ್ರಮುಖ ಸುದ್ದಿ

- ನಾಸಾದ ಮಹತ್ವಾಕಾಂಕ್ಷಿ ಆಪರ್ಚುನಿಟಿ ರೋವರ್ 14 ವರ್ಷಗಳ ಕಾಲ ಮಂಗಳನ ಅಂಗಳನಲ್ಲಿ ಅನ್ವೇಷಣೆ ಮಾಡಿತ್ತು. ಅಲ್ಲದೆ, ಮಂಗಳ ಗ್ರಹದಲ್ಲಿ ಒಮ್ಮೆ ನೀರು ಹರಿದಿತ್ತು ಎಂಬುದನ್ನು ಸಹ ಸ್ಪಷ್ಟಪಡಿಸಿತ್ತು. ಆದರೆ, ಆಪರ್ಚುನಿಟಿ ರೋವರ್ ತನ್ನ 15 ವರ್ಷಗಳ ಪಯಣವನ್ನು ಅಂತ್ಯಗೊಳಿಸಿದ್ದು, ಚಂಡಮಾರುತಕ್ಕೆ ಬಲಿಯಾಗಿದೆ ಎನ್ನಲಾಗುತ್ತಿತ್ತು. ಈಗ ಆಪರ್ಚುನಿಟಿ ರೋವರ್‌ಗೆ ನಾಸಾ ಅಧಿಕೃತವಾಗಿ ಗುಡ್ ಬೈ ಹೇಳಿದೆ.

### ಮುಖ್ಯ ಅಂಶಗಳು

### ಆಪರ್ಚುನಿಟಿ ರೋವರ್‌ಗೆ ಗುಡ್ ಬೈ ಹೇಳಲು ಕಾರಣವೇನು ?

- 2004 ಜನವರಿ 25 ರಂದು ಮಂಗಳನ ಅಂಗಳಕ್ಕೆ ಇಳಿದಿದ್ದ ನಾಸಾದ ಆಪರ್ಚುನಿಟಿ ರೋವರ್ ಅಲ್ಲಿನ ಭಾರೀ ಚಂಡಮಾರುತಕ್ಕೆ ಬಲಿಯಾಗಿರುವ ಶಂಕೆ ವ್ಯಕ್ತವಾಗಿತ್ತು. 14 ವರ್ಷಗಳಿಂದ ಮಂಗಳದ ನೆಲದಲ್ಲಿ ಓಡಾಡುತ್ತಾ ಗ್ರಹದ ಸಂಶೋಧನೆ ನಡೆಸಿ ನಾಸಾಕ್ಕೆ ಮಾಹಿತಿ ರವಾನಿಸುತ್ತಿದ್ದ ರೋವರ್ ಕಳೆದ ವರ್ಷವೇ ಕೆಟ್ಟು ಹೋಗಿರುವ ಸಾಧ್ಯತೆಯಿದೆ ಎನ್ನಲಾಗಿತ್ತು. 2018ನೇ ವರ್ಷದ ಜೂ.10ರ ಅನಂತರ ಆಪರ್ಚುನಿಟಿ ರೋವರ್ ನಾಸಾದೊಂದಿಗೆ ಸಂಪರ್ಕ ಸಾಧಿಸಿಲ್ಲ ಎಂದು ಹೇಳಲಾಗಿದ್ದು, ಧೂಳಿನ ಚಂಡಮಾರುತದಿಂದಾಗಿ ಹಾಳಾಗಿದೆ ಎನ್ನಲಾಗಿದೆ. ಸೌರ ಫಲಕದ ಮೇಲೆ ಧೂಳು ಕುಳಿತು ಬೆಳಕಿನ ಕಿರಣವನ್ನು ಅಡ್ಡಿಪಡಿಸುತ್ತಿರಬಹುದು, ಇದರಿಂದಾಗಿ ರೋವರ್ ಹಾನಿಗೀಡಾಗಿರಬಹುದು ಎಂದು ವಿಜ್ಞಾನಿಗಳು ಅಂದಾಜಿಸಿದ್ದರು.

### ಆಪರ್ಚುನಿಟಿ ರೋವರ್ ನ ಪ್ರಮುಖ ಸಾಧನೆಗಳು

- ಮಂಗಳ ಗ್ರಹದ ಬಗೆಗಿನ ತಪ್ಪು ಗ್ರಹಿಕೆಗಳನ್ನು ಆಪರ್ಚುನಿಟಿ ರೋವರ್ ಹೋಗಲಾಡಿಸುವ ಮೂಲಕ ಜಾಗತಿಕವಾಗಿ ಗರುತಿಸಿಕೊಂಡಿತು. ಮಂಗಳ ಗ್ರಹದ ಇತಿಹಾಸ, ಭೂವಿಜ್ಞಾನ, ವಾತಾವರಣ ಮತ್ತು ಭೂದೃಶ್ಯದ ಬಗೆಗಿನ ಸ್ಪಷ್ಟ ಚಿತ್ರಣ ಒದಗಿಸಿತು.
- ಮಂಗಳ ಗ್ರಹದಲ್ಲಿರುವ ಕುಳಿಗಳ ಬಗ್ಗೆ ಅಧ್ಯಯನ ಮಾಡಲು ಆಪರ್ಚುನಿಟಿ ಹೆಚ್ಚು ಸಮಯ ವ್ಯಯಿಸಿತು ಎಂದು ಅಮೆರಿಕದ ಸ್ಪೇಸ್ ಏಜೆನ್ಸಿ ತಿಳಿಸಿದೆ. ಕೆಂಪು ಗ್ರಹದ ಅಸ್ತಿತ್ವ ಮತ್ತು ಜೀವಿಗಳ ಇರುವಿಕೆ ಬಗ್ಗೆಅಧ್ಯಯನ ನಡೆಸುತ್ತಿದ್ದ ವೇಳೆ ಜಿಪ್ಸಮ್ ಖನಿಜದ ಅಂಶಗಳನ್ನು ಪತ್ತೆ ಮಾಡಿತು. ಈ ಮೂಲಕ ಮಂಗಳ ಗ್ರಹದಲ್ಲಿ ನೀರಿನ ಇರುವಿಕೆ ಬಗ್ಗೆಯೂ ಜಗತ್ತಿನ ಗಮನ ಸೆಳೆಯಿತು.

- ಆಪರ್ಚುನಿಟಿ ರೋವರ್ ಉಪಗ್ರಹವು ಹೆಚ್ಚೆಂದರೆ ಮಂಗಳ ಗ್ರಹದಲ್ಲಿ ಹೆಚ್ಚೆಂದರೆ 90 ದಿನಗಳ ಕಾಲ ಕಾರ್ಯಚರಣೆ ನಡೆಸಬಹುದು ಎಂದು ನಿರೀಕ್ಷಿಸಲಾಗಿತ್ತು. ಬರೋಬ್ಬರಿ 5,000 ದಿನಗಳ ವರೆಗೆ ಕಾರ್ಯನಿರ್ವಹಿಸುವ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಿತು.
- ಕಬ್ಬಿಣಾಂಶ ಅಧಿಕವಾಗಿರುವ ಮೊಟ್ಟೆಯಾಕಾರದ ಲವಣಗಳಿರುವ ಕಲ್ಲುಗಳನ್ನು ಆಪರ್ಚುನಿಟಿ ಪತ್ತೆ ಮಾಡಿತು. ಇವುಗಳನ್ನು 'ಐಯೋಲಿಯನ್ ಕಲ್ಲುಗಳು' ಎಂದು ಗುರುತಿಸಲಾಗಿದೆ. ಮಂಗಳ ಗ್ರಹದಲ್ಲಿ 'ಹೀಟ್ ಶೀಲ್ಡ್ ರಾಕ್' ಎಂದು ಕರೆಯಲ್ಪಡುವ ಉಲ್ಕೆಗಳನ್ನು ರೋವರ್ ಪತ್ತೆ ಮಾಡಿತು.
- ಮಂಗಳ ಗ್ರಹದ ಬಗ್ಗೆ ಅಧ್ಯಯನ ನಡೆಸಲು ಅತಿದೊಡ್ಡ ಮತ್ತು ಹೆಚ್ಚು ಸಾಮರ್ಥ್ಯವುಳ್ಳ ಉಪಗ್ರಹವನ್ನು ನಿರ್ಮಿಸಲು ಅತ್ಯಂತ ಪೂರಕವಾಯಿತು. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## MISCELLANEOUS

## 1. ಜಲಿಯನ್ ವಾಲಾಬಾಗ್ ಸ್ಮಾರಕ ಮಸೂದೆಗೆ ಅನುಮೋದನೆ

### ಪ್ರಮುಖ ಸುದ್ದಿ

- ಲೋಕಸಭೆಯಲ್ಲಿ 1951ರ ಜಲಿಯನ್‌ವಾಲಾ ಬಾಗ್ ರಾಷ್ಟ್ರೀಯ ಸ್ಮಾರಕ ಕಾಯ್ದೆಯ ತಿದ್ದುಪಡಿ ಮಸೂದೆಗೆ ಅನುಮೋದನೆ ನೀಡಲಾಯಿತು. ಇದಕ್ಕಾಗಿ ರಾಜಕೀಯೇತರ ಟ್ರಸ್ಟ್ ಸ್ಥಾಪನೆಯ ಪ್ರಸ್ತಾವನೆಗೆ ಕೂಡ ಸಂಸತ್ತು ಅನುಮೋದನೆ ನೀಡಿತು.

### ಮುಖ್ಯ ಅಂಶಗಳು

- ಜಲಿಯನ್‌ವಾಲಾ ಬಾಗ್‌ರಾಷ್ಟ್ರೀಯ ಸ್ಮಾರಕ (ತಿದ್ದುಪಡಿ) ಮಸೂದೆ 2018 ರಲ್ಲಿ , ಸ್ಮಾರಕ ನಿರ್ಮಾಣಕ್ಕೆ 24 ಕೋಟಿ ರೂ.ಗಳ ಅನುದಾನ ಮೀಸಲಿಡಲಾಗಿದೆ. ಆದರೆ, ಇದನ್ನು ನಿರ್ವಹಿಸುವ

ಟ್ರಸ್ಟ್ ಯಾವುದೇ ರಾಜಕೀಯ ವ್ಯಕ್ತಿಗಳನ್ನು ಒಳಗೊಂಡಿರಬಾರದು ಎಂಬುದು ಪ್ರಮುಖ ಕಾಳಜಿಯಾಗಿದೆ.

- ಜಲಿಯನ್‌ವಾಲಾ ಭಾಗ್ ದುರಂತಕ್ಕೆ 100 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 2019ರ ಏಪ್ರಿಲ್13ರಂದು ಶತಮಾನೋತ್ಸವ ಆಚರಿಸಲಾಗುವುದು
- ಟ್ರಸ್ಟ್ ನ ಸದಸ್ಯತ್ವ ಹಾಗೂ ಕಾರ್ಯಾಚರಣೆ ವ್ಯವಸ್ಥಿತವಾಗಿಲ್ಲದ ಹಿನ್ನೆಲೆಯಲ್ಲಿ ತಿದ್ದುಪಡಿ ನಿರ್ಧಾರ ಕೈಗೊಳ್ಳಲಾಗಿದೆ. ಹಿಂದಿನ ನಿಯಮದ ಪ್ರಕಾರ ಮಸೂದೆಗೆ 5 ವರ್ಷಗಳ ಅವಧಿಗೆ ನೇಮಕಗೊಂಡಿರುವ ಸದಸ್ಯರನ್ನು ಅವಧಿ ಮುಗಿಯುವವರೆಗೆ ಬದಲಿಸುವಂತಿರಲಿಲ್ಲ. ಈ ನಿಯಮವನ್ನು ಈಗ ಬದಲಿಸಲಾಗಿದೆ

## ಪ್ರಯೋಜನಗಳು

- ಈಗಿರುವ ಕಾಯ್ದೆಯಂತೆ ಟ್ರಸ್ಟ್ ನಲ್ಲಿ ಒಂದು ರಾಷ್ಟ್ರೀಯ ರಾಜಕೀಯ ಪಕ್ಷದ ಪ್ರಾತಿನಿಧ್ಯಕ್ಕೆ ಅವಕಾಶವಿದೆ. ಒಂದು ನಿರ್ದಿಷ್ಟ ಪಕ್ಷದ ಸದಸ್ಯರನ್ನು ಕೈಬಿಡುವುದರಿಂದ ಟ್ರಸ್ಟ್ ನ್ನು ರಾಜಕೀಯ ಮುಕ್ತವಾಗಿಸಿದಂತಾಗುತ್ತದೆ. ಉದ್ದೇಶಿತ ತಿದ್ದುಪಡಿಯು ಟ್ರಸ್ಟ್ನಲ್ಲಿ ವಿರೋಧ ಪಕ್ಷದ ಪ್ರಾತಿನಿಧ್ಯವನ್ನು ಖಚಿತಪಡಿಸುತ್ತದೆ. ಉದ್ದೇಶಿತ ತಿದ್ದುಪಡಿಯು ಟ್ರಸ್ಟಿಯನ್ನು ಬದಲಿಸುವ ಅಥವಾ ಕೈಬಿಡುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲಿದೆ.

## ಜಲಿಯನ್‌ವಾಲಾ ಬಾಗ್ ಹತ್ಯಾಹಾಂಡದ ಬಗ್ಗೆ

- ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವನ್ನು ಅಮೃತಸರ್ ಹತ್ಯಾಕಾಂಡ ಎಂದೂ ಕರೆಯಲಾಗುತ್ತದೆ. 1919, ಏಪ್ರಿಲ್ 13 ರಂದು ಈ ಹತ್ಯಾಕಾಂಡ ನಡೆದಿತ್ತು. ಪಂಜಾಬಿನ ಅಮೃತಸರ್‌ನ ಜಲಿಯನ್‌ವಾಲಾ ಬಾಗ್‌ನಲ್ಲಿ ಬೈಸಾಕಿ ಯಾತ್ರಿಗಳು ಅಹಿಂಸಾತ್ಮಕ ಪ್ರತಿಭಟನಕಾರರೊಂದಿಗೆ ಸೇರಿದ್ದರು. ಈ ಗುಂಪನ್ನು ಚದುರಿಸಲು ಕರ್ನಲ್ ರೆಜಿನಾಲ್ಡ್ ಡೈಯರ್ ನೇತೃತ್ವದಲ್ಲಿ ಬ್ರಿಟಿಷ್ ಭಾರತೀಯ ಸೇನೆಯು ಗುಂಡಿನ ದಾಳಿ ಮಾಡಿತು. ವಾರ್ಷಿಕ ಬೈಸಾಕಿ ಆಚರಣೆಯಲ್ಲಿ ಭಾಗವಹಿಸಲು ಕೆಲವು ನಾಗರೀಕರು ಕೂಡ ಅಲ್ಲಿ ನೆರೆದಿದ್ದರು. ಇದು ಪಂಜಾಬಿ ಜನರ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಬ್ಬವಾಗಿದೆ. ನಗರದ ಹೊರವಲಯದಿಂದ ಬಂದಿದ್ದ ಜನರಿಗೆ ಸೇನಾಡಳಿತವು ವಿಧಿಸಿದ ಕ್ರಮದ ಬಗ್ಗೆ ಅರಿವು ಇರಲಿಲ್ಲ.
- ಜಲಿಯನ್‌ವಾಲಾ ಬಾಗ್ ಸಾರ್ವಜನಿಕ ಉದ್ಯಾನವಾಗಿದ್ದು ಸುಮಾರು 6 ರಿಂದ 7 ಎಕರೆ ಪ್ರದೇಶದಲ್ಲಿದೆ. ಸುತ್ತಲೂ ಗೋಡೆಯಿಂದ ಸುತ್ತುವರಿದ್ದು, ಐದು ಕಡೆಯಿಂದ ಪ್ರವೇಶ ದ್ವಾರವಿದೆ. ಡೈಯರ್ ಆದೇಶದಂತೆ ಸೇನೆಯು ಸುಮಾರು 10 ನಿಮಿಷಗಳ ಕಾಲ ಗುಂಡಿನ ಮಳೆಗರೆಯಿತು. ಜನರು ಅಲ್ಲಿಂದ ಓಡಲು ಯತ್ನಿಸಿದರು. ಈ ದಾಳಿಯಿಂದ ಸುಮಾರು 379 ಜನರು ಮರಣ ಹೊಂದಿದರು ಮತ್ತು 1,200 ಜನರು ಗಾಯಗೊಂಡರು ಎಂದು ಬ್ರಿಟಿಷ್ ಸರಕಾರವು ಅಂಕಿ ಅಂಶವನ್ನು ಬಿಡುಗಡೆ ಮಾಡಿತ್ತು. ಆದರೆ ಇನ್ನೊಂದು ಮೂಲಗಳ ಪ್ರಕಾರ

ಸುಮಾರು ಒಂದು ಸಾವಿರ ಜನರು ಮರಣ ಹೊಂದಿದರು ಎನ್ನುತ್ತದೆ. ಈ ಕ್ರೂರತನವು ಇಡೀ ದೇಶವನ್ನು ಗಾಬರಿಗೊಳಿಸಿತ್ತು.

## 2. ಟ್ಯಾಗೋರ್' ಪ್ರಶಸ್ತಿ

### ಪ್ರಮುಖ ಸುದ್ದಿ

- ಸಾಂಸ್ಕೃತಿಕ ಸಾಮರಸ್ಯಕ್ಕಾಗಿ ನೀಡುವ 'ಟ್ಯಾಗೋರ್' ಪ್ರಶಸ್ತಿಯನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಖ್ಯಾತ ಮಣಿಪುರಿ ನೃತ್ಯ ಕಲಾವಿದ ರಾಜಕುಮಾರ್ ಸಿಂಗ್ ೨೦೧೪ನೇ ಸಾಲಿನ ಪ್ರಶಸ್ತಿಯನ್ನು ನೀಡಲಾಯಿತು. ಬಾಂಗ್ಲಾ ದೇಶದ ಸಾಂಸ್ಕೃತಿಕ ಸಂಸ್ಥೆ ಛಾಯಾ ನೌಥ್‌ಗೆ ೨೦೧೫ನೇ ಸಾಲಿನ ಪ್ರಶಸ್ತಿಯನ್ನು ನೀಡಲಾಯಿತು.
- ಖ್ಯಾತ ಶಿಲ್ಪಿ ಹಾಗೂ ಹಿರಿಯ ವಿದ್ವಾಂಸ ರಾಮ್ ವನ್ಜಿ ಸುತರ್ ಅವರಿಗೆ ೨೦೧೬ನೇ ಸಾಲಿನ ಪ್ರಶಸ್ತಿ ನೀಡಲಾಯಿತು.

### ಮುಖ್ಯ ಅಂಶಗಳು

- ಪ್ರಧಾನಮಂತ್ರಿ ನೇತೃತ್ವದ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿ ನ್ಯಾಯಮೂರ್ತಿ ರಂಜನ್ ಗೊಗೋಯ್ , ಮಾಜಿ ಮುಖ್ಯ ಚುನಾವಣಾ ಆಯುಕ್ತ ಶ್ರೀ.. ಎನ್ .ಗೋಪಾಲಸ್ವಾಮಿ ಮತ್ತು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ ಅಧ್ಯಕ್ಷ ಶ್ರೀ ವಿನಯ ಸಹಸ್ರಬುದ್ಧೆ ಅವರನ್ನೊಳಗೊಂಡ ತೀರ್ಪುಗಾರರ ಸಮಿತಿಯು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ.

### ಟ್ಯಾಗೋರ್' ಪ್ರಶಸ್ತಿ ಬಗ್ಗೆ

- ಸಾಂಸ್ಕೃತಿಕ ಸೌಹಾರ್ದತೆಗಾಗಿರುವ ಟ್ಯಾಗೋರ ಪ್ರಶಸ್ತಿಯನ್ನು ರವೀಂದ್ರನಾಥ ಟ್ಯಾಗೋರ ಅವರ 150 ನೇ ಜನ್ಮ ವರ್ಷಾಚರಣೆ ಅಂಗವಾಗಿ ಸರಕಾರ ಸ್ಥಾಪಿಸಿದ್ದು 2012 ರಿಂದ ನೀಡಲಾಗುತ್ತಿದೆ. ಇದನ್ನು ವಾರ್ಷಿಕವಾಗಿ ಪ್ರದಾನ ಮಾಡಲಾಗುತ್ತಿದೆ. ಪ್ರಶಸ್ತಿಯು 1 ಕೋ.ರೂ. ನಗದು , ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ ಮತ್ತು ಅತ್ಯಾಕರ್ಷಕ ಸಾಂಪ್ರದಾಯಿಕ ಕಲಾಕೃತಿ ಯಾ ಕೈಮಗ್ಗದ ವಸ್ತುವನ್ನು ಒಳಗೊಂಡಿರುತ್ತದೆ.

## 3. ಸುರಕ್ಷತೆ ತುರ್ತು ಸ್ಪಂದನ ಬೆಂಬಲ ವ್ಯವಸ್ಥೆ

### ಪ್ರಮುಖ ಸುದ್ದಿ

- ಇನ್ನು ಮುಂದೆ ಎಲ್ಲ ತುರ್ತು ಸೇವೆಗೆ ಒಂದೇ ನಂಬರ್ ಗೆ ಕರೆ ಮಾಡಬಹುದು. ಸುರಕ್ಷತೆ ತುರ್ತು ಸ್ಪಂದನ ಬೆಂಬಲ ವ್ಯವಸ್ಥೆ (ಇಆರ್ ಎಸ್‌ಎಸ್)ಗೆ ಏಕೈಕ ತುರ್ತು ಸಹಾಯವಾಣಿ ಸಂಖ್ಯೆ 112ಗೆ ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದ್ದಾರೆ.

### ಮುಖ್ಯ ಅಂಶಗಳು

- ಮೊದಲೆಲ್ಲ ಪೊಲೀಸ್ ನೆರವು ಬೇಕಾದಲ್ಲಿ 100ಕ್ಕೆ, ಅಗ್ನಿಶಾಮಕ ನೆರವು ಬೇಕಾದಲ್ಲಿ 101ಕ್ಕೆ, ಆರೋಗ್ಯಕ್ಕೆ 108ಗೆ ಹೀಗೆ ಬೇರೆ ಬೇರೆ ಸೇವೆಗಳಿಗೆ ವಿವಿಧ ತುರ್ತು ಸಹಾಯವಾಣಿ ಸಂಖ್ಯೆ ಇತ್ತು. ಆದ್ರೆ ಇನ್ಮುಂದೆ ಎಲ್ಲಾ ವ್ಯವಸ್ಥೆಗೂ 112 ಏಕೈಕ ತುರ್ತು ಸಹಾಯವಾಣಿ ವ್ಯವಸ್ಥೆಯನ್ನು ಆರಂಭಿಸಲಾಗಿದೆ. ಈ ವಿನೂತನ ತುರ್ತು ಸಹಾಯವಾಣಿ ಸಂಖ್ಯೆಗೆ ಸಂಕಷ್ಟದಲ್ಲಿರುವ ಮಹಿಳೆಯರು ಸಹ ಡಯಲ್ ಮಾಡಿ ನೆರವು ಪಡೆಯಬಹುದಾಗಿದೆ.
- ಸದ್ಯ ಒಟ್ಟು ದೇಶದಲ್ಲಿ 16 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಆಂಧ್ರಪ್ರದೇಶ, ಉತ್ತರಾಖಂಡ, ಪಂಜಾಬ್, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ, ತಮಿಳುನಾಡು, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ, ಪುದುಚೇರಿ, ಲಕ್ಷದೀಪ, ಅಂಡಮಾನ್, ದಾದರ್ ನಗರ್ ಹವೇಲಿ, ದಿಯು ಮತ್ತು ದಮನ್‌ನಲ್ಲಿ ಸೇವೆ ಕಾರ್ಯರೂಪಕ್ಕೆ ಬರಲಿದೆ.

### ಹೇಗೆ ಕೆಲಸ ಮಾಡುತ್ತೆ?

- ಸ್ಮಾರ್ಟ್ ಫೋನ್ ನಲ್ಲಿ 112 ನಂಬರ್ ಡಯಲ್ ಮಾಡಬಹುದು ಅಥವಾ ಪವರ್ ಬಟನ್ ಅನ್ನು ಮೂರು ಬಾರಿ ಒತ್ತಿ ತಕ್ಷಣವೇ ಇ.ಆರ್.ಸಿ. ಕರೆಯನ್ನು ಸಕ್ರಿಯಗೊಳಿಸಬಹುದು. ಹಾಗೆಯೇ ಫೀಚರ್ ಫೋನ್‌ನಲ್ಲಿ ಸಂಖ್ಯೆ 5 ಅಥವಾ 9 ಅನ್ನು ದೀರ್ಘವಾಗಿ ಒತ್ತಿದರೆ ಇ.ಆರ್.ಸಿ. ಕರೆಯನ್ನು ಸಕ್ರಿಯಗೊಳಿಸಬಹುದಾಗಿದೆ.
- ಸಂಬಂಧ ಪಟ್ಟ ರಾಜ್ಯಗಳ ಇಆರ್ ಎಸ್ಎಸ್ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ಅಲ್ಲಿ ನಿಮ್ಮ ಸಮಸ್ಯೆಯನ್ನು ಇ-ಮೇಲ್ ಹಾಗೂ ಎಸ್ಒಎಸ್ ಸಂದೇಶದ ಮೂಲಕ ರಾಜ್ಯ ಎ.ಆರ್ಸಿಗೆ ಕಳುಹಿಸಬಹುದು.
- 112 ಸಹಾಯವಾಣಿಗೆ ಕರೆ ಮಾಡಿದರೆ ನೇರವಾಗಿ ಜಿಲ್ಲಾ ಕಮಾಂಡ್ ಕೇಂದ್ರದೊಂದಿಗೆ ಸಂಪರ್ಕಿಸಲಾಗಿರುತ್ತದೆ. ಹೀಗೆ ಸಂತ್ರಸ್ತರಿಗೆ ಸಂಬಂಧ ಪಟ್ಟ ಪ್ರದೇಶಗಳಿಂದ ತಕ್ಷಣ ನೆರವು ಒದಗಿಸಲಾಗುತ್ತದೆ.
- ಈ ತುರ್ತುಸೇವೆಗಾಗಿ ನಿರ್ಭಯ ನಿಧಿಯಡಿ 321 ಕೋಟಿ ರೂಪಾಯಿಗಳ ಮೊತ್ತವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.
- 112 ಇಂಡಿಯಾ ಮೊಬೈಲ್ ಆಪ್ ಗೂಗಲ್ ಪ್ಲೇ ಸ್ಟೋರ್ ಹಾಗೂ ಆ್ಯಪಲ್ ಸ್ಟೋರ್ ಗಳಲ್ಲಿ ಲಭ್ಯವಿದೆ.
- ಸದ್ಯ ತುರ್ತು ಸಹಾಯವಾಣಿ ಕರೆಗಳಿಗೆ ಸ್ಪಂದಿಸಿ ನೆರವು ನೀಡಲು ಈಗ 10-12 ನಿಮಿಷಗಳ ಸಮಯ ತೆಗೆದುಕೊಳ್ಳುತ್ತದೆ. ಮುಂದಿನ 6-8 ತಿಂಗಳ ಒಳಗಡೆ 8 ನಿಮಿಷದಲ್ಲಿ ಕರೆಗೆ ಸ್ಪಂದನೆ ನೀಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.
- ಅಲ್ಲದೆ ಮಹಿಳೆಯರಿಗೆ ಇನ್ನಷ್ಟು ಸುರಕ್ಷತೆ ಒದಗಿಸುವ ಸಲುವಾಗಿ ದೇಶದಲ್ಲಿ ಒಟ್ಟು 8 ದೊಡ್ಡ ನಗರಗಳನ್ನು ಆರಿಸಿಕೊಂಡು ಅಲ್ಲಿ ಸುರಕ್ಷತಾ ನಗರ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸುಮಾರು 2,919 ಕೋಟಿ ರೂ. ಹಣ ಮೀಸಲಿಡಲಾಗಿದೆ. ಅಹಮದಾಬಾದ್, ಚೆನ್ನೈ,

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಬೆಂಗಳೂರು, ದೆಹಲಿ, ಕೋಲ್ಕತ್ತಾ, ಹೈದರಾಬಾದ್, ಲಕ್ನೋ, ಮುಂಬೈ ನಗರಗಳನ್ನು ಸುರಕ್ಷತಾ ನಗರ ಯೋಜನೆಗೆ ಆರಿಸಲಾಗಿದೆ.